ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ- ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ (ಅಭಿವೃದ್ಧಿ ಅಧ್ಯಯನ) ಪದವಿಗಾಗಿ
ಅರ್ಪಿಸಿದ ನಿಬಂಧ

ಸಂಶೋಧಕರು

ಪುಷ್ಪ

ಮಾರ್ಗದರ್ಶಕರು

ಡಾ. ಸರಿತಾ ಕೆ.

ಸಹಾಯಕ ಪ್ರಾಧ್ಯಾಪಕರು

ಸಮಾಜಶಾಸ್ತ್ರ ವಿಭಾಗ

ಬೆಸೆಂಟ್ ಮಹಿಳಾ ಕಾಲೇಜು ಕೊಡಿಯಾಲ್ ಬೈಲ್ ಮಂಗಳೂರು

೨೦೧೨

ನೋಂದಣಿ ಸಂಖ್ಯೆ : ೧೬೧೧೧೧೪೬೦೦೫೨

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು - ೫೭೫೦೦೧

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ- ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್(ಅಭಿವೃದ್ಧಿ ಅಧ್ಯಯನ) ಪದವಿಗಾಗಿ ಅರ್ಪಿಸುವ ನಿಬಂಧ

ಸಂಶೋಧಕರು

ವಿದ್ಯಾ

VIDYA

ಮಾರ್ಗದರ್ಶಕರು

ಡಾ|| ಸುಧಾ.ಕೆ

Dr. SUDHA.K

ಸಹಾಯಕ ಪ್ರಾಧ್ಯಾಪಕರು

ವಾಣಿಜ್ಯ ಶಾಸ್ತ್ರ ವಿಭಾಗ

ಬೆಸೆಂಟ್ ಮಹಿಳಾ ಕಾಲೇಜು ಕೊಡಿಯಾಲ್ ಬೈಲ್ ಮಂಗಳೂರು

೨೦೧೭

ನೊಂದಣಿ ಸಂಖ್ಯೆ ೧೬೧೧೧೧೦೩೦೦೫೨

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು -೫೭೫೦೦೧

ದೃಢೀಕರಣ ಪತ್ರ

ವಿದ್ಯಾ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ – ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿರುತ್ತಾರೆ. ಈ ನಿಬಂಧವು ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ.ಇವರು ಈ ನಿಬಂಧವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ಸ್ಥಳ:ಮಂಗಳೂರು

ದಿನಾಂಕ: 18.08.2017

ಡಾ|| ಸುಧಾ.ಕೆ

ಸಂಶೋಧನಾ ಮಾರ್ಗದರ್ಶಕರು

Dr. SUDHA K. Ph.D.,
Dept. of Commerce
Besant Women's College
MANGALORE - 575 003.

ಪ್ರಮಾಣ ಪತ್ರ

ಕನ್ನಡ ವಿಶ್ವ ವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ "ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ – ಒಂದು ಅಧ್ಯಯನ "ಎಂಬ ಈ ನಿಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ಥೀಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ॥ ಸುಧಾ.ಕೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ನಿಬಂಧವನ್ನು ಬೇರಾವುದೇ ಪದವಿ ಅಥವಾ ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಲಾಭಕ್ಕಾಗಿ ಆರ್ಥಿಕ ಲಾಭಕ್ಕಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

Vidya

ವಿದ್ಯಾ

ಸಂಶೋಧಕರು

ಪರಿವಿಡಿ

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ-ಒಂದು ಅಧ್ಯಯನ

ಅಧ್ಯಾಯ- ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

೧.೧ ಪ್ರಸ್ತಾವನೆ :

ಸರ್ಕಾರಗಳನ್ನು ಮತ್ತು ಅವುಗಳ ಪ್ರಕಾರ್ಯಗಳನ್ನು ರಾಷ್ಟ್ರೀಯ, ಪ್ರಾಂತೀಯ ಅಥವಾ ರಾಜ್ಯ ಮತ್ತು ಸ್ಥಳಿಯವೆಂದು ವಿಂಗಡಿಸಬಹುದಾಗಿದೆ. ಯಾವುದಾದರೂ ಹಳ್ಳಿ, ಊರು ಅಥವಾ ಪಟ್ಟಣದ ವ್ಯಾಪ್ತಿ ಅಥವಾ ಸಮುದಾಯ ಆಡಳಿತವನನ್ನು ಸ್ಥಳಿಯ ನಿವಾಸಿಗಳಿಗೆ ಪ್ರಾತಿನಿಧ್ಯವಿರುವ ಸಂಸ್ಥೆಯು ಸಾಕಷ್ಟು ಸ್ವಯಂಮಾದಿಕಾರ ಹೊಂದಿದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಟ್ಟಕ್ಕೆ ಸೇರದೆ ಸ್ಥಳಿಯ ಎನಿಸಿಕೊಳ್ಳುವ ಸೌಲಭ್ಯವನ್ನು ಒದಿಗಿಸುತ್ತಿದ್ದರೆ ಅದು ಸ್ಥಳಿಯ ಸ್ವಯಮಾಡಳಿತ ಎನಿಸಿಕೊಳ್ಳುತ್ತದೆ (ಮೂರ್ತಿ, 2010).

ಇವುಗಳು ನಗರಗಳಲ್ಲಿ ವಾಸಿಸುವ ಜನರಿಗೆ ರಾಜಕೀಯ ತರಬೇತಿ ಕೊಡುವ ಅತ್ಯುತ್ತಮ ಶಾಲೆಯಾಗಿದೆಯಲ್ಲದೆ ಸಮಾಜ ಸೇವೆಯ ಶಾಲೆಯಂತೆಯೂ ಇದ್ದು ಸಾಮಾಜಿಕ ಪ್ರಗತಿಯಲ್ಲಿ ಅತ್ಯಂತ ಸಮರ್ಥ ಪಾತ್ರವನ್ನು ವಹಿಸುತ್ತದೆ.

ಸ್ಥಳೀಯ ಸ್ವಯಂ ಸರ್ಕಾರ ಸಿದ್ಧಾಂತವು ಪ್ರಾಚೀನ ರಾಜಮನೆತನದ ಮತ್ತು ಸಾಮ್ರಾಜ್ಯಗಳಷ್ಟೇ ಹಳೆಯದಾಗಿದೆ. ಪ್ರಾಚೀನ ಕಾಲದಲ್ಲೂ ಹಲವಾರು ಸಾಮ್ರಾಜ್ಯಗಳಲ್ಲಿ ಉತ್ತಮ ಸ್ಥಳೀಯ ಸರ್ಕಾರ ವ್ಯವಸ್ಥೆ ರೂಢಿಯಲ್ಲಿತ್ತು. ನೂತನ ಸಾರ್ವಭೌಮ ರಾಜ್ಯಗಳ ಹುಟ್ಟಿನಿಂದಾಗಿ ಸ್ಥಳೀಯ ಸರ್ಕಾರ ಸಿದ್ಧಾಂತಕ್ಕೆಪ್ರಾಮುಖ್ಯತೆ ದೊರೆಯಿತು. ಆಧುನಿಕ ರಾಜ್ಯಗಳು ಬೃಹತ್ ರಾಜ್ಯಗಳಾಗಿದ್ದರಿಂದ ಪರಿಣಾಮಕಾರಿ ಆಡಳಿತವು ಕಷ್ಟವಾಗುವುದರ ಜೊತೆಗೆ ಪ್ರಜೆಗಳು ಸರ್ಕಾರದಿಂದ ದೂರ ಉಳಿಯುವಂತೆ ಮಾಡಿತು.

ಬಹುತೇಕ ರಾಜ್ಯಗಳು ಪೊಲೀಸ್ ರಾಜ್ಯಗಳಾಗಿದ್ದು ಈಗ ಕಲ್ಯಾಣ ರಾಜ್ಯಗಳಾಗಿ ಪರಿವರ್ತನೆಯಾಗುತ್ತಿರುವುದು ಸ್ಥಳಿಯ ಸ್ವಯಂ ಸರ್ಕಾರ ಸಿದ್ಧಾಂತವನ್ನು ಮತ್ತಷ್ಟು ಬಲಪಡಿಸಿದೆ.

ಸ್ಥಳೀಯ ಸ್ವಯಂ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್‌ಗಳ ಜೊತೆಗೆ ನಗರಸಭೆ, ಪುರಸಭೆ, ಜಿಲ್ಲಾ ಮಂಡಳಿಗಳು ಮತ್ತು ಇತರ ಸಂಸ್ಥೆಗಳೂ ಸೇರಿ ಕೊಂಡಿರುತ್ತದೆ.ಇವೆಲ್ಲ ಸಂಸ್ಥೆಗಳು ನಿರ್ದಿಷ್ಟ ವ್ಯಾಪ್ತಿ ಅಥವಾ ಪ್ರದೇಶದಲ್ಲಿ ತೀರ್ಮಾನಗಳನ್ನು ಕೈಗೊಂಡು ಅನುಷ್ಠಾನಕ್ಕೆ ತರುತ್ತದೆ. ಹೀಗೆ

ಸರಕಾರಗಳು ನಿರ್ದಿಷ್ಟವಾದ ಭೂಪ್ರದೇಶ, ಜನಸಂಖ್ಯೆ, ಸಂಘಟನ್ಕಿಹೊಂದಿದ್ದು ಸಾರ್ವಜನಿಕ ಸಂಕ್ಷೇಮ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರವಿರುತ್ತದೆ.

ಅಲ್ಲದೆ ಈ ವ್ಯವಸ್ಥೆಯು ಪ್ರಜೆಗಳು ತಮ್ಮ ಸಮಸ್ಯೆಗಳನ್ನು ತಮ್ಮದೇ ಆದ ಪ್ರಯತ್ನದಿಂದ ಪರಿಹರಿಸಿಕೊಳ್ಳುವ ಅವಕಾಶ ಒದಗಿಸಿದೆ.ಇದರಿಂದಾಗಿ ಪ್ರಜೆಗಳಲ್ಲಿ ನಾಯಕತ್ವ, ಸ್ವಪ್ರಯತ್ನ, ಸಾರ್ವಜನಿಕ ಸ್ಫೂರ್ತಿ ಮತ್ತು ಉದ್ಯಮಶೀಲತೆ ಇತ್ಯಾದಿ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗಿದೆ. (ಕುಮಾರ್, ಪೂರ್ಣಿಮ 2007).

ಸ್ಥಳಿಯ ಸರ್ಕಾರ ವ್ಯವಸ್ಥೆಯಲ್ಲಿ ಮುಖ್ಯವಾಗಿ 2 ವಿಭಾಗಳನ್ನಾಗಿ ಮಾಡಲಾಗಿದೆ. ಅವುಗಳೆಂದರೆ

1. ಗ್ರಾಮೀಣ ಸ್ವಯಂ ಆಡಳಿತ ಸಂಸ್ಥೆಗಳು
2. ನಗರ ಸ್ವಯಂ ಆಡಳಿತ ಸಂಸ್ಥೆಗಳು

ಆದುದರಿಂದ ಸ್ಥಳೀಯ ಸರಕಾರ ಎಂಬುದು ಬರಿಯ ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿರದೆ ನಗರಾಡಳಿತ ವ್ಯವಸ್ಥೆಯು ಕೂಡಾ ಸ್ಥಳೀಯ ಸರಕಾರ ವ್ಯವಸ್ಥೆಯ ಜೊತೆಗೆ ಕಾರ್ಯಾಚರಿಸುವ ಒಂದು ಅಂಗ ಸಂಸ್ಥೆಯಾಗಿದೆ ಎಂದು ಹೇಳಬಹುದು (ದೇವೆಗೌಡ, 2005).

ಸಂವಿಧಾನದ 74ನೇ ತಿದ್ದುಪಡಿಯು ಅಧಿನಿಯಮ 1992 ನಗರ ಪ್ರದೇಶಗಳ ಜನತೆಗಾಗಿ ಸ್ಥಳೀಯ ಸ್ವಾಯತ್ತ ಸರ್ಕಾರಗಳ ರಚನೆಯ ರೂಪಿಸುವಿಕೆಯನ್ನು ಚಿಂತಿಸಿದೆ.ತಿದ್ದುಪಡಿ ನಗರಾಡಳಿತ ಸುಧಾರಣೆಗಳಿಗೆ ಹೊಸ ಅವಕಾಶವನ್ನು ಮಾಡಿಕೊಟ್ಟಿದೆ. ಹಾಗೂ ಸ್ಥಳೀಯ ಹಂತದ ಆಡಳಿತದಲ್ಲಿ ಪ್ರಜಾಪ್ರಭುತ್ವದ ರಚನೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

೧.೨ ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳೆ

ಸರ್ಕಾರವು ಒಂದು ಪ್ರದೇಶವನ್ನು ಕೆಲವು ಮಾಪನಗಳ ಆಧಾರದ ಮೇಲೆ ಸರ್ಕಾರಿ ಪ್ರಕಟನೆಯ ಮೂಲಕ ನಗರ ಎಂದು ಘೋಷಿಸಬಹುದು. ನಗರ ಪಾಲಿಕೆಗಳು ನಗರಗಳಲ್ಲಿ ಮತ್ತು ಪುರಸಭೆಯು ನಗರ ಮತ್ತು ಪಟ್ಟಣಗಳೆರಡರಲ್ಲಿಯೂ ಕಾಣುತ್ತೇವೆ.

ಕರ್ನಾಟಕದಲ್ಲಿ ನಗರ ಪಾಲಿಕೆಗಳನ್ನು ಕರ್ನಾಟಕ ಮುನಿಸಿಪಾಲ್ ಕಾರ್ಪೋರೇಶನ್ ಕಾಯಿದೆ 1976 ರ ಮೂಲಕ ಸ್ಥಾಪಿಸಲಾಯಿತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ನಗರ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ನೀಡಲಾಗುತ್ತದೆ. ಮಹಿಳಾ ಮೀಸಲಾತಿಯ 1/3 ರಷ್ಟು ಸ್ಥಾನಗಳಲ್ಲಿ ನೀಡಲಾಗಿದೆ (ಭಾರತಿ, 2011).

ಮಹಾನಗರ ಪಾಲಿಕೆಯಲ್ಲಿ ಮಹಿಳೆಯು ಅತ್ಯಂತ ಮಹತ್ತರವಾದ ಪಾತ್ರವನ್ನು ವಹಿಸುತ್ತಿದ್ದಾಳೆ. ಇಂದಿನ ಆಧುನಿಕ ಯುಗದಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ

ದೊರಕಲ್ಪಟ್ಟಿರುವುದರಿಂದಾಗಿ ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸುತ್ತಿದ್ದಾಳೆ. ಹಾಗಾಗಿ ಮಹಿಳೆಯು ಆಡಳಿತದಲ್ಲೂ ಸಕ್ರಿಯವಾಗಿ ಪಾತ್ರ ವಹಿಸುತ್ತಿರುವುದನ್ನು ಇಂದಿನ ರಾಜಕೀಯ ಆಡಳಿತದಲ್ಲಿ ಕಾಣಬಹುದಾಗಿದೆ.

ನಗರಗಳು ಬೆಳೆಯುತ್ತಾ ಹೋದಂತೆ ನಗರಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ದೊರಕುತ್ತಿರುವುದನ್ನು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಶಿಕ್ಷಣಕ್ಕೆ, ಮಹಿಳೆಯರು ಉನ್ನತ ಶಿಕ್ಷಣವನ್ನು ಪಡೆಯಲು ನಗರ ಪ್ರದೇಶಗಳು ಮಹಿಳೆಯರಿಗೆ ಅವಕಾಶವನ್ನು ಮಾಡಿಕೊಡುತ್ತಿದೆ. ಹೀಗೆ ಶಿಕ್ಷಿತಳಾದ ಮಹಿಳೆಯ ನಗರಾಡಳಿತದ ಚಟುವಟಿಕೆಯಲ್ಲಿಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿದೆ. ಆದುದರಿಂದ ಗ್ರಾಮೀಣ ಪ್ರದೇಶಗಳಿಗೆ ಹೋಲಿಕೆಯನ್ನು ಮಾಡಿದರೆ ನಗರಾಡಳಿತದಲ್ಲಿ ಮಹಿಳೆಯು ಭಾಗವಹಿಸುವಿಕೆಯು ಉತ್ತಮವಾಗಿರುವುದನ್ನು ಕಾಣಬಹುದು.

ರಾಜ್ಯದ ವಿವಿಧ ಜಿಲ್ಲೆಗಳಿಗೆ ಸಂಬಧಿಸಿದಂತೆ ನಗರ ಪಾಲಿಕೆಯಲ್ಲಿ ಮಹಿಳೆಯು ತನ್ನ ನಿರಂತರ ಕಾರ್ಯಚಟುವಟಿಕೆಯಿಂದ ಯಶಸ್ಸನ್ನು ಸಾಧಿಸಿರುವುದನ್ನು ಕಾಣಬಹುದಾಗಿದೆ. ಈ ಮೂಲಕ ಮಹಾನಗರ ಪಾಲಿಕೆಯಲ್ಲಿ ಮಹಿಳೆಯು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತಿದ್ದಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ಈ ಮೂಲಕ ಪುರುಷರಿಗೆ ಸರಿಸಮಾನವಾಗಿ ಉತ್ತಮ ಆಡಳಿತವನ್ನು ನಡೆಸುತ್ತಿರುವುದು ಸಮಾಜಕ್ಕೆ ಒಳಿತನ್ನು ಸಾಧಿಸುವ ವಿಷಯವಾಗಿದೆ.

ಮಹಿಳಾ ಮೀಸಲಾತಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಅಡಿಗೆ ಮನೆಗೆ ಸೀಮಿತವಾಗಿದ್ದ ಮಹಿಳೆಯರು ಈ ಸಂಸ್ಥೆಗಳಲ್ಲಿ ಆಡಳಿತ ಸೂತ್ರವನ್ನು ಹಿಡಿಯುವಂತಾಯಿತು ಇದರಿಂದ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ಪ್ರತಿಷ್ಠೆ ಹೆಚ್ಚಾಗಿದೆ ಎಂಬುದನ್ನು ಹಲವಾರು ಅಧ್ಯಯನಗಳು ಸ್ಪಷ್ಟಪಡಿಸಿದೆ (ಭಾರತಿ, 2011)

ಕಳೆದ ಹತ್ತು ವರ್ಷಗಳಲ್ಲಿ ನಗರ ಪಾಲಿಕೆಯಲ್ಲಿ ಮಹಿಳೆಯರ ಪ್ರತಿನಿಧಿಕರಣ ಚುನಾವಣೆಯಿಂದ ಚುನಾವಣೆಗೆ ಹೆಚ್ಚುತ್ತಿದೆ. ತಳಮಟ್ಟದ ವಿಕೇಂದ್ರಿಕೃತ ಆಡಳಿತ ರಚನೆಯಾದ ಮಹಾನಗರ ಪಾಲಿಕೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ, ನಿರ್ಣಯ ಕೈಗೊಳ್ಳುವಲ್ಲಿ ಪಾತ್ರ ಮತ್ತು ಯೋಜನೆಯನ್ನು ರೂಪಿಸುವಲ್ಲಿ ಇವರ ಸಹಭಾಗಿತ್ವಕ್ಕೆ ಹೆಚ್ಚು ಗಮನವನ್ನು ಹರಿಸಲಾಗಿದೆ.

ನಗರಪಾಲಿಕೆಯಲ್ಲಿ ವೈಯಕ್ತಿಕ ನೆಲೆಯಲ್ಲಿ ಚುನಾಯಿತ ಮಹಿಳೆಯರು ತಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಂಡಿದ್ದಾರೆ.ಕುಟುಂಬದಿಂದ ಹೊರಬಂದು ಕೆಳವರ್ಗದ ಮಹಿಳೆಯರು ಸಮಾಜದ ಎಲ್ಲಾ ವರ್ಗಗಳ ಮಹಿಳೆಯರ ಸಂಬಂಧದೊಂದಿಗೆ ತಮ್ಮ ತಿಳುವಳಿಕೆಯ ಮಟ್ಟವನ್ನು ಸುಧಾರಿಸಿಕೊಂಡಿದ್ದಾರೆ.ತಾವು ಪಡೆದ ಅಧಿಕಾರದಿಂದ ಸ್ಥಳೀಯ ಆಡಳಿತ ಬಗ್ಗೆ ಜಾಗೃತರಾಗಿದ್ದಾರೆ.ನಗರ ಪಾಲಿಕೆಯ ಮಾಸಿಕ ಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಭೆಗೆ ಮಹತ್ವ ತಂದುಕೊಟ್ಟಿದೆ.

ಮಹಿಳೆಯರ ಬೇಡಿಕೆ ಕುಡಿಯುವ ನೀರು, ಮಕ್ಕಳಿಗೆ ಶಾಲೆ, ಶೌಚಾಲಯ, ಆರೋಗ್ಯ ಕೇಂದ್ರ ಮತ್ತು ಕುಟುಂಬ ಯೋಜನೆಗಳು ಆಗಿವೆ. ಅಭಿವೃದ್ಧಿಯಲ್ಲಿ ಈ ಬೇಡಿಕೆಗಳ ಆದ್ಯತೆ ಪಟ್ಟಿಯಲ್ಲಿ ಇವೆ. ಆದರೆ ನಗರ ಪಾಲಿಕೆಯಲ್ಲಿ ಮಹಿಳೆಯರು ತಮ್ಮ ಕೆಲಸವನ್ನು ನಿರ್ವಹಿಸುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ನಗರಗಳಲ್ಲಿ ಇರುವ ಜಾತೀಯತೆ, ರಾಜಕೀಯ, ಹಣಬಲ, ತೋಳುಬಲಗಳ ಪ್ರತಿಷ್ಟೆಯನ್ನು ಹೊಂದಿದ್ದು ಇಂತಹ ಸ್ಥಿತಿಗಳಲ್ಲಿ ಪಾಲಿಕೆಯ ಸಭೆಗಳಲ್ಲಿ ಮಹಿಳೆಯರು ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಅಸಮರ್ಥರಾಗಿದ್ದಾರೆ. ಅಲ್ಲದೆ ಮಹಿಳೆಯರ ಆರ್ಥಿಕ ಪರಾವಲಂಬನೆ, ಆಡಳಿತದಲ್ಲಿ ತರಬೇತಿ, ಮಾರ್ಗದರ್ಶನದ ಕೊರತೆ ಮತ್ತು ಅಧಿಕಾರವನ್ನು ಹಂಚಿಕೊಳ್ಳಲು ನಿರಾಕರಿಸುವ ಪುರುಷ ಪ್ರಧಾನ ಮೌಲ್ಯ ಮತ್ತು ಆಡಳಿತ ವ್ಯವಸ್ಥೆಯಲ್ಲಿನ ದೋಷವು ಕಾರಣ ಆಗಿದೆ.(ದೇವೆಗೌಡ, 2010).

೧.೩ ಮಹಾನಗರ ಪಾಲಿಕೆಯ ಚಿತ್ರಣ

ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976 ರನ್ವಯ (2,00,000) ಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ನಗರ ಸ್ಥಳೀಯ ಸಂಸ್ಥೆಯನ್ನು ಮಹಾನಗರ ಪಾಲಿಕೆಯೆಂದು ಕರೆಯಲಾಯಿತು.

ನಗರ ಸ್ಥಳೀಯ ಸಂಸ್ಥೆಗಳನ್ನು ಏಕರೂಪವಾಗಿ ನಿರ್ದಿಷ್ಟಪಡಿಸುವ ಹಿನ್ನಲೆಯಲ್ಲಿನ (1992) ರ (74) ನೇ ತಿದ್ದುಪಡಿ ಅಧಿನಿಯಮ ಭಾರತ ಸಂವಿಧಾನಕ್ಕೆ (9) ಎ ಎಂಬ ಹೊಸ ಭಾಗವನ್ನು ಸೇರಿಸಿದೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ (1976) ರ ಪರಿಚ್ಛೇದ 2 (3) ರ ಅನ್ವಯ ಒಂದು ನಗರ ಪ್ರದೇಶವನ್ನು ದೊಡ್ಡ ನಗರ ಪ್ರದೇಶವೆಂದು ನಿರ್ದಿಷ್ಟ ಪಡಿಸುವಲ್ಲಿ ಈಕೆಳಕಂಡ ಅಂಶಗಳನ್ನು ಪರಿಗಣಿಸಲಾಗುತ್ತದೆ.

1. ಆ ಪ್ರದೇಶದ ಜನಸಂಖ್ಯೆ 3,00,000 ಲಕ್ಷಕ್ಕಿಂತ ಕಡಿಮೆ ಇರಬಾರದು.
2. ಆ ಪ್ರದೇಶದ ಜನಸಾಂದ್ರತೆ ಒಂದು ಚದರ ಕಿಲೋ ಮೀಟರಿನಲ್ಲಿ 3,000 ಕ್ಕಿಂತ ಕಡಿಮೆ ಇರಬಾರದು.
3. ಅಂತಹ ಪ್ರದೇಶದಲ್ಲಿ ಸ್ಥಳೀಯ ಆಡಳಿತಕ್ಕಾಗಿ ಹಿಂದಿನ ಜನಗಣತಿ ವರ್ಷದಲ್ಲಿ ದೊರಕುವ ಅನುದಾನವು (600) ಕೋಟಿ ರೂ ಗಳಿಗಿಂತ ಕಡಿಮೆಯಾಗಿರಕೂಡದು. ಅಥವಾ ತಲಾ ಆದಾಯ 200 ಕ್ಕಿಂತ ಕಡಿಮೆಯಾಗಿರಕೂಡದು ಈ ಎರಡು ಅಂಶಗಳಲ್ಲಿ ಯಾವುದು ಹೆಚ್ಚಾಗಿರುತ್ತದೋ ಅದನ್ನು ಪರಿಗಣಿಸತಕ್ಕದ್ದು.
4. ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾವಾರು ಪ್ರಮಾಣ ಕನಿಷ್ಟ 50 ಕ್ಕಿಂತ ಹೆಚ್ಚಾಗಿರಬೇಕು

ಈ ಅಂಶಗಳನ್ನು ಪರಿಗಣಿಸಿ ಸಂಬಧಿಸಿದ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿದ ತರುವಾಯ ಅಂತಹ ಪ್ರದೇಶವನ್ನು ದೊಡ್ಡ ನಗರ ಪ್ರದೇಶವೆಂದು ರಾಜ್ಯಪಾಲರು ಉದ್ಘೋಷಿಸುತ್ತಾರೆ. ಇಂತಹ ದೊಡ್ಡ ನಗರ ಪ್ರದೇಶವನ್ನು ಮಹಾನಗರ ಪಾಲಿಕೆಯೆಂದು ಕರೆಯಲಾಗುತ್ತದೆ.

೧.೩.೧ ಸ್ಥಾನಗಳ ಮೀಸಲಾತಿ

ನಗರ ಸ್ಥಳೀಯ ಸಂಸ್ಥೆಯು ಮಹಾನಗರ ಪಾಲಿಕೆಗಳಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಮಹಿಳೆಯರಿಗೆ ಸ್ಥಾನಗಳ ಮೀಸಲಾತಿಗೆ ಅಧಿನಿಯಮಗಳಲ್ಲಿ ಉಪನಿಬಂಧನೆಗಳನ್ನು ಕಲ್ಪಿಸಲಾಗಿದೆ. ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಿಟ್ಟ ಸ್ಥಾನಗಳನ್ನು ಪೌರಸಭೆಗಳ ವಿವಿಧ ವಾರ್ಡುಗಳಲ್ಲಿ ಸರದಿ ಪ್ರಕಾರ ಹಂಚಿಕೆ ಮಾಡಬಹುದಾಗಿದೆ.ಅದರಂತೆ ಮಹಿಳೆಯರಿಗೆ ಅಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ಸಹ ಮಾಡಲು ಉಪನಿಬಂಧನೆಗಳನ್ನು ಕಲ್ಪಿಸಲಾಗಿದೆ (ಕುಮಾರ್, ಪೂರ್ಣಿಮ 2011).

ನಗರ ಪಾಲಿಕೆಗಳು

ರಾಜ್ಯದಲ್ಲಿ ಹತ್ತು ಮಹಾನಗರ ಪಾಲಿಕೆಗಳು ಇವೆ

1. ಬಳ್ಳಾರಿ ಮಹಾನಗರ ಪಾಲಿಕೆ
2. ಬೆಳಗಾವಿ ಮಹಾನಗರ ಪಾಲಿಕೆ
3. ದಾವಣಗೆರೆ ಮಹಾನಗರ ಪಾಲಿಕೆ
4. ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ
5. ಕಲಬುರಗಿ ಮಹಾನಗರ ಪಾಲಿಕೆ
6. ಮೈಸೂರು ಮಹಾನಗರ ಪಾಲಿಕೆ
7. ಮಂಗಳೂರು ಮಹಾನಗರ ಪಾಲಿಕೆ
8. ಶಿವಮೊಗ್ಗ ಮಹಾನಗರ ಪಾಲಿಕೆ
9. ತುಮಕೂರು ಮಹಾನಗರ ಪಾಲಿಕೆ
10. ವಿಜಯಪುರ ಮಹಾನಗರ ಪಾಲಿಕೆ

ಇತ್ತೀಚೆಗೆ 2008 ಸೆಪ್ಟೆಂಬರ್ 23 ಬಳ್ಳಾರಿಯನ್ನು ಮಹಾನಗರ ಪಾಲಿಕೆಯೆಂದು ಮಾರ್ಪಡಿಸಿ ಆದೇಶ ಹೊರಡಿಸಿದೆ. ಸಂವಿಧಾನದ 34ನೇ ತಿದ್ದುಪಡಿಗನುಸಾರವಾಗಿ ಸರ್ಕಾರವು ನಗರ ಪಾಲಿಕೆಗಳನ್ನು ಹೊರತುಪಡಿಸಿ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಾಗಿ ಸ್ಥಳೀಯ ಸಂಸ್ಥೆಗಳನ್ನು ವರ್ಗೀಕರಿಸಿದೆ (ವಿವೇಕ 2012).

೧.೩.೨ ರಚನೆ

ನಗರ ಪಾಲಿಕೆಯ ರಚನೆಯು ಈ ಕೆಳಕಂಡಂತೆ ಇರುತ್ತದೆ.

1. ಸಾಮಾನ್ಯ ಸಮಿತಿ(ಕಾರ್ಪೋರೇಷನ್ ಸಮಿತಿ)
2. ಸ್ಥಾಯಿ ಸಮಿತಿಗಳು
3. ಕಮೀಷನರ್

ಸಾಮಾನ್ಯ ಸಮಿತಿ

ಕಾರ್ಪೋರೇಷನ್ನಿನ ಸಾಮಾನ್ಯ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರುತ್ತದೆ.

1. ನಗರದ ನಾನಾ ವಿಭಾಗ (ವಾರ್ಡು) ಗಳಿಂದ ಜನರಿಂದ ಆಯ್ದು ಬಂದ ಪ್ರತಿನಿಧಿಗಳು 1976 ರ ಕಾಯಿದೆಯ ಪ್ರಕಾರ ನಗರ ಪಾಲಿಕೆಯಲ್ಲಿ ಪ್ರತಿನಿಧಿಸಿರುವ ಸದಸ್ಯರ ಸಂಖ್ಯೆ 30 ಕ್ಕಿಂತ ಕಡಿಮೆ ಇರಬಾರದು. ಮತ್ತು 100 ಕ್ಕಿಂತ ಹೆಚ್ಚಬಾರದು ಕೌನ್ಸಿಲರ್ (ಸದಸ್ಯ) ಗಳ ಸಂಖ್ಯೆಯನ್ನು ಜನಸಂಖ್ಯೆಯ ಆಧಾರದ ಮೇಲೆ ರಾಜ್ಯ ಸರಕಾರ ನಿರ್ಧರಿಸುತ್ತದೆ.
2. ನಗರ ಸಭೆಯನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಪ್ರತಿನಿಧಿಸುವ ರಾಜ್ಯ ಲೋಕಸಭಾ ಸದಸ್ಯರು ಮತ್ತು ವಿಧಾನಸಭಾ ಸದಸ್ಯರು.
3. ಮುನ್ಸಿಪಾಲ್ ಆಡಳಿತದಲ್ಲಿ ಸಾಕಷ್ಟು ಅನುಭವ ಅಥವಾ ತಿಳುವಳಿಕೆ ಹೊಂದಿರುವ ಅಥವಾ ನಗರ ಯೋಜನೆ ಶಿಕ್ಷಣ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ ಹೊಂದಿರುವ 5 ಜನರನ್ನು ರಾಜ್ಯ ಸರಕಾರ ನೇಮಿಸುತ್ತದೆ ಆ ಸದಸ್ಯರು 5 ವರ್ಷಗಳ ಕಾಲ ಅಧಿಕಾರದಲ್ಲಿದ್ದು ನಗರ ಪಾಲಿಕೆಯ ಸಭೆಗಳಲ್ಲಿ ಭಾಗವಹಿಸಬಹುದು ಆದರೆ ಮತ ಚಲಾಯಿಸುವ ಅಧಿಕಾರ ಹೊಂದಿರುವುದಿಲ್ಲ (ಕುಮಾರ್, ಪೂರ್ಣಿಮ 2011)

೧.೩.೩ <u>ಚುನಾವಣೆ</u>: ಸಾಮಾನ್ಯ ಸಮಿತಿಯ ಸದಸ್ಯರು ಪ್ರಜೆಗಳಿಂದ ಪ್ರತ್ಯಕ್ಷವಾಗಿ ವಯಸ್ಕ ಮತದಾನ ಪದ್ಧತಿಯ ಮೂಲಕ ಆಯ್ಕೆಯಾಗುತ್ತಾರೆ. ಮತದಾನವು ರಹಸ್ಯ ಮತದಾನವಾಗಿರುತ್ತದೆ ಚುನಾವಣೆಯ ಉದ್ದೇಶಕ್ಕಾಗಿ ಇಡೀ ನಗರ ಪಾಲಿಕೆಯನ್ನು ಜನಸಂಖ್ಯೆಯ ಆಧಾರದ ಮೇಲೆ ವಿವಿಧ ವಿಭಾಗ (ವಾರ್ಡು) ಗಳಾಗಿ ವಿಂಗಡಿಸಲಾಗುತ್ತದೆ ನಗರ ಪಾಲಿಕಾ ಚುನಾವಣೆಯಲ್ಲಿ ಆಯ್ದು ಬರುವ ಸದಸ್ಯರನ್ನು ನಗರ ಪಾಲಿಕಾ ಸದಸ್ಯ ಅಥವಾ ಕೌನ್ಸಿಲರ್ ಎನ್ನುತ್ತಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿ ನಗರದ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿ ನೀಡಲಾಗುತ್ತದೆ.

ಮೀಸಲಾತಿಯ ಪರಿಶಿಷ್ಟ ಜಾತಿಗೆ 15%, ಪರಿಶಿಷ್ಟ ಪಂಗಡ 3%, ಹಿಂದುಳಿದ ವರ್ಗಗಳಿಗೆ 1/3 ರಷ್ಟು ಮತ್ತು ಮಹಿಳೆಯರಿಗೆ 1/3 ರಷ್ಟು ಸ್ಥಾನಗಳಿಗಿಂತ ಕಡಿಮೆ ಇರಬಾರದು. (ಕುಮಾರ್, ಪೂರ್ಣಿಮ, 2007)

೧.೩.೪ ಅರ್ಹತೆಗಳು:

1. 21 ವರ್ಷ ವಯಸ್ಸಾಗಿರಬೇಕು
2. ನಗರದ ಯಾವುದಾದರೂ ವಾರ್ಡಿನ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿರಬೇಕು
3. ಮೀಸಲಾಗಿರುವ ಸ್ಥಾನಗಳಿಗೆ ಆಯಾ ಜಾತಿ ಮತ್ತು ವರ್ಗದವರೇ ಸ್ಪರ್ಧಿಸಬೇಕು.

ಅಧಿಕಾರವಧಿ: ನಗರ ಪಾಲಿಕೆಯ ಸದಸ್ಯರು 5 ವರ್ಷ ಕಾಲಾವಧಿಗೆ ಆಯ್ಕೆಯಾಗುತ್ತಾರೆ ಆದರೆ ನಗರ ಪಾಲಿಕೆಯ ಅಧಿಕಾರಾವಧಿಯನ್ನು ಒಂದು ವರ್ಷಕ್ಕೆ ಮೀರದಂತೆ ರಾಜ್ಯ ಸರ್ಕಾರವು ಸರ್ಕಾರಿ ಆದೇಶದ ಮೂಲಕ ವಿಸ್ತರಿಸಬಹುದು.

ಪದಾಧಿಕಾರಿಗಳು:

ಮಹಪೌರರು (ಮೇಯರ್) ಮತ್ತು ಉಪಮಹಪೌರ (ಉಪ ಮೇಯರ್) ಮಹಾನಗರ ಪಾಲಿಕೆಯ ಪ್ರಮುಖ ಪದಾಧಿಕಾರಿಗಳಾಗಿರುತ್ತಾರೆ.

೧.೩.೫ ಮೇಯರ್:

ನಗರ ಪಾಲಿಕೆಯ ಚುನಾವಣೆಯ ನಂತರ ನಡೆಯುವ ಮೊದಲ ನಗರ ಪಾಲಿಕಾ ಸಭೆಯಲ್ಲಿ ನಗರ ಪಾಲಿಕಾ ಸದಸ್ಯರು ತಮ್ಮಲ್ಲಿಯೇ ಒಬ್ಬ ಮೇಯರ್ ಮತ್ತು ಉಪಮೇಯರನ್ನು ಚುನಾಯಿಸುತ್ತಾರೆ ಇವರು 1 ವರ್ಷದ ಅವಧಿಗೆ ಆಯ್ಕೆಯಾಗುತ್ತಾರೆ ಅವರು ಪುನರ್ ಆಯ್ಕೆಯಾಗಲು ಅರ್ಹರಾಗಿರುತ್ತಾರೆ.

ನಗರದ ಗೌರವ ಮತ್ತು ಘನತೆಯನ್ನು ಪ್ರತಿಬಿಂಬಿಸುವ ನಗರದ ಪ್ರಥಮ ಪ್ರಜೆಯಾದ ಮೇಯರ್‌ನ ಕಾರ್ಯಗಳು ಈ ಕೆಳಕಂಡಂತೆ ಇರುತ್ತದೆ.

1. ಮಹಾನಗರ ಪಾಲಿಕೆಯ ಸಭೆಗಳ ಅಧ್ಯಕ್ಷತೆ ವಹಿಸುವುದು.
2. ಸಭೆಯ ಕಲಾಪಗಳು ಕ್ರಮಬದ್ಧವಾಗಿ ನಡೆಯುವಂತೆ ಸಭೆಯಲ್ಲಿ ಶಿಸ್ತು ಹಾಗೂ ಸಂಯಮವನ್ನು ಕಾಯುವುದು
3. ನಗರ ಪಾಲಿಕೆಯ ಎಲ್ಲಾ ಕಾರ್ಯವನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿರುವರು.

4. ಮೇಯರ್‌ರವರು ಆಯುಕ್ತರಿಗೆ ಕಾರ್ಯ ಪರಿವೀಕ್ಷಣೆಗೆ ನಿರ್ದೇಶನ ನೀಡಬಹುದು
5. ನಗರ ಪಾಲಿಕೆ ಅಥವಾ ಸ್ಥಾಯಿ ಸಮಿತಿಗಳಲ್ಲಿ ಆದಂತಹ ನಿರ್ಣಯಗಳ ಅನುಷ್ಠಾನಕ್ಕೆ ಕ್ರಮ ವಹಿಸುವುದು.
6. ಮೇಯರ್‌ರವರು ಯಾವುದಾದರೂ ಕಾರ್ಯವನ್ನು ಉಪಮೇಯರ್‌ರವರಿಗೆ ನಿಯೋಜಿಸುವ ಅಧಿಕಾರವನ್ನು ಹೊಂದಿರುವರು
7. ಮೇಯರ್ ಯಾವುದೇ ಸ್ಥಾತಿ ಸಮಿತಿಯ ಅಧ್ಯಕ್ಷರಾಗುವಂತಿಲ್ಲ.
8. ಸಾಮಾನ್ಯ ಸಮಿತಿಯ ಕೈಗೊಂಡ ನಿರ್ಣಯ ಮತ್ತು ತೀರ್ಮಾನಗಳು ಕಾರ್ಯರೂಪಕ್ಕೆ ತರುವಂತೆ ಮುನ್ಸಿಪಲ್ ಕಮಿಷನರಿಗೆ ನಿರ್ದೇಶನ ನೀಡುವುದು.
9. ನಗರದ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಅಥವಾ ಮಾಹಿತಿಯನ್ನು ತರಿಸಿಕೊಳ್ಳುವ ಅಧಿಕಾರ ಮಹಾಪೌರರಿಗಿದೆ.
10. ಪಾಲಿಕೆಯ ಸದಸ್ಯರು ಅವಶ್ಯಕ ಬಹುಮತದಿಂದ ಮನವಿ ಸಲ್ಲಿಸಿದ್ದಲ್ಲಿ ಸಾಮಾನ್ಯ ಸಮಿತಿಯ ವಿಶೇಷ ಸಭೆಯನ್ನು ಮಹಾಪೌರರು ಕರೆಯಬಹುದು.

ಹೀಗೆ ಮೇಯರ್‌ರವರು ಅನೇಕ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸಿವರು ಮೇಯರ್ ಯಾವುದೇ ಸಮಯದಲ್ಲಿ ಬೇಕಾದರೂ ರಾಜೀನಾಮೆ ನೀಡ ಬಯಸಿದ್ದಲ್ಲಿ ಸ್ವಂತ ಲಿಖಿತ ಬರವಣಿಗೆಯ ಮೂಲಕ ಉಪಮೇಯರ್‌ಗೆ ರಾಜೀನಾಮೆ ಪತ್ರವನ್ನು ಸಲ್ಲಿಸಬಹುದಾಗಿದೆ ಉಪಮೇಯರ್ ಇಲ್ಲದಿದ್ದಲ್ಲಿ ಆಯುಕ್ತರಿಗೆ ರಾಜೀನಾಮೆ ಸಲ್ಲಿಸಬಹುದಾಗಿದೆ (ಮಹಾದೇವ 2012).

ಉಪಮೇಯರ್:

ಇವರನ್ನು ಮೇಯರ್‌ರವರ ಆಯ್ಕೆಯ ಸಂದರ್ಭದಲ್ಲಿ ಸರ್ಕಾರ ನಿಗದಿಪಡಿಸುವ ಮೀಸಲಾತಿಗೆ ಬದ್ಧವಾಗಿ ಆಯ್ಕೆ ಮಾಡಲಾಗುತ್ತದೆ.

ಅಧಿಕಾರ ಮತ್ತು ಕಾರ್ಯಗಳು:

1. ನೂತನ ಮೇಯರ್ ಆಯ್ಕೆಯಾಗುವರೆಗೆ ಮೇಯರ್ ನಿರ್ವಹಿಸುತ್ತಿದ್ದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.
2. ಮೇಯರ್ ಸತತವಾಗಿ 8 ದಿವಸಗಳು ಹಾಗೂ ಅದಕ್ಕೂ ಹೆಚ್ಚು ದಿವಸ ಕಾರ್ಯ ನಿರ್ವಹಿಸಲು ಅಸಮರ್ಥರಾಗಿದ್ದರೆ ಉಪಮೇಯರ್ ಮೇಯರ್‌ರವರ ಕಾರ್ಯ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.
3. ಮೇಯರ್ ರವರು ಲಿಖಿತವಾಗಿ ನಿಯೋಜಿಸಿದ ಯಾವುದೇ ಕಾರ್ಯವನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಆಯುಕ್ತರು:

ಆಯುಕ್ತರು ಮಹಾನಗರರ ಪಾಲಿಕೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿರುವರು.ಇವರನ್ನು ಸರ್ಕಾರ ನೇಮಕಮಾಡುತ್ತದೆ.ಮಹಾನಗರ ಪಾಲಿಕೆಗಳಿಗೆ ಸಾಮಾನ್ಯವಾಗಿ ಹಿರಿಯ ಕೆ.ಎ.ಎಸ್ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತದೆ ಇವರು ಮಹಾನಗರರ ಪಾಲಿಕೆಯ ಸದಸ್ಯರಾಗಿರುವುದಿಲ್ಲ ಇವರ ಅಧಿಕಾರದ ಅವಧಿ ಇಂತಿಷ್ಟೇ ಎಂದು ನಿಗದಿಯಾಗಿಲ್ಲ. ಅದು ಸರ್ಕಾರದ ಇಚ್ಛೆಗೆ ಬಿಟ್ಟ ವಿಚಾರವಾಗಿರುತ್ತದೆ.

ಆಯುಕ್ತರು ಪೂರ್ಣ ಅವಧಿಯ ಅಧಿಕಾರಿಯಾಗಿದ್ದು ಇವರು ಇನ್ನಾವುದೇ ವೃತ್ತಿಯನ್ನು ನಿರ್ವಹಿಸುವಂತಿಲ್ಲ ಇವರ ಸಂಬಳ ಮತ್ತು ಭತ್ಯೆಯನ್ನು ಸರ್ಕಾರ ಆಗಿದ್ದಾಂಗ್ಗೆ ನೀಡುವ ನಿಧಿಯಿಂದ ಭರಿಸಲಾಗುತ್ತದೆ. ಇವರು ಪಾಲಿಕೆಯ ಎಲ್ಲಾ ಕಾರ್ಯಗಳ ಅನುಷ್ಠಾನಗೊಳಿಸುವಂತಹ ಕಾರ್ಯವನ್ನು ನಿರ್ವಹಿಸುವರು.

ನಗರ ಪಾಲಿಕೆಯ ಆಯುಕ್ತರ ಬಗ್ಗೆ ವಿಶ್ವಾಸವಿಲ್ಲದಿದ್ದರೆ 2/3 ಭಾಗ ಸದಸ್ಯರು ಅವರನ್ನು ಆಯುಕ್ತರ ಸ್ಥಾನದಿಂದ ವಜಾ ಮಾಡಲು ಶಿಫಾರಸ್ಸು ಮಾಡಬಹುದು ಅಥವಾ ವಜಾ ಮಾಡಬಹುದು.

ಕಾರ್ಯಗಳು:

1. ನಗರ ಪಾಲಿಕೆಯ ಎಲ್ಲಾ ಕಾರ್ಯಾಂಗೀಯ ಅಧಿಕಾರಗಳು ಆಯುಕ್ತರಲ್ಲಿರುತ್ತದೆ.
2. ಸಾರ್ವಜನಿಕ ಸೇವೆ ಅಥವಾ ರಕ್ಷಣೆಗೆ ಸಂಬಂಧಿಸಿದಂತೆ ನಗರ ಪಾಲಿಕೆಯ ಆಸ್ತಿಪಾಸ್ತಿಗಳ ರಕ್ಷಣೆಗೆ ಸಂಬಂಧಿಸಿದ ತುರ್ತು ಕಾರ್ಯ ಕೈಗೊಳ್ಳುವ ಅಧಿಕಾರವನ್ನು ಹೊಂದಿರುವರು.
3. ನಗರ ಪಾಲಿಕೆಯ ನಿರ್ಣಯಗಳನ್ನು ಜಾರಿಗೊಳಿಸುವುದು
4. ಸಂಬಂಧಪಟ್ಟ ಸ್ಥಾಯಿ ಸಮಿತಿಯ ಒಪ್ಪಿಗೆಯೊಡನೆ ಯಾವುದೇ ಕಾರ್ಯವನ್ನು ತಮ್ಮ ನಿಯಂತ್ರಣಕ್ಕೆ ಒಳಪಟ್ಟು ನಿರ್ವಹಿಸುವಂತೆ ತನ್ನ ಅಧೀನ ಅಧಿಕಾರಿಗಳಿಗೆ ವಹಿಸಬಹುದು.
5. ಮುಂಗಡ ಪತ್ರ ತಯಾರಿಯಲ್ಲಿ ನೆರವು ನೀಡುವುದು.
6. ನಗರ ಪಾಲಿಕೆಯ ದಾಖಲಾತಿಗಳನ್ನು ರಕ್ಷಿಸುವುದು.

   ಒಟ್ಟಾರೆ ಇವರು ನಗರ ಪಾಲಿಕೆಯ ಪೂರ್ಣಾವಧೀಯ ಕಾರ್ಯಾಂಗಾಧಿಕಾರಿಯಾಗಿದ್ದು ನಗರ ಪಾಲಿಕೆಯ ಎಲ್ಲಾ ಕಾರ್ಯಗಳನ್ನು ಮುನ್ಸಿಪಲ್ ಕಾಯಿದೆಗೆ ಒಳಪಟ್ಟು ನಿರ್ವಹಿಸುವರು ಇವರ ಜೊತೆಗೆ ಪಾಲಿಕೆಯ ಸಿಬ್ಬಂದಿ ವರ್ಗದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿದ್ದು ಅವರ ಕಾರ್ಯನಿರ್ವಹಣೆಗೆ ಹಾಗೂ ಸೇವೆಯ ಮೇಲೆ ನಿಯಂತ್ರಣವನ್ನು ಹೊಂದಿರುವರು (ಮಹಾದೇವ, 2012).

೧.೩.೩ ಸ್ಥಾಯಿ ಸಮಿತಿಗಳು:

ಕರ್ನಾಟಕ ಮುನ್ಸಿಪಲ್ ಕಾರ್ಪೋರೇಶನ್ ಕಾಯಿದೆ 1976 ರ ಪ್ರಕಾರ ನಗರ ಪಾಲಿಕೆಯಲ್ಲಿ 4 ಸ್ಥಾಯಿ ಸಮಿತಿಗಳಿವೆ ಅವುಗಳೆಂದರೆ

1. ತೆರಿಗೆ ಹಣಕಾಸು ಸಮಿತಿ, ಅಫೀಲು ಸಮಿತಿ
2. ಸಾರ್ವಜನಿಕ ಆರೋಗ್ಯ, ಶಿಕ್ಷಣ ಸಾಮಾಜಿಕ ನ್ಯಾಯ ಸಮಿತಿ
3. ನಗರ ಯೋಜನೆ ಮತ್ತು ಅಭಿವೃದ್ಧಿ ಸಮಿತಿ
4. ಲೆಕ್ಕ ಪತ್ರ ಸಮಿತಿ

ಪ್ರತಿ ಸ್ಥಾಯಿ ಸಮಿತಿಗೂ ತನ್ನದೇ ನಿರ್ದಿಷ್ಟ ಕಾರ್ಯವಿರುತ್ತದೆ ತೆರಿಗೆ ಮತ್ತು ಹಣಕಾಸು ಸಮಿತಿಯು ತೆರಿಗೆ ಮತ್ತು ಹಣಕಾಸಿಗೆ ಸಂಬಧಿಸಿದ ವಿಷಯಗಳ ಬಗ್ಗೆ ವ್ಯವಹರಿಸಿದರೆ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಮತ್ತು ಸಾಮಾಜಿಕ ನ್ಯಾಯ ಸಮಿತಿಯು ಶುಭ್ರತೆ, ನೈರ್ಮಲ್ಯ, ಶಿಕ್ಷಣ ಸಂಬಂಧಿತ ಸಮಸ್ಯೆಗಳು ಹಾಗೂ ಸಾಮಾಜಿಕ ನ್ಯಾಯಕ್ಕೆ ಸಂಬಧಿಸಿದಂತೆ ಬರುವ ಸಮಸ್ಯೆಗಳನ್ನು ನೋಡಿಕೊಳ್ಳುತ್ತದೆ ನಗರ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ನಗರದ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಅಂಶಗಳ ಬಗ್ಗೆ ಗಮನ ಹರಿಸುತ್ತದೆ ಹಾಗೇ ಲೆಕ್ಕಪತ್ರ ಸಮಿತಿಯ ಇಡೀ ನಗರ ಪಾಲಿಕೆಯ ಖರ್ಚು ವೆಚ್ಚಗಳ ಬಗ್ಗೆ ಗಮನವಿಟ್ಟು ಸಾರ್ವಜನಿಕ ಹಣದ ರಕ್ಷಕನಂತಿರುತ್ತದೆ.

ಪ್ರತಿ ಸ್ಥಾಯಿ ಸಮಿತಿಯಲ್ಲೂ 7 ಜನ ಸದಸ್ಯರಿರುತ್ತಾರೆ ಪ್ರತಿ ಸಮಿತಿಯ ಸದಸ್ಯರನ್ನು ಅನುಪಾತೀಯ ಪ್ರತಿನಿಧತ್ವದಿಂದ ವರ್ಗಾಯಿಸಲ್ಪಡದ ಮತದಾನದ ಆಧಾರದ ಮೇರೆಗೆ ಆಯ್ಕೆ ಮಾಡಲಾಗುತ್ತದೆ. ಯಾವುದೇ ಸದಸ್ಯರು ಒಂದಕ್ಕಿಂತ ಹೆಚ್ಚು ಸಮಿತಿಗಳ ಸದಸ್ಯರಾಗುವಂತಿಲ್ಲ. ಸ್ಥಾಯಿ ಸಮಿತಿಗಳ ಅಧ್ಯಕ್ಷರನ್ನು ಸಂಬಂಧಪಟ್ಟ ಸಮಿತಿಗಳ ಸದಸ್ಯರೇ ಆಯ್ಕೆ ಮಾಡುತ್ತಾರೆ (ಅಪ್ಪಯ್ಯ, 2009).

೧.೩.೭ ಮಹಾನಗರ ಪಾಲಿಕೆಯ ಕಾರ್ಯಗಳು:

ಮಹಾನಗರ ಪಾಲಿಕೆಯ ಕಾರ್ಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು ಅವುಗಳೆಂದರೆ:

1. ಸಾಮಾನ್ಯ ಕಾರ್ಯಗಳು
2. ಕಡ್ಡಾಯ ಕಾರ್ಯಗಳು
3. ಐಚ್ಛಿಕ ಕಾರ್ಯಗಳು

1. ಸಾಮಾನ್ಯ ಕಾರ್ಯಗಳು: 1976 ರ ಕಾಯಿದೆ ಪ್ರಕಾರ ನಗರ ಪಾಲಿಕೆಯ ಕೆಲವು ಸಾಮಾನ್ಯ ಕಾರ್ಯಗಳನ್ನು ನಿರ್ವಹಿಸುವುದು.

   1) ನಗರ ಪಾಲಿಕೆಗೆ ಸಂಬಂಧಿಸಿದಂತೆ ಆಡಳಿತದ ಸಮಗ್ರ ನಿರ್ವಹಣೆ.

2) ಮುಂಗಡ ಪತ್ರ ರಚನೆ ಮತ್ತು ಮುಂಗಡ ಪತ್ರಕ್ಕೆ ಅಂಗೀಕಾರ ಮಾಡುವುದು.

ಕಡ್ಡಾಯ ಕಾರ್ಯಗಳು:

1) ಸಾರ್ವಜನಿಕ ರಸ್ತೆ ಹಾಗೂ ಬೀದಿಗಳ ನಿರ್ಮಾಣ ಮತ್ತು ಸಂರಕ್ಷಣೆ.
2) ಸಾರ್ವಜನಿಕ ರಸ್ತೆ, ಬೀದಿ ಮತ್ತು ಮಾರುಕಟ್ಟೆಗಳಿಗೆ ವಿದ್ಯುತ್ ದೀಪ ಪೂರೈಕೆ.
3) ಸುರಕ್ಷಿತ ಕುಡಿಯುವ ನೀರಿನ ಪೂರೈಕೆ
4) ಕಸ, ವಿಷದಿಂದ ಕೂಡಿದ ನಿರುಪಯೋಗಿ ವಸ್ತುಗಳನ್ನು ಹೊರಹಾಕಲು ವ್ಯವಸ್ಥೆ ಮಾಡುವುದು.
5) ರಸ್ತೆಗಳ ನಾಮಕರಣ ಮತ್ತು ಮನೆ ನಂಬರನ್ನು ನೀಡುವುದು.
6) ಸಾರ್ವಜನಿಕ ಮಾರುಕಟ್ಟೆಗಳ ನಿರ್ಮಾಣ ಮತ್ತು ಸಂರಕ್ಷಣೆ.
7) ಉತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕಾಪಾಡುವುದು.
8) ಜನನ ಮರಣಗಳ ನೋಂದಣಿ
9) ಪ್ರಾಥಮಿಕ ಶಾಲೆಗಳ ಸ್ಥಾಪನೆ ಮತ್ತು ಸಂರಕ್ಷಣೆ
10) ರುದ್ರಭೂಮಿಗಳ ನಿರ್ಮಾಣ ಮತ್ತು ಸಂರಕ್ಷಣೆ

ಐಚ್ಛಿಕ ಕಾರ್ಯಗಳು

1) ಸಮರ್ಥ ಸಾರಿಗೆ ವ್ಯವಸ್ಥೆಯನ್ನು ಸ್ಥಾಪಿಸುವುದು.
2) ಶಿಶು ಕಲ್ಯಾಣ ಕೇಂದ್ರಗಳ ಸ್ಥಾಪನೆ
3) ಕಟ್ಟಡ ಮತ್ತು ಭೂಮಿಯ ಸಮೀಕ್ಷೆ ನಡೆಸುವುದು.
4) ಪ್ರಾಣಿಗಳಿಗಾಗಿ ಆಸ್ಪತ್ರೆಗಳ ನಿರ್ಮಾಣ
5) ಬಡವರಿಗೆ ಮನೆಯಿಲ್ಲದವರಿಗೆ ಮತ್ತು ಅನಾಥರಿಗೆ ಮನೆಗಳನ್ನು ಕಟ್ಟಿಕೊಡುವುದು
6) ವಸ್ತು ಸಂಗ್ರಹಾಲಯ, ಕಲಾ ಗ್ಯಾಲರಿಗಳ ಮತ್ತು ವಿಶಿಷ್ಟ ಸಸ್ಯಗಳುಳ್ಳ ಉದ್ಯಾನವನಗಳ ಸ್ಥಾಪನೆ.

೧.೪ ಸಂವಿಧಾನದ 74 ನೇ ತಿದ್ದುಪಡಿ

ಪಿ.ವಿ. ನರಸಿಂಹರಾವ್ ಸರಕಾರವು ನಗರ ಸ್ಥಳೀಯ ಸರಕಾರಗಳಿಗೆ ಸಂವಿಧಾನಿಕ ಸ್ಥಾನಮಾನವನ್ನುಕಲ್ಪಿಸುವಉದ್ದೇಶದಿಂದ 1992 ರಲ್ಲಿ ಸಂವಿಧಾನಕ್ಕೆ 74ನೇ ತಿದ್ದುಪಡಿತಂದು ನಗರ ಸ್ಥಳೀಯ ಸರಕಾರಗಳ ಕಾಯ್ದೆ ಮಾಡಿ 12 ನೇ ಅನುಸೂಚಿಯಲ್ಲಿ ಸೇರಿಸಲಾಯಿತು.ಇದು 1993ರಲ್ಲಿ ಜಾರಿಗೆತಂದಿತು. Ix A ಹಾಗೂ 12 ನೇ ಅನುಸೂಚಿಯಲ್ಲಿ 243–P ದಿಂದ 243–2

G ವರೆಗೆ 18 ಅನುಚ್ಚೇದಗಳನ್ನು ಸೇರಿಸಲಾಗಿದ್ದು ನಗರ ಸರಕಾರಗಳ ರಚನೆ ಅಧಿಕಾರಗಳ ಚುನಾವಣೆ, ಹಣಕಾಸು ವಿಷಯಗಳ ಬಗ್ಗೆ ವಿವರಿಸಲಾಗಿದೆ.

74 ನೇ ತಿದ್ದುಪಡಿಯ ವಿವರಣೆ 243-P-243-2G

1) 243- P ಮುನಿಸಿಪಲ್ ಪ್ರದೇಶ,ಮುನ್ಸಿಪಾಲಿಟಿ,ಮೆಟ್ರೋಪಾಲಿಟನ್ ಪ್ರದೇಶಗಳ ಅರ್ಥ ವಿವರಣೆ.
2) 243-Q ಪ್ರತಿರಾಜ್ಯದಲ್ಲಿ ಪುರಸಭೆ/ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ಬಗ್ಗೆ ವಿವರಿಸಲಾಗಿದೆ.
3) 243-Rಮುನ್ಸಿಪಲ್ ಪ್ರತಿನಿಧಿಗಳ ಆಯಾ ವಾರ್ಡ್‌ಗಳ ಮತದಾರರಿಂದಚುನಾಯಿತರಾಗಿರಬೇಕು. ರಾಜ್ಯ ಶಾಸಕಾಂಗವು ಕಾನೂನು ರಚಿಸಿ ಮುನ್ಸಿಪಾಲ್ ಆಡಳಿತದ ಬಗ್ಗೆಅನುಭವವಿದ್ದವರನ್ನು ಸದಸ್ಯರನ್ನಾಗಿನಾಮಕರಣ ಮಾಡಬಹುದು. ಆದರೆ ಇವರಿಗೆ ಮತದಾನದ ಹಕ್ಕನ್ನು ಕೊಡಲಾಗಿಲ್ಲ. ಈ ಪ್ರದೇಶಗಳಿಗೆ ಸಂಬಂಧಿಸಿದ ಸಂಸದರುರಾಜ್ಯ ಶಾಸಕಾಂಗದ ಪ್ರತಿನಿಧಿಗಳ ಪದನಿಮಿತ್ತ ಸದಸ್ಯರಾಗುತ್ತಾರೆ. ಅಧ್ಯಕ್ಷರು ಆಯ್ಕೆಯ ಬಗ್ಗೆ ರಾಜ್ಯ ಶಾಸಕಾಂಗವು ನಿರ್ಧರಿಸುತ್ತದೆ.
4) 243-T ಪರಿಶಿಷ್ಟಜಾತಿ,ಜನಾಂಗ,ಮಹಿಳೆಯರು ಹಿಂದುಳಿದವರಿಗೆ ಅಧ್ಯಕ್ಷ ಸ್ಥಾನಗಳ ಮೀಸಲಾತಿಯನ್ನುರಾಜ್ಯ ಸರಕಾರವು ನಿರ್ಧರಿಸಬೇಕು.
5) 243-U ನಗರ ಸ್ಥಳೀಯ ಸರಕಾರಗಳ ಅಧಿಕಾರಅವಧಿ 5 ವರ್ಷಗಳ ವಿಸರ್ಜನೆಯಾದ 6 ತಿಂಗಳಲ್ಲಿ ಚುನಾವಣೆಯಾಗಬೇಕು.
6) 243-V ಸದಸ್ಯರಅನರ್ಹತೆಯ ಬಗ್ಗೆ ವಿವರಣೆ.(21 ವರ್ಷ ಮೀರಿರಬೇಕು)
7) 243-Wಅಧಿಕಾರಿಗಳ ವಿವರಣೆ, ಆರ್ಥಿಕ ಸಾಮಾಜಿಕ ಅಭಿವೃಧ್ಧಿಯ ಯೋಜನೆಗಳನ್ನು ಜಾರಿಗೊಳಿಸಬೇಕು. 12ನೇ ಅನುಸೂಚಿಯಲ್ಲಿ ತಿಳಿಸಿದ ವಿಷಯಗಳ ಮೇಲೆ ಕಾನೂನು ರಚಿಸುವ ಅಧಿಕಾರವನ್ನು ಕೊಡಲಾಗಿದೆ. ಅವುಗಳು
   1) ನಗರ ಪ್ರದೇಶಗಳ ಯೋಜನೆ
   2) ಭೂಮಿ ಕಟ್ಟಡಗಳ ನಿಯಂತ್ರಣ
   3) ಸಾಮಾಜಿಕಆರ್ಥಿಕಅಭಿವೃದ್ದಿಯೋಜನೆ
   4) ಸೇತುವೆ ನಿರ್ಮಾಣ
   5) ಗೃಹ ಕೈಗಾರಿಕೆ, ವಾಣಿಜ್ಯ ಉದ್ದೇಶಗಳಿಗೆ ನೀರು ಸರಬರಾಜು

6) ಸಾರ್ವಜನಿಕಆರೋಗ್ಯ ಮತ್ತು ನಿರ್ಮಲೀಕರಣ

7) ಅಗ್ನಿಶಾಮಕ ಸೇವೆ

8) ಅರಣ್ಯ ಪರಿಸರ ಸಂರಕ್ಷಣೆ

9) ಅಂಗವಿಕಲರ, ಬುದ್ಧಿಮಾಂದ್ಯರ ರಕ್ಷಣೆ

10) ಕೊಳಚೆ ಪ್ರದೇಶಗಳ ಅಭಿವೃದ್ಧಿ

11) ಬಡತನ ನಿರ್ಮೂಲನೆ

12) ಆಟದ ಮೈದಾನ, ತೋಟಗಾರಿಕೆ ನಿರ್ವಹಣೆ

13) ಸಾಂಸ್ಕೃತಿಕ ಶೈಕ್ಷಣಿಕ ಕಾರ್ಯಗಳಿಗೆ ಉತ್ತೇಜನ

14) ಸ್ಮಶಾನ, ವಿದ್ಯುತ್ ಚಿತಾಗಾರಗಳ ಸ್ಥಾಪನೆ

15) ಪ್ರಾಣಿಗಳ ರಕ್ಷಣೆ

16) ಜನನ ಮರಣ ನೊಂದಣಿ

17) ಬೀದಿ ದೀಪ ಬಸ್ ನಿಲ್ದಾಣ ನಿರ್ಮಾಣ

18) ಖಸಾಯಿ ಖಾನೆ –ಚರ್ಮ ಹದಮಾಡುವ ಸ್ಥಳಗಳ ನಿಯಂತ್ರಣ

8) 243–Yಸ್ಥಳೀಯ ಸರಕಾರಗಳ ಹಣಕಾಸು ಪರಿಸ್ಥಿತಿಯ ಪರಿಶೀಲನೆ ಹಾಗೂ ಶಿಫಾರಸು ಮಾಡುವಅಧಿಕಾರವನ್ನುರಾಜ್ಯ ಹಣಕಾಸುಆಯೋಗಕ್ಕೆ ಕೊಡುತ್ತದೆ.

9) 243–2A ಚುನಾವಣೆ ಹಾಗೂ ಮತದಾರರ ಪಟ್ಟಿಯನ್ನು ಸಿದ್ದಪಡಿಸುವ ಅಧಿಕಾರವನ್ನುರಾಜ್ಯಚುನಾವಣೆಆಯೋಗಕ್ಕೆಕೊಡಲಾಗಿದೆ.

10) 243–ZDಆಯೋಜನೆ ಸಮಿತಿರಚನೆ ಈ ಸಮಿತಿಯಅಧ್ಯಕ್ಷರು ಸಿದ್ದಪಡಿಸಿದ ಅಭಿವೃದ್ಧಿಯೋಜನೆಯ ಬಗ್ಗೆ ರಾಜ್ಯ ಸರಕಾರಕ್ಕೆ ವರದಿ ಒಪ್ಪಿಸಬೇಕೆಂದು ವಿವರಿಸುತ್ತವೆ.

11) 243–ZE ಮೆಟ್ರೋ ಪ್ಲೆಂಬನ್ ಪ್ರದೇಶಗಳಲ್ಲಿ ಯೋಜನೆಯ ಕರಡನ್ನು ತಯಾರಿಸಿ ರಾಜ್ಯ ಸರಕಾರಕ್ಕೆ ಕಳುಹಿಸಬೇಕು. ಈ ಸಮಿತಿಗಳ ರಚನೆಯ ಬಗ್ಗೆ ರಾಜ್ಯ ಶಾಸಕಾಂಗವು ಕಾನೂನು ಮಾಡುವಅಧಿಕಾರ ಹೊಂದಿವೆ.

12) 243–ZG ಚುನಾವಣಾ ತಕರಾರು ಆದೇಶಗಳನ್ನು ರಾಜ್ಯ ಸರಕಾರದ ಪ್ರಾಧಿಕಾರದಲ್ಲಿ ಪ್ರಶ್ನಿಸುವ ಅವಕಾಶವನ್ನು ಕಲ್ಪಿಸಿದೆ. (ಕಬ್ಬೂರಿ 2014).

೧.೫ ಅಧ್ಯಯನದ ಉದ್ದೇಶಗಳು:

ಯಾವುದೇ ಒಂದು ಅಧ್ಯಯನವನ್ನು ಕೈಗೊಳ್ಳಬೇಕಾದರೆ ಅದು ತನ್ನದೇ ಆದಂತಹ ವಿಶಿಷ್ಠ ಹಾಗೂ ವೈಜ್ಞಾನಿಕವಾದಂತಹ ಗುರಿ ಉದ್ದೇಶಗಳು ಹಾಗೂ ಸಾಧನೆಯನ್ನು ಒಳಗೊಂಡಿರುತ್ತದೆ. ಹಾಗಾಗಿಯೇ ಈ ಅಧ್ಯಯನವು ಅದರಿಂದ ಹೊರತಾಗಿಲ್ಲ.

1. ಮಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿಯನ್ನು ವಿಶ್ಲೇಷಿಸುವುದು.
2. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ (ಕಾರ್ಪೋರೇಟರ್‌ಗಳು) ಆಡಳಿತ ಅನುಭವ ಅರಿವು ಜಾಗೃತಿಯ ಬಗ್ಗೆ ಅಧ್ಯಯನ ಮಾಡುವುದು.
3. ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ ಮತ್ತು ಅಭಿವೃದ್ಧಿಯ ಸಾಧನೆಯನ್ನು ಪರೀಕ್ಷಿಸುವುದು.
4. ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸದಂತೆ ಅಡ್ಡಿಯಾಗುತ್ತಿರುವ ಮಹಿಳೆಯರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುವುದು.

೧.೬ ಸಮಸ್ಯೀಕರಣ:

ಭಾರತದ ರಾಜಕೀಯ ವ್ಯವಸ್ಥೆಯ ನಗರ ಸ್ಥಳೀಯ ಸರ್ಕಾರದಲ್ಲಿ ಮಹಿಳೆಯರ ಪಾತ್ರ ಅಮೋಘವಾದದ್ದು. ದೇಶದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ಅವಕಾಶವನ್ನು ಸಂವಿಧಾನದ ಅಡಿಯಲ್ಲಿ ಕಲ್ಪಿಸಲಾಗಿದೆ.

ನಗರ ಸ್ಥಳೀಯ ಸರ್ಕಾರದಲ್ಲಿ ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆ ಈಗಾಗಲೇ ಅನೇಕ ಚಿಂತಕರು ಅಧ್ಯಯನವನ್ನು ನಡೆಸಿರುತ್ತಾರೆ ಈ ಅಧ್ಯಯನಗಳಿಂದ ಹೊರಬಂದ ವಿಚಾರಗಳು ಮತ್ತು ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನೆಯಾದ ಮಂಗಳೂರು ಮಹಾನಗ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ ಒಂದು ಅಧ್ಯಯನಕ್ಕೆ ಸಂಬಂಧಿಸಿದಂತೆ ಮಹಿಳೆಯ ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆಯ ಕೊರತೆ, ಮಾಹಿತಿ ಅರಿವಿನ ಕೊರತೆ, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಸಮಸ್ಯೆ, ಭಾಗವಹಿಸುವಿಕೆ ಇಲ್ಲದಿರುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮಹಿಳೆಯರಲ್ಲಿ ಸಮಸ್ಯೆಗಳು ಕಂಡುಬರುತ್ತದೆ.

ರಾಜಕೀಯ ಪಾಲ್ಗೊಳ್ಳುವಿಕೆ, ಕುಟುಂಬ ನಿರ್ವಹಣೆ, ಆರ್ಥಿಕ ಸಮಸ್ಯೆ, ಪುರಷರ ಪ್ರಾಬಲ್ಯ, ಲಿಂಗ ತಾರತಮ್ಯ ಈ ಹಿನ್ನಲೆಯಿರುವ ಸಮಸ್ಯೆಗಳನ್ನು ಆಧಾರವಾಗಿ ಇಟ್ಟುಕೊಂಡು ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ನಿಟ್ಟಿನಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಿಳಾ ಪ್ರತಿನಿಧಿಗಳ ಪಾತ್ರಕ್ಕೆ ಎದುರಾಗುವ ಸಮಸ್ಯೆಗಳಿಗೆ ಪರಿಹಾರವನ್ನು ಕೈಗೊಳ್ಳುವ ಸಣ್ಣ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು

೧.೭ ಅಧ್ಯಯನದ ವಿಧಾನ :

ಈ ಸಂಶೋಧನಾ ಅಧ್ಯಯನ ವಿಧಾನವು ಪ್ರಮುಖವಾಗಿ ವೈಜ್ಞಾನಿಕ ವಿಧಾನಗಳಾದ ಪ್ರಶ್ನಾವಳಿ, ಸಂದರ್ಶನ, ಸಮೀಕ್ಷೆ, ಕ್ಷೇತ್ರ ಕಾರ್ಯದ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ವಿಧಾನಗಳನ್ನು ಒಳಗೊಂಡಿದೆ.

ಈ ಸಂಶೋಧನೆಯಲ್ಲಿ ಸರಳ ಯಾದೃಚ್ಛಿಕ ನಮೂನೆಯನ್ನು ಬಳಸಿ 61 ವಾರ್ಡುಗಳ ಮಹಿಳಾ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ನಂತರ ವಿಭಾಗಿತ ಸರಳ ಯಾದೃಚ್ಛಿಕ ನಮೂನೆಯ ಮೂಲಕ ವಯಸ್ಸು ಶಿಕ್ಷಣ ಜಾತಿ ಆಧಾರದ ಮೇಲೆ ವಿಭಾಗಿಸಿ ಮಾಹಿತಿಯನ್ನು ವೈಯಕ್ತಿಕ ಸಂದರ್ಶನ ಅವಲೋಕನ ತಂತ್ರ ಸಾಧನದ ಮೂಲಕ ಸಂಗ್ರಹಿಸಲಾಗಿದೆ.

ಪ್ರಾಥಮಿಕ ಆಕರಗಳು:

ಸಂದರ್ಶನ ಅನುಸೂಚಿಯನ್ನು ಸಿದ್ಧಪಡಿಸಿದ ನಂತರ ಪೂರ್ವ ಪರೀಕ್ಷೆಗೆ ಒಳಪಡಿಸಿ ನಂತರ ಕಂಡುಬಂದ ದೋಷಗಳನ್ನು ಸರಿಪಡಿಸಿಕೊಂಡು ಚುನಾಯಿತ ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳನ್ನು ವಿಭಾಗಿಸಿ ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಂಡು ಅದರಿಂದ ಮಾಹಿತಿ ಸಂಗ್ರಹಿಸಲಾಗಿದೆ.ಮಾದರಿ ಸಂಗ್ರಹಣೆಗಾಗಿ ಸಂದರ್ಶನದ ಜೊತೆಗೆ ಸಂಶೋಧಕರು ಸಹಭಾಗಿ ಅವಲೋಕನ ಮೂಲಕ ಮಾಹಿತಿ ಸಂಗ್ರಹಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅನುಷಂಗಿಕ ಆಕರಗಳು:

ಈ ಅಧ್ಯಯನಕ್ಕೆ ಬೇಕಾದ ಅನುಷಂಗಿಕ ಮಾಹಿತಿಗಳನ್ನು ಸರ್ಕಾರಿ ಇಲಾಖಾ ದಾಖಲಾತಿಗಳು, ಸರ್ಕಾರಿ ಕೈಪಿಡಿಗಳು, ಮಹಾನಗರ ಪಾಲಿಕೆಯ ದಾಖಲೆಗಳು, ನಿಯತಕಾಲಿಕೆಗಳು, ಸಮೀಕ್ಷಾ ಗ್ರಂಥಗಳು, ವೆಬ್‌ಸೈಟ್ ಮಾಹಿತಿಯ ಮೂಲಕ ಸಂಗ್ರಹಿಸಲಾಗಿದೆ.

ಅಧ್ಯಯನದ ವ್ಯಾಪ್ತಿ:

ಈ ಅಧ್ಯಯನವನ್ನು ಕರ್ನಾಟಕ ರಾಜ್ಯದ ದ.ಕ ಜಿಲ್ಲೆಯ ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಗುರಿಯಾಗಿಸಿ ಅಧ್ಯಯನವನ್ನು ಮಾಡಲಾಗಿದೆ.

ಆದುದರಿಂದ ಸಂಶೋಧನಾ ವ್ಯಾಪ್ತಿಯ ಸಂಕ್ಷಿಪ್ತವಾಗಿ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಮಂಗಳೂರು ಮಹಾನಗರ ಪಾಲಿಕೆಗೆ ಅಷ್ಟೇ ಸೀಮಿತಗೊಳಿಸಲಾಗಿದೆ.

೧.೮ ಅಧ್ಯಾಯಗಳು:

1. **ಮೊದಲನೆಯ ಅಧ್ಯಾಯ**: ಪ್ರಸ್ತಾವನೆ

   ಈ ಅಧ್ಯಾಯವು ಪ್ರಜಾಪ್ರಭುತ್ವದ ಪರಿಕಲ್ಪನೆ, ಸ್ಥಳೀಯ ಸರಕಾರದ ಕುರಿತಾದ ಮಾಹಿತಿ, ಮಹಾನಗರ ಪಾಲಿಕೆಯ ಕಾರ್ಯವೈಖರಿಯ ಚಿತ್ರಣ, ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳೆಯ ಸ್ಥಾನಮಾನ, ಸಂವಿಧಾನದ 74ನೇ ತಿದ್ದುಪಡಿಯ ಪಕ್ಷಿನೋಟ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವಿಧಾನ ಅಧ್ಯಯನದ ವ್ಯಾಪ್ತಿ ಅಧ್ಯಾಯಗಳ ಮಾಹಿತಿಯನ್ನು ಒಳಗೊಂಡಿದೆ.

2. **ಎರಡನೇ ಅಧ್ಯಾಯ**: ಸಾಹಿತ್ಯ ವಿಮರ್ಶೆ

   ಈ ಅಧ್ಯಾಯವು ಉದ್ದೇಶಗಳಿಗೆ ಪೂರಕವಾದ ಸಾಹಿತ್ಯ ವಿಮರ್ಶೆಯನ್ನು ಒಳಗೊಂಡಿದ್ದು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ ಸಾಹಿತ್ಯ ವಿಮರ್ಶೆ, ಭಾರತದಲ್ಲಿ ಆಡಳಿತದಲ್ಲಿ ಮಹಿಳೆಯರ ಮೀಸಲಾತಿಗೆ ಸಂಬಂಧಿಸಿದ ಸಾಹಿತ್ಯ ವಿಮರ್ಶೆ, ಅಧಿಕಾರ ವಿಕೇಂದ್ರಿಕರಣ, ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ಸಾಹಿತ್ಯ ವಿಮರ್ಶೆ, ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿಗಳಿಗೆ ಸಂಬಧಿಸಿದ ಸಾಹಿತ್ಯ ಪರಿವೀಕ್ಷಣೆಯನ್ನು ಒಳಗೊಂಡಿದೆ.

3. **ಮೂರನೆಯ ಅಧ್ಯಾಯ**: ಮಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿ

   ಈ ಅಧ್ಯಾಯವು ಮಂಗಳೂರು ಮಹಾನಗರ ಪಾಲಿಕೆಯ ಮಾಹಿತಿ, ಕಾರ್ಯವೈಖರಿ, ಚುನಾಯಿತ ಮಹಿಳಾ ಪ್ರತಿನಿಧಿಗಳ (ಕಾರ್ಪೋರೇಟರ್‌ಗಳ) ವಿವರ, ಅರಿವಿನ ವಿವರವನ್ನು ಒಳಗೊಂಡಿದೆ.

4. **<u>ನಾಲ್ಕನೆಯ ಅಧ್ಯಾಯ</u>**: ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳ (ಕಾರ್ಪೋರೇಟರ್‌ಗಳ) ಕಾರ್ಯವೈಖರಿಯ ವಿವರ.

   ಈ ಅಧ್ಯಾಯವು ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ, ಸಬಲೀಕರಣ, ಅಭ್ಯರ್ಥಿಗಳ ಮಾಹಿತಿ, ಅಂಕಿ ಅಂಶ, ಅವಲೋಕನ, ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ. ಚುನಾಯಿತ ಪ್ರತಿನಿಧಿಗಳ ಸಮಸ್ಯೆ ಮತ್ತು ಸವಾಲುಗಳನ್ನು ಒಳಗೊಂಡಿದೆ.

5. **<u>ಐದನೆಯ ಅಧ್ಯಾಯ</u>**: ಸಲಹೆಗಳು ಮತ್ತು ಉಪಸಂಹಾರ

ಈ ಅಧ್ಯಾಯವು ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದ ವಿವರಣೆ, ಸಲಹೆಗಳು ಅಧ್ಯಯನದ ಒಟ್ಟು ಫಲಶ್ರುತಿಗಳು ಮತ್ತು ಉಪಸಂಹಾರವನ್ನು ಒಳಗೊಂಡಿರುತ್ತದೆ.

ಅಧ್ಯಾಯ –೨

ಸಾಹಿತ್ಯ ಪರಿವೀಕ್ಷಣೆ

ಯಾವುದೇ ಒಂದು ಸಂಶೋಧನೆಯು ಪೂರ್ಣವಾಗಬೇಕಾದರೆ ಒಂದು ಕ್ಷೇತ್ರದ ಪ್ರದೇಶಕ್ಕೆ ಸೀಮಿತವಾಗಿರದೆ ಅದಕ್ಕೆ ಸಂಬಂಧಿಸಿದ ಹಲವಾರು ಕ್ಷೇತ್ರಗಳನ್ನು ಗಮನಿಸಿ ಅಲ್ಲಿ ದೊರಕುವ ಮತ್ತು ಸಂಶೋಧನೆಗೆ ಪೂರಕವಾದ ವಿಷಯಗಳನ್ನು ಸಂಗ್ರಹಿಸಬೇಕಾಗುತ್ತದೆ.

ಅಧ್ಯಯನಕ್ಕೆ ಅಗತ್ಯವಾದ ಸಾಹಿತ್ಯ ಕೃತಿಗಳು, ಹಲವು ಲೇಖಕರು ಪ್ರಕಟಿಸಿರುವ ಲೇಖನಗಳು, ಸಂಶೋಧನಾ ಗ್ರಂಥಗಳು, ಪ್ರಕರಣ ಅಧ್ಯಯನಗಳು, ಸರ್ಕಾರಿ ಸಂಸ್ಥೆ, ಸರ್ಕಾರೇತರ ಸಂಸ್ಥೆಗಳಿಂದ ಪಡೆದ ಮಾಹಿತಿಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಮಹಿಳೆಯರ ಮಹಿಳಾ ಪರಿಕಲ್ಪನೆ, ತಂತ್ರಗಳು, ಆರ್ಥಿಕ ಸ್ಥಿತಿಗತಿ ಆಡಳಿತದಲ್ಲಿ ಮಹಿಳೆಯರ ಮೀಸಲಾತಿಗಳು, ರಾಜಕೀಯ ಭಾಗವಹಿಸುವಿಕೆಗೆ ಎದುರಾಗುವ ಸವಾಲುಗಳು, ಸಾಮಾಜಿಕ ಸ್ಥಿತಿಗತಿಗಳು ಬಗ್ಗೆ ಈಗಾಗಲೇ ಹಲವಾರು ಲೇಖಕರು ಅಧ್ಯಯನವನ್ನು ನಡೆಸಿರುತ್ತಾರೆ.ಈ ಎಲ್ಲಾ ಅಧ್ಯಯನವನ್ನು ಪ್ರಸ್ತುತ ಸಂಶೋಧನೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

೨.೧ ಆಡಳಿತದಲ್ಲಿ ಮಹಿಳೆಯರ ಮೀಸಲಾತಿ

ಭಾರತ ಸಂವಿಧಾನವು 'ಸಮಾನತೆ'ಯೇ ಮೂಲಭೂತ ಹಕ್ಕು ಎಂದು ಘೋಷಣೆ ಮಾಡಿದೆ.ಈ ಹಕ್ಕು ಎಲ್ಲರಿಗೂ ಸಮಾನ ಕಾನೂನು, ರಕ್ಷಣೆ, ಸಾರ್ವಜನಿಕ ಉದ್ಯೋಗ ಕ್ಷೇತ್ರದಲ್ಲಿ ಸಮಾನ ಅವಕಾಶಗಳು, ತಾರತಮ್ಯ ನಿಷೇಧವನ್ನು ಒಳಗೊಂಡಿದೆ.

ನಮ್ಮ ಸಂವಿಧಾನ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪುರುಷರಂತೆ ಮಹಿಳೆಯರಿಗೂ ಮತದಾನ ಮತ್ತು ಜನತಾ ಪ್ರತಿನಿಧಿಗಳಾಗಿ ಅಧಿಕಾರವನ್ನು ವಹಿಸುವ ಅವಕಾಶವನ್ನು ನೀಡಿತು.ಹೊಸ ಪ್ರಭುತ್ವವು ಮಹಿಳೆಯರ ವಿಶೇಷ ಅಗತ್ಯಗಳ ನಿರ್ವಹಣೆಗೆಂದೆ ಆಡಳಿತ ವಿಧಾನಗಳನ್ನು ಅಭಿವೃದ್ಧಿಪಡಿಸಿತು.ಈ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಸಂಶೋಧನೆಗಳು ನಡೆದಿದೆ.

ಪಳನಿತು (2001) ರವರು ತಮ್ಮ ಲೇಖನದಲ್ಲಿ ಮಹಿಳೆಯರ ಬಗೆಗಿನ ಹಿಂದೆ ಇದ್ದ ಸಮಾಜದ ನಿಲುವು ಈಗ ಬದಲಾಗಿದೆ.ಮಹಿಳೆಯರಿಗೆ ಬೇರೆ ಬೇರೆ ಕಾರ್ಯಾಗಾರಗಳನ್ನು ಸಂಘ ಸಂಸ್ಥೆಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಅವರಲ್ಲಿ ಭರವಸೆಯನ್ನು ಮೂಡಿಸಿಲು ಸಾಧ್ಯ ಎಂದಿದ್ದಾರೆ.

ಮೊಹಲಾತಿ (2000); ದೇವಕಿ ಜೈನ್ (1992); ನಿರ್ಮಲ್ (2001) ರವರು ತಮ್ಮ ಗ್ರಂಥಗಳಲ್ಲಿ ಸಂವಿಧಾನದ 73 ನೇ ತಿದ್ದುಪಡಿಯ ವಿಶ್ಲೇಷಣೆ ಮಹಿಳಾ ಮೀಸಲಾತಿಯ ಬಗ್ಗೆ ತಿಳಿಸಿರುತ್ತಾರೆ.ಅದೇ ರೀತಿಯಾಗಿ ರಾಷ್ಟ್ರದ ಜನಸಂಖ್ಯೆಯ "ಅರ್ಧದಷ್ಟಿರುವ ಮಹಿಳೆಯರು ಭಾಗವಹಿಸುವಿಕೆ"ಯ ಮಟ್ಟ ಕಡಿಮೆ ಇದೆ.ಮಹಿಳಾ ಮೀಸಲಾತಿ ಅಭಿವೃದ್ಧಿಗೆ ಪೂರಕವಾಗುತ್ತದೆ ಎಂದಿದ್ದಾರೆ.

ಕವಿತಾ (1998); ಅವರ ಲೇಖನದಲ್ಲಿ ಪ್ರಸ್ತುತ ಮಹಿಳೆಯರ ಸಮಾನತೆಗೆ ಮೀಸಲಾತಿ ಎಂಬುದು ತೀರಾ ಅವಶ್ಯಕವಾದುದ್ದಾದರೂ ಹಲವಾರು ಕಾರಣಗಳಿಂದ ಅಂದರೆ ಬಡತನ, ಭಾರತೀಯ ಸಮಾಜದ ಕಟ್ಟುಪಾಡು ಇವುಗಳ ಸಮಾನತೆಗೆ ತೊಡಕಾಗಿರುವುದು ಕಂಡುಬರುತ್ತದೆ.

ಕವಿತಾ; ಕೊತಾಯ (2017); ನರಸಿಂಹ (2012); ಸದಾನಂದ (2014) ರವರು ತಮ್ಮ ಲೇಖನಗಳಲ್ಲಿ ಸಂವಿಧಾನದ 73 ಮತ್ತು 74 ನೇ ತಿದ್ದುಪಡಿಯ ವಿವರಣೆಯನ್ನು ನೀಡಿದ್ದು ಈ ತಿದ್ದುಪಡಿಯು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ಹೇಗೆ ಪೂರಕವಾಗಿದೆ ಎಂಬುದನ್ನು ತಿಳಿಸಿರುತ್ತಾರೆ. ಅಲ್ಲದೆ ರಾಜಕೀಯದಲ್ಲಿ ಮಹಿಳೆಯರು ಪುರುಷರಷ್ಟೇ ಸರಿಸಮಾನವಾದ ಪಾತ್ರವನ್ನು ವಹಿಸಿದ್ದಾರೆ ಎಂದು ಹೇಳುತ್ತಾ ಮಹಿಳಾ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಸಂವಿಧಾನ ರಚನಾ ಸಭೆಯ ನಿದರ್ಶನವನ್ನು ತಮ್ಮ ಲೇಖನಗಳಲ್ಲಿ ಕೊಟ್ಟಿರುತ್ತಾರೆ.

ರಶ್ಮಿ (1997); ಪೂಜಾ (2016); ಶುಭಾ (1994) ರವರು ಹೇಳುವಂತೆ ಮಹಿಳಾ ಪ್ರತಿನಿಧಿಗಳ ರಾಜಕೀಯ ಭಾಗವಹಿಸುವಿಕೆಯ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ. ಮಹಿಳೆಯರು ಮುಖ್ಯವಾಗಿ ಕುಟುಂಬದೊಳಗಿನ ಲಿಂಗ ತಾರತಮ್ಯ, ಲಿಂಗ ಪೂರ್ವಾಗ್ರಹ, ಸ್ತ್ರೀತ್ವ, ರಾಜಕೀಯ ಚಟುವಟಿಕೆಯ ಜ್ಞಾನದ ಕೊರತೆ, ಕುಟುಂಬ ಮತ್ತು ಕೆಲಸವನ್ನು ನಿರ್ವಹಿಸುವಲ್ಲಿ ಎದುರಾಗುವ ಸಮಸ್ಯೆ, ಆರ್ಥಿಕ ಸಮಸ್ಯೆ ಮೊದಲಾದವುಗಳು ಮಹಿಳೆಯರ ಸ್ಥಳೀಯ ಸರಕಾರದ ಭಾಗವಹಿಸುವಿಕೆಗೆ ತಡೆಯನ್ನು ತರುತ್ತದೆ ಎಂದಿದ್ದಾರೆ.

ವಾಣಿಶ್ರೀ (2011) ಸ್ಥಳೀಯ ಸರಕಾರದಲ್ಲಿ ಮಹಿಳಾ ಜನಪ್ರತಿನಿಧಿಗಳು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ.ಅಲ್ಲದೆ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಅವರಲ್ಲಿ ಸಂಪೂರ್ಣವಾದ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲ. ಇದು ಅವರು ಆಡಳಿತವನ್ನು ನಡೆಸುವಾಗ ಒಂದು ರೀತಿಯ ಹಿಂಜರಿಕೆಯ ಪಾತ್ರವನ್ನು ವಹಿಸುವಲ್ಲಿ ಪರಿಣಾಮ ಬೀರುತ್ತದೆ ಎಂದಿದ್ದಾರೆ.

೨.೨ ಅಧಿಕಾರ ವಿಕೇಂದ್ರೀಕರಣ

ಪ್ರಜಾಪ್ರಭುತ್ವದಲ್ಲಿ ಅಧಿಕಾರ ಕೆಲಸ ಮತ್ತು ಜವಾಬ್ದಾರಿಗಳ ವಿಕೇಂದ್ರೀಕರಣ ಅನಿವಾರ್ಯ.ಈ ದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳ ಪ್ರಜಾಸತ್ತೆಯ ಅಗತ್ಯಗಳಿಗೆ ಅನುಗುಣವಾಗಿದೆ.

ಇಂದು ಅಧಿಕಾರ ವಿಕೇಂದ್ರೀಕರಣವು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು, ಜನತೆ ಸ್ಥಳೀಯವಾಗಿ ತೀರ್ಮಾನ ತೆಗೆದುಕೊಳ್ಳುವಂತಹ ಸಾಮರ್ಥ್ಯ ಹೆಚ್ಚಿಸುವುದು, ಮಹಿಳೆಯರು ರಾಜಕೀಯ ಮತ್ತು ಆಡಳಿತದಲ್ಲಿ ಭಾಗವಹಿಸುವಂತೆ ಅರಿವು ಮೂಡಿಸುವುದು ಹಾಗೂ ರಾಜ್ಯದ ಅಭಿವೃಧ್ಧಿ ಪ್ರಕ್ರಿಯೆಗಳಿಗೆ ಚಾಲನೆಯನ್ನು ನೀಡುವುದು ಇತ್ಯಾದಿಗಳ ವಿಕೇಂದ್ರಿಕರಣದ ಮೂಲಕ ನಗರ ಆಡಳಿತ ವ್ಯವಸ್ಥೆಯು ಪ್ರಮುಖವಾದ ಪಾತ್ರವನ್ನು ವಹಿಸಿತ್ತದೆ.

ಪೂಜಾರಿ (2011) ಅವರ ಸಂಶೋಧನಾ ಗ್ರಂಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಅಧಿಕಾರ ವಿಕೇಂದ್ರಿಕರಣದಿಂದ ಸ್ಥಳೀಯ ಸಂಸ್ಥೆಗಳಲ್ಲಿ ಆದಂತಹ ಬದಲಾವಣೆ ವಿಕೇಂದ್ರಿಕರಣದಿಂದ ಆದ ಉಪಯೋಗ ಮತ್ತು ತೊಂದರೆಗಳು, ಪಂಚಾಯತಿಗಳಲ್ಲಿ ರಾಜಕೀಯ ಪಕ್ಷಗಳ ಭಾಗವಹಿಸುವಿಕೆ ಎಷ್ಟು ಪ್ರಭಾವ ಬೀರುತ್ತದೆ ಎಂಬುದನ್ನು ವಿಶ್ಲೇಸಿದ್ದಾರೆ. ಹಾಗೂ ಅಧಿಕಾರ ವಿಕೇಂದ್ರಿಕರಣದಿಂದಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ವರ್ಗದ ಜನರಿಗೂ ರಾಜಕೀಯ ಭಾಗವಹಿಸುವಿಕೆ ಸಾಧ್ಯ ಎಂದಿದ್ದಾರೆ.

ಭಾರ್ಗವ (1996) ರವರು ತಮ್ಮ ಲೇಖನದಲ್ಲಿ ವಿಕೇಂದ್ರಕರಣದ ಬಗ್ಗೆ ತಿಳಿಸುತ್ತಾ ಅಧಿಕಾರ ವಿಕೇಂದ್ರಿಕರಣ ಎಂಬುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸುತ್ತಿದೆ.ಮಹಿಳೆಯರ ಪಾಲಿಗೆ ಈ ವಿಕೇಂದ್ರಿಕರಣ ವ್ಯವಸ್ಥೆಯು ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರವನ್ನು ಪಡೆಯುವ ಮಟ್ಟಿಗೆ ಮಾತ್ರ ಎಂದಿದ್ದಾರೆ.

ಉಮೇಶ್ (2009) ರವರು ತಮ್ಮ ಲೇಖನದಲ್ಲಿ ಮೊದಲಿಗೆ ಆಧುನಿಕ ಭಾರತದ ಹಿನ್ನಲೆ, ವಸಾಹತುಶಾಹಿ ಆಡಳಿತ ವ್ಯವಸ್ಥೆಯಲ್ಲಿದ್ದ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ಮತ್ತು

ರಿಪ್ಪನ್ ಆಯೋಗ ಬಂದ ನಂತರ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಗೆ ಸಂಬಂಧಿಸಿದಂತೆ ಸ್ಥಳೀಯ ಸರಕಾರದಲ್ಲಿ ರಾಜಕೀಯ ಭಾಗವಹಿಸುವಿಕೆಯಲ್ಲಿ ಆದ ಬದಲಾವಣೆ, ಬಲವಂತರಾಯ ಮೆಹತಾ ಸಮಿತಿಯ ವರದಿ, ಪಿ. ವಿ. ನರಸಿಂಹರಾವ್‌ರವರು ಸ್ಥಳೀಯ ಆಡಳಿತದಲ್ಲಿ ತಂದ ಬದಲಾವಣೆಯ ಜೊತೆಗೆ ಎಲ್ಲಾ ಸಮುದಾಯದ ಜನರು ಸ್ಥಳೀಯ ಆಡಳತದಲ್ಲಿ ಸಕ್ರಿಯ ಭಾಗವಹಿಸುವಿಕೆಯಲ್ಲಿ ತೊಡಗುವುದರ ಮೂಲಕ ವಿಕೇಂದ್ರಿಕರಣ ಸಾಧ್ಯ ಎಂದಿದ್ದಾರೆ.

ಚಕ್ರವರ್ತಿ (2008) ರವರು ತಮ್ಮ ಲೇಖನದಲ್ಲಿ ಅಧಿಕಾರ ವಿಕೇಂದ್ರಿಕರಣವು 1960 ರಲ್ಲಿ ಎಲ್ಲಾ ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ಜಾರಿಗೆ ಬಂದಿತು ಎಂದಿದ್ದಾರೆ.ಅಧಿಕಾರ ವಿಕೇಂದ್ರಿಕರಣವು ಜನರು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ ಎಂದಿದ್ದಾರೆ.

ದತ್ತ, ಸೇನ್ (2009) ರವರು ತಮ್ಮ ಲೇಖನದಲ್ಲಿ ಅಧಿಕಾರ ವಿಕೇಂದ್ರಿಕರಣವು ಆಡಳಿತದ ಒಂದು ತತ್ವ ಎಂದಿದ್ದಾರೆ.

೨.೩ ಮಹಿಳಾ ಸಬಲೀಕರಣ

ಸಬಲೀಕರಣ ಎನ್ನುವುದು ಅಶಕ್ತರಲ್ಲಿ ಜಾಗೃತಿಯನ್ನು ಉಂಟುಮಾಡಿ ತಮಗೆ ಬೇಕಾಗಿರುವುದನ್ನು ಪಡೆಯಲು ಅವರನ್ನು ಸಮರ್ಥರನ್ನಾಗಿ ಮಾಡುವುದೇ ಸಬಲೀಕರಣವಾಗಿದೆ.

ಮಹಿಳಾ ಹಕ್ಕುಗಳು ಹಾಗೂ ಮಾನವ ಹಕ್ಕುಗಳು ಎಂಬ ಹೇಳಿಕೆ ತನ್ನ ಅರ್ಥವ್ಯಾಪ್ತಿಯೊಳಗೆ ಕೇವಲ ನಾಗರಿಕ ಹಾಗೂ ರಾಜಕೀಯ ಹಕ್ಕುಗಳನ್ನಷ್ಟೆ ಒಳಗೊಂಡಿಲ್ಲ. ಬದಲಾಗಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳನ್ನು ಒಳಗೊಂಡಿದೆ. ಹಕ್ಕುಗಳನ್ನು ಮಹಿಳೆಯರಿಗೆ ಒದಗಿಸುವುದರಿಂದ ಮಹಿಳೆಯರನ್ನಷ್ಟೇ ಸಶಕ್ತಗೊಳಿಸಿದಂತಾಗದೆ ಪ್ರತಿಯೊಬ್ಬರ ಹಕ್ಕುಗಳನ್ನು ಖಾತ್ರಿಪಡಿಸಿದಂತಾಗುತ್ತದೆ.

ಜಾಕಿಮೋ ತಾನಿಯಾ (2017) ಡೆಹರಾಡೂನ್ನ ಮುನ್ಸಿಪಲ್ ಕೌನ್ಸಿಲ್ನಲ್ಲಿರುವ ಮಹಿಳಾ ಸಬಲೀಕರಣದ ಬಗ್ಗೆ ತಿಳಿಸುತ್ತಾ ಮಹಿಳಾ ರಾಜಕೀಯ ಭಾಗವಹಿಸುವಿಕೆ ಯಶಸ್ವಿಯಾಗಬೇಕಾದರೆ ಮಹಿಳೆಯರಲ್ಲಿ ಸ್ವಸಬಲೀಕರಣ ಅಗತ್ಯ.ಸಬಲೀಕರಣ ಎನ್ನುವುದು ಮಹಿಳೆಯರ ಬೇಡಿಕೆಗೆ ಅನುಗುಣವಾಗಿ ಸಂಶೋಧನೆಯ ಆಧಾರದ ಮೇಲೆ ನಡೆಯಬೇಕು ಎಂದಿದ್ದಾರೆ.ಅದೇ ರೀತಿಯಲ್ಲಿ ಆಯ್ಕೆಯಾದ ಮಹಿಳಾ ಜನಪ್ರತಿನಿಧಿಗಳಲ್ಲಿ ಅವರ ಕಾರ್ಯದರ್ಕ್ಷತೆಯನ್ನು ಹೆಚ್ಚಿಸಲು ವ್ಯಕ್ತಿತ್ವ ವಿಕಸನ ಜ್ಞಾನ, ಕೌಶಲ್ಯ, ಅಭಿವೃದ್ಧಿ

ಯೋಜನೆಯಂತಹ ಬೇರೆ ಬೇರೆ ಕಾರ್ಯಕ್ರಮಗಳನ್ನು ಕೈಗೊಂಡು ಅವರನ್ನು ಸಬಲೀಕರಣ ಪ್ರಕ್ರಿಯೆಗೆ ಒಳಪಡಿಸಬಹುದು ಎಂದಿದ್ದಾರೆ.

ಥಾಕೂರ್ ಮಿನ್ನಿ (2010) ಒರಿಸ್ಸಾ ರಾಜ್ಯದ ಸಮಸ್ತಿಪುರಾ ಜಿಲ್ಲೆಯಲ್ಲಿ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಬಗ್ಗೆ ಅಧ್ಯಯನವನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ನಡೆಸಿದ್ದಾರೆ.ಈ ಅಧ್ಯಯನದಲ್ಲಿ ಅವರು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಗೆ ತೊಡಕಾಗಿರುವ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆರ್ಥಿಕ ಕೌಟುಂಬಿಕ ಅಂಶಗಳನ್ನು ತೀಕ್ಷ್ಣ ದೃಷ್ಠಿಯ ವಿಶ್ಲೇಷಣೆಯ ಜೊತೆಗೆ ಅವುಗಳ ನಿವಾರಣೆಗೆ ಕೈಗೊಳ್ಳಬೇಕಾದ ಯೋಜನೆ, ನೀತಿ ಮತ್ತು ತಂತ್ರಗಳ ಬಗ್ಗೆ ತಿಳಿಸಿದ್ದಾರೆ. 73ನೇ ತಿದ್ದುಪಡಿಯ ಮಾಹಿತಿಯ ವಿಶ್ಲೇಷಣೆಯ ಕುರಿತು ಸಮಸ್ತಿಪುರ ಜಿಲ್ಲೆಯ ಜನಾಭಿಪ್ರಾಯ, 1992ರ ಕಾಯಿದೆಯು ಜಾರಿಗೆ ಬರುವ ಮೊದಲು ಸಮಸ್ತೀಪುರದ ಜನರಿಗೆ ರಾಜಕೀಯ ಭಾಗವಹಿಸುವಿಕೆಯ ಆಸಕ್ತಿ, ರಾಜಕೀಯ ಚಟುವಟಿಕೆಯ ಅರಿವು ಸರಿಯಾಗಿ ಇರಲಿಲ್ಲ. ಈ ಕಾಯಿದೆಯಲ್ಲಿ ನೀಡಿದ ಮೀಸಲಾತಿಯು ಇಲ್ಲಿಯ ಜನರಿಗೆ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶವನ್ನು ಮಾಡಿಕೊಟ್ಟಿದ್ದು ಇವರು ಕಂಡುಕೊಂಡಂತೆ ಮಹಿಳೆಯರ ಅಶಕ್ತತೆ ಮತ್ತು ದುರ್ಬಲತೆಯೊಂದೇ ಮಹಿಳೆಯರ ಹಿಂದುಳಿಯುವಿಕೆಗೆ ಕಾರಣವಾದ ಅಂಶವಲ್ಲ ಬದಲಾಗಿ ಮಹಿಳೆಯರು ಅದಕ್ಕೆ ಪ್ರತಿಕ್ರಿಯಿಸುವ ಶೈಲಿಯು ಪ್ರಮುಖ ಕಾರಣವೆಂದು ಹೇಳಿದ್ದಾರೆ. ಮಹಿಳಾ ಮೀಸಲಾತಿಯನ್ನು ಶೇಕಡಾ 50ರಷ್ಟ ಲೋಕ ಸಭೆ ಮತ್ತು ರಾಜ್ಯ ಸಭೆಯಲ್ಲಿ ಮುಂದುವರಿಸಿದರೆ ಮಹಿಳೆಯರ ರಾಜಕೀಯ ಸಬಲೀಕರಣ ಸಾಧ್ಯ.

ಗುಪ್ತ (2002), ತಮ್ಮ ಗ್ರಂಥದಲ್ಲಿ ಸಂವಿಧಾನ ಮಹಿಳೆಯರಿಗೆ ನೀಡಿರುವ ಅವಕಾಶಗಳು ರಾಜಕೀಯ ಸಾಮಾಜಿಕ, ಶೈಕ್ಷಣಿಕ ಹಕ್ಕುಗಳು, ರಾಜಕೀಯ ಪಕ್ಷಗಳಲ್ಲಿ ಮಹಿಳೆಯರ ಪಾತ್ರ, ಹೋರಾಟ ಮಹಿಳೆಯರ ಶೋಷಣೆ, ಆಚರಣೆ, ಅಸಮಾನತೆಯ ಬಗ್ಗೆ ತಿಳಿಸಿರುತ್ತಾರೆ.

ಕೊತಾಯ್ ಜಯ (1995), ಶೆರಿನ್ (2000)ರವರ ಪ್ರಕಾರ ಮಹಿಳಾ ಸಬಲೀಕರಣ ಎನ್ನುವ ಪರಿಕಲ್ಪನೆಯನ್ನು ಸರ್ಕಾರವು ಜಾರಿಗೆ ತಂದಿದ್ದರೂ ಇಂದಿಗೂ ಮಹಿಳೆಯರ ಸ್ಥಾನಮಾನದಲ್ಲಿ ಯಾವುದೇ ರೀತಿಯ ಬದಲಾವಣೆಯಾಗದಿರುವುದು ಮಹಿಳೆಯರ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿರುವುದು, ಶಿಕ್ಷಣದಲ್ಲಿ ಸುಧಾರಣೆಯಾಗದಿರುವುದು ಮತ್ತು ವ್ಯಕ್ತಿ ನಿರ್ವಹಣೆಯಲ್ಲಿ ಆಗುತ್ತಿರುವ ಕಿರುಕುಳ ಹೆಚ್ಚುತ್ತಿರುವುದರಿಂದ ಇಂದಿನ ಪರಿಸ್ಥಿತಿಯಲ್ಲಿ ಮಹಿಳಾ ಸಬಲೀಕರಣ ಹಿನ್ನಡೆಯಾಗುತ್ತಿದೆ ಎಂದಿದ್ದಾರೆ.

೨.೪ ಭಾರತದಲ್ಲಿ ಪಂಚಾಯತ್ ಕಾರ್ಯಗಳು

ಭಾರತದಲ್ಲಿ ಚುನಾವಣೆಗಳು ನಡೆಯುವುದು, ರಾಜಕೀಯ ಲೆಕ್ಕಾಚಾರಗಳು ತಿರುಗು-ಮುರುಗಾವುದು, ಗೆಲ್ಲುತ್ತಾರೆಂದವರು ಸೋಲುವುದು, ಸೋಲುತ್ತಾರೆಂದವರು ಗೆಲ್ಲುವುದು ಇವು ಯಾವುದು ನಮಗೆ ಹೊಸದೇನಲ್ಲ.

ಆದರೆ ಇತ್ತೀಚಿಗೆ ನಡೆಯುತ್ತಿರುವ ಚುನಾವಣೆಗಳಲ್ಲಿ ಮಹಿಳೆಯರ ಪ್ರತಿನಿಧಿ ಭಾಗವಹಿಸುವಿಕೆ ಸಕ್ರಿಯವಾಗಿದ್ದು ರಾಷ್ಟ್ರದಿಂದ ಹಿಡಿದು ಸ್ಥಳೀಯ ಸರ್ಕಾರದ ವ್ಯವಸ್ಥೆಯಲ್ಲೂ ಮಹಿಳೆಯರು ಚುನಾವಣೆಯಲ್ಲಿ ಪ್ರಚಂಡ ಜಯವನ್ನು ಗಳಿಸಿ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ಆಡಳಿತವನ್ನು ನಡೆಸುತ್ತಿರುವುದು ಒಂದು ವಿಶೇಷವೇ ಆಗಿದೆ.

ಪುರುಷ ಪ್ರಾಧಾನ್ಯತೆಯೆಂಬ ಮಂಜಿನ ಮುಸುಕನ್ನು ಗುದ್ದಿ ಮಹಿಳೆಯರ ಅಧಿಕಾರದ ಸ್ಥಾನಕ್ಕೆ ಬಂದಿರುವುದು ಮೇಲ್ನೋಟಕ್ಕೆ ಖುಷಿ ತರುವ ವಿಚಾರವಾಗಿದೆ.

ಗೋವಿಂದ (1997) ರವರ ಪ್ರಕಾರ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಮಹಿಳೆಯರಿಗೆ ಗುರುತಿಸುವಿಕೆ ಮತ್ತು ಪ್ರೋತ್ಸಾಹವನ್ನು ಕೊಟ್ಟರೆ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದು ಜೊತೆಗೆ ಹಿಂದುಳಿದ ತಾಲ್ಲೂಕುಗಳ ಮಹಿಳಾ ಪ್ರತಿನಿಧಿಗಳ ಕಾರ್ಯಗಳನ್ನು ತಿಳಿಸಿದ್ದಾರೆ.

ಮಜುಂದಾರ್; ಬನವಾರ್ ಸಿಂಗ್ (1997) ಪಂಚಾಯತ್ ರಾಜ್ ಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆ, ಪ್ರಾಚೀನಕಾಲದ ಪಂಚಾಯಿತಿಗಳು, ಹಳ್ಳಿಗಳಲ್ಲಿ ಇರುವ ಸಮಿತಿಗಳು, ಆ ಸಮಿತಿಗಳಿಗೆ ಆವರಿಸಿರುವ ಅರ್ಹತೆಗಳ ಬಗ್ಗೆ ತಿಳಿಸಿರುತ್ತಾರೆ. ಇದರಿಂದ ಕಂಡುಬರುವ ವಿಷಯವೇನೆಂದರೆ ಪ್ರಾಚೀನ ಮತ್ತು ಪ್ರಸ್ತುತ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಯಾಗಿರುವುದನ್ನು ಕಾಣಲು ಸಾಧ್ಯವಾಗುತ್ತದೆ.

ಶಾಹಾ; ಅಮುಲ್ (1976) ಗ್ರಾಮೀಣಾಭಿವೃದ್ಧಿ ಯೋಜನೆಗಳು, ಈ ಯೋಜನೆಗಳು ಹೇಗೆ ಜನರಿಗೆ ತಲುಪಿಸುವುದು, ಗ್ರಾಮೀಣಾಭಿವೃದ್ಧಿ ಕಾರ್ಯಗಳ ಬಗ್ಗೆ, ಗ್ರಾಮೀಣ ನಾಯಕನ ಪಾತ್ರದ ಬಗ್ಗೆ ತಿಳಿಸಿರುತ್ತಾರೆ.

ಮ್ಯಾಥ್ಯೂ (1994): ನರಸಿಂಹಮೂರ್ತಿ (2004), ನೀರಜ್ (2001) ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರ, ಅದರಿಂದ ಗ್ರಾಮೀಣ ಪ್ರದೇಶದ

ಜನರಲ್ಲಿ ಹೇಗೆ ಸಬಲೀಕರಣ ಸಾಧ್ಯವಾಗುತ್ತದೆ, ಪ್ರಜಾಪ್ರಭುತ್ವ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಹೇಗೆ ಪರಿಣಾಮವನ್ನು ಬೀರಿದೆ ಎಂದಿದ್ದಾರೆ.

ನೀರಜ್ (2001): ಪಾರ್ವತಿ (1975) ಅವರು ತಮ್ಮ ಲೇಖನದಲ್ಲಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪಂಗಡಗಳು, ಅವರಿಗೆ ನೀಡಲಾಗಿರುವ ಮೀಸಲಾತಿ, ಪಂಚಾಯತ್ ರಾಜ್ ವ್ಯವಸ್ಥೆ ಅವರ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ತಿಳಿಸಿದ್ದಾರೆ.

ಗ್ರಾಮೀಣ ಪ್ರದೇಶದ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಯಲ್ಲಿ ನಾಯಕನ ಪಾತ್ರ, ನಾಯಕತ್ವ ಗುಣ, ನಾಯಕತ್ವದಿಂದಾಗಿ ಸಮಾಜದಲ್ಲಿ ಆದ ಬದಲಾವಣೆ, ನಾಯಕತ್ವದಲ್ಲಿ ಇರುವ ತೊಂದರೆಗಳ ಬಗ್ಗೆ ವ್ಯಕ್ತಪಡಿಸಿದ್ದಾರೆ. ಜೊತೆಗೆ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಾಗ ನಾಯಕರ ಬದಲಾವಣೆಯಾದರೆ ಅಭಿವೃದ್ಧಿ ಕಾರ್ಯ ಹೇಗೆ ಕುಂಠಿತಗೊಳ್ಳುತ್ತದೆ ಎಂಬುದನ್ನು ತಮ್ಮ ಗ್ರಂಥಗಳಲ್ಲಿ ಮಂಡಿಸಿರುತ್ತಾರೆ (ಭಾರ್ಗವ, 1979; ಈಶ್ವರನ್, 1970; ಸಿಂಗ್, 1960; ಎಸ್. ಪಿ. 1967).

ಬೆಟ್ಲೆ (1969) ಪಂಚಾಯಿತಿ ವ್ಯವಸ್ಥೆಯಲ್ಲಿ ಸುಮಾರು 40 ದಶಕಗಳಂದ ಇದ್ದ ಬ್ರಾಹ್ಮಣರ ಪ್ರಾಬಲ್ಯದ ಬಗ್ಗೆ ತಿಳಿಸಿರುತ್ತಾರೆ ಹಾಗೂ ಇತ್ತೀಚೆಗೆ ಬ್ರಾಹ್ಮಣೇತರ ಅಧಿಪತ್ಯವಿದೆ ಎಂಬುದನ್ನು ತಿಳಿಸಿರುತ್ತಾರೆ.

ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ ಜಮ್ಮುಕಾಶ್ಮೀರ, ಮದ್ರಾಸ್ ಪ್ರಾಂತ್ಯ, ಆಂಧ್ರಪ್ರದೇಶ, ಗೋದಾವರಿ, ಪಶ್ಚಿಮ ಬಂಗಾಲ ಮೊದಲಾದ ಪ್ರದೇಶಗಳ ಬಗ್ಗೆ ಕ್ಷೇತ್ರಾಧ್ಯಯನವನ್ನು ಮಾಡಿ ಅಲ್ಲಿಯ ಪಂಚಾಯತ್ ವ್ಯವಸ್ಥೆಯ ವಿವರಣೆ, ಹೋಲಿಕೆ, ಮಹಿಳೆಯರ ಭಾಗವಹಿಸುವಿಕೆ, ರಾಜಕೀಯ ಸಾಮರ್ಥ್ಯದ ಬಗ್ಗೆ ಇವರು ತಮ್ಮ ಲೇಖನಗಳಲ್ಲಿ ತಿಳಿಸಿರುತ್ತಾರೆ. (ರಾಹುಲ್, 1998; ಮುತ್ತಯ್ಯ, 1999; ಲೆವಿಸ್, 1958; ಅಶ್ವಿನಿ, 2012).

೨.೫ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿಗಳು

19ನೇ ಶತಮಾನದಿಂದಷ್ಟೇ ಭಾರತದ ಮಹಿಳೆಯರ ಬಗೆಗಿನ ಚಾರಿತ್ರಕ ಸಂಗತಿಗಳು, ದಾಖಲೆಗಳು ದೊರೆಯುವುದು.ಪ್ರಾಚೀನ ಕಾಲದಲ್ಲಿ ಮಹಿಳೆಯರ ಸ್ಥಿತಿಗಳು ಉತ್ತಮವಾಗಿದ್ದಿರಬಹುದಾದರೂ ಸಾಕಷ್ಟು ದೀರ್ಘಕಾಲದಿಂದಲೇ ಅವು ದುಃಸ್ಥಿತಿಗಿಳಿಯುತ್ತಾ ಬಂದಿರುವ ಸಂಗತಿಯನ್ನು ಹಲವಾರು ದಾಖಲೆಗಳು ಸ್ಪಷ್ಟಪಡಿಸುತ್ತಾ ಬಂದಿದೆ.

ಬಸವ ರಾಜ (2005) ಅವರ ಪ್ರಕಾರ ಲಿಂಗ ವರ್ಣಭೇದವನ್ನು ಅಳಿಸಿಹಾಕುವುದರ ಮೂಲಕ ನಿಜವಾದ ಸಮಾನತೆಯನ್ನು ಸಾಧಿಸಬಹುದು.ಸಮಾನತೆಯ ತಾತ್ವಿಕ ನೆಲೆಯನ್ನು ಅಳವಡಿಸಿಕೊಂಡಾಗ ಮಾತ್ರ ಮಹಿಳೆಯರ ಅಭಿವೃಧ್ಧಿ ಸಾಧ್ಯ ಎಂದಿದ್ದಾರೆ.

ವಸು (2005), ಗಾಯತ್ರಿ (2006) ಅವರ ಪ್ರಕಾರ ತಮ್ಮ ಲೇಖನದಲ್ಲಿ ಬ್ರಿಟೀಷರ ಆಗಮನದಿಂದ ವಿದೇಶಿ ಆಡಳಿತಗಾರರಿಂದ ಭಾರತದ ಮಹಿಳೆಯರ ಸ್ಥಿತಿಗತಿಗಳ ಮೇಲಾದ ಪರಿಣಾಮದ ಬಗ್ಗೆ ತಿಳಿಸಿರುತ್ತಾರೆ.ಅದೇ ರೀತಿಯಾಗಿ ಸತಿ ಪಧ್ದತಿಯ ಆಚರಣೆ ಎಂಬುದು ಮಹಿಳೆಯರ ಮೇಲೆ ಯಾವ ಸಾಮಾಜಿಕ ಪರಿಣಾಮ ಉಂಟುಮಾಡಿದೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

ಅಶ್ವಿನಿ (2001) ತಮ್ಮ ಲೇಖನದಲ್ಲಿ ಪ್ರಜಾಪ್ರಭುತ್ವವಾದಿ, ರಾಜಕೀಯ ಚಿಂತಕರೆನಿಸಿರುವ ರುಸೋರವರು ಸ್ತ್ರೀಯರ ಸ್ವಾತಂತ್ರ್ಯದ ನಿಲುವನ್ನು ತಿಳಿಸಿರುತ್ತಾರೆ.ಅಲ್ಲದೆ ಸ್ತ್ರೀಯರನ್ನು ದುರ್ಬಲರೂ, ದುರ್ದೈವಿಗಳು ಹಾಗೂ ಅವರಿಗೆ ನೀಡುವ ಶಿಕ್ಷಣ ಪಧ್ದತಿ ಯಾವ ರೀತಿಯಾಗಿ ಇರಬೇಕು ಎಂಬುದನ್ನು ತಿಳಿಸಿರುತ್ತಾರೆ.

ಚಂದ್ರಶೇಖರ್ (2005) ಮಹಿಳೆಯನ್ನು ಕುಟುಂಬಕ್ಕೆ ಸಂವಾದಿಯಾಗಿ ಗಂಡ ಮಕ್ಕಳ ಹಿತವನ್ನು ಕಾಪಾಡುವ ಸಾಧನ, ಸಮಾಜ ಅವಳನ್ನು ಸಾಮಾಜಿಕ ಘಟಕವಾಗಿ ಒಪ್ಪಿಕೊಳ್ಳಲು ಸಿಧ್ಧವಿಲ್ಲ ಎಂದಿದ್ದಾರೆ.

ಗೀತಾ (2001) ತಮ್ಮ ಗ್ರಂಥದಲ್ಲಿ ಮಹಿಳೆಯರ ಖಾಸಗಿ ಜೀವನದ ಬಗ್ಗೆ, ಪಾಶ್ಚಾತ್ಯೀಕರಣ ಮಹಿಳೆಯರ ಮೇಲೆ ಬೀರಿದ ಪರಿಣಾಮ, ಹಿಂದೂ ಸಮಾಜದ ಮಹಿಳೆಯ ಶೋಷಿತ ಪರಿಸ್ಥಿತಿ ಮತ್ತು ಹಿಂದೂ ಸಾಂಪ್ರದಾಯಿಕ ಆಚರಣೆ ಮತ್ತು ಪಧ್ದತಿಗಳು ಮಹಿಳೆಯರ ಮೇಲೆ ಬೀರಿದ ಪರಿಣಾಮವನ್ನು ವ್ಯಕ್ತಪಡಿಸಿದ್ದಾರೆ.

ದೀವಾನ್ (2014) ತಮ್ಮ ಲೇಖನದಲ್ಲಿ ಟಾಟ ಸ್ಟೀಲ್ ಕಂಪೆನಿಯ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಮಾಡುವ ಪ್ರಯತ್ನದ ಬಗ್ಗೆ ಹೇಳುತ್ತಾ ಇಲ್ಲಿ ಕೆಲಸ ಮಾಡುವ ಮಹಿಳೆಯರ ಸಬಲೀಕರಣವು ಯಾವ ರೀತಿ ಆಗುತ್ತದೆ ಎಂದರೆ ಸಬಲೀಕರಣವು ಅವರ ಮನೆಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನಾಯಕತ್ವ ವಹಿಸುವಲ್ಲಿ ದೃಢತೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಅಲ್ಲದೆ ಸಬಲೀಕರಣದಿಂದಾಗಿ ಮಾತ್ರ ಮರ್ತತ್ಯ ದರ ಬಾಲ್ಯಾವಸ್ಥೆಯಲ್ಲಿ ಆಗುವ ಗರ್ಭಧಾರಣೆ, ಕುಟುಂಬ ಯೋಜನೆಯ ಬಗ್ಗೆ ಮಹಿಳೆಯರಿಗೆ ಗಮನ ಹರಿಸಲು ಸಾಧ್ಯವಾಗಿದೆ.

ಒಟ್ಟಿನಲ್ಲಿ ಈ ಮೇಲಿನ ಎಲ್ಲಾ ಸಾಹಿತ್ಯಗಳನ್ನು ವಿಮರ್ಶೆ ಮಾಡಿದಾಗ ಬಹುತೇಕ ಅಂಶಗಳಲ್ಲಿ ಸಾಮ್ಯತೆ ಇರುವುದನ್ನು ಕಾಣಬಹುದಾಗಿದೆ.ಭಾರತದಲ್ಲಿ ಸ್ವಾತಂತ್ರ್ಯ ನಂತರ ಲೆಕ್ಕವಿಲ್ಲದಷ್ಟು ಸರಕಾರಿ ಮತ್ತು ಸರಕಾರೇತರ ಕಾರ್ಯಕ್ರಮಗಳು ಅನುಷ್ಠಾನಗೊಂಡರೂ ಮಹಿಳೆಯರ ಸ್ಥಿತಿಗತಿಯಲ್ಲಿ ಮಹತ್ತರ ಬದಲಾವಣೆ ಕಂಡು ಬಂದಿಲ್ಲ ಎನ್ನಬಹುದಾಗಿದೆ.ಮಹಿಳೆಯರ ಸಬಲೀಕರಣ ಕೇವಲ ಸಾಂಕೇತಿಕ ಮತು ಪ್ರಮಾಣಾತ್ಮಕ ಏರಿಕೆಯನ್ನು ಕಾಣುವುದು ಮಾತ್ರವಲ್ಲ ಬದಲಾಗಿ ಸಕರಾತ್ಮಕ ಮುನ್ನಡೆಯನ್ನು ಸಾಧಿಸುವುದಾಗಿದೆ.ಮಹಿಳೆಯರು ಮೂಢನಂಬಿಕೆ, ಸಂಪ್ರದಾಯ ಸಂಕೋಲೆಗಳಿಂದ ಮುಕ್ತರಾಗಬೇಕು.ಹಿಂಜರಿಕೆ, ಕೀಳರಿಮೆ, ಮುಜುಗರ ಮತ್ತು ಸಂಕೋಚ ಸ್ವಭಾವವನ್ನು ಬಿಟ್ಟು ಧೈರ್ಯವಾಗಿ ತಮ್ಮ ಮುಂದಿರುವ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಬೇಕು.

ಮೇಲೆ ವಿಶ್ಲೇಷಿಸಿದಂತಹ ಅಧ್ಯಯನಗಳು ಮಹಿಳಾ ಮೀಸಲಾತಿ, ಮಹಿಳಾ ಸಬಲೀಕರಣ, ಅಧಿಕಾರ ವಿಕೇಂದ್ರಿಕರಣ, ಪಂಚಾಯತ್ ಕಾರ್ಯಗಳು, ಮಹಿಳಾ ಪ್ರಾತಿನಿಧ್ಯದ ಬಗ್ಗೆ, ಮಹಿಳೆಯರು ಅನುಭವಿಸುವ ಸವಾಲುಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಆದರೆ ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರದ ಬಗ್ಗೆ ಸಮಗ್ರ ಅಧ್ಯಯನದ ಕೊರತೆ ಕಂಡುಬಂದಿದೆ. ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ ಅವರಲ್ಲಿರುವ ರಾಜಕೀಯ ಜ್ಞಾನದ ಅರಿವು, ಮಾಹಿತಿ, ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳಾ ದೃಷ್ಟಿಕೋನ ಮತ್ತು ಅವರ ಭಾಗವಹಿಸುವಿಕೆಯ ಅಧ್ಯಯನಗಳ ಅಭಾವವಿರುವುದರಿಂದ ಗುಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಸಂಶೋಧನೆಗಳ ಅಗತ್ಯತೆಗಳು ಕಂಡು ಬರುವುದರಿಂದ ಈ ಅಧ್ಯಯನಗಳು ಪೂರಕವಾಗಿರುವುದು ಗಮನಾರ್ಹ ಮತ್ತು ಮಹಿಳೆಯರ ಅಸ್ಮಿತೆಯನ್ನು ಛಾಪು ಮೂಡಿಸುವುದಕ್ಕೆ ಸಹಕಾರಿ.

ಅಧ್ಯಾಯ-೩


ದತ್ತಾಂಶ ವಿಶ್ಲೇಷಣೆ

ಮಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿ

ಈ ಅಧ್ಯಾಯವು ಮಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿ, ಪಾಲಿಕೆಯ ಸಾಮಾನ್ಯ ಮಾಹಿತಿ, ಮಹಿಳಾ ಸದಸ್ಯರುಗಳಿಂದ ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆ, ಚುನಾಯಿತ ಮಹಿಳಾ ಪ್ರತಿನಿಧಿಗಳ ಆಡಳಿತಾನುಭವ, ಅರಿವಿನ ಮಾಹಿತಿಯನ್ನು ಒಳಗೊಂಡಿದೆ.

೩.೧ ಮಂಗಳೂರು ಮಹಾನಗರ ಪಾಲಿಕೆಯ ಚಿತ್ರಣ/ಪಕ್ಷಿನೋಟ

1979 ವರೆಗೆ ಚುನಾವಣೆ ಮೂಲಕ ಆಯ್ಕೆಯಾದ ಪ್ರತಿನಿಧಿಗಳ ಅಧಿಕಾರ ನಡೆಯುತ್ತಿತ್ತು. 1979 ರಲ್ಲಿ ಮುನ್ಸಿಪಾಲಿಟಿಯನ್ನು ರದ್ದುಗೊಳಿಸಲಾಯಿತು. ಚುನಾಯಿತ ಪ್ರತಿನಿಧಿಗಳ ಅಧಿಕಾರವೂ ಸ್ಥಗಿತವಾಯಿತು. ಮುನ್ಸಿಪಾಲಿಟಿಯ ಆಡಳಿತಾಧಿಕಾರಿ (ಅಂದಿನ ಜಿಲ್ಲಾಧಿಕಾರಿ) ಯವರ ಅಧಿಕಾರಕ್ಕೆ ಒಳಪಟ್ಟಿತು. ಆಗ ನಾಗರಿಕರು ಮಂಗಳೂರು ಪುರಸಭೆಯನ್ನು ನಗರಪಾಲಿಕೆಯಾಗಿ ಉನ್ನತೀಕರಿಸಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟರು. ಆದರೆ ನಗರ ಪಾಲಿಕೆಯಾಗಲು ಅಗತ್ಯವಾದ ಜನಸಂಖ್ಯೆ ಇರಲಿಲ್ಲ. ಈ ಕಾರಣದಿಂದಾಗಿ 1980 ರಲ್ಲಿ ನಗರದ ಸುತ್ತಮುತ್ತಲ್ಲಿದ್ದ 11 ಗ್ರಾಮಗಳನ್ನು ಮಂಗಳೂರು ನಗರಕ್ಕೆ ಸೇರ್ಪಡೆಗೊಳಿಸಲಾಯಿತು. ಹೀಗೆ ಸೇರ್ಪಡೆಯಾದ ಪ್ರದೇಶಗಳು ಅಳಪೆ, ಕಂಕನಾಡಿ, ಕದ್ರಿ, ಕಾವೂರು, ಕುಂಜತ್ತಬೈಲ್, ಕುಡುಪು, ಕೂಳೂರು, ಜಪ್ಪಿನಮೊಗರು, ಪಚ್ಚನಾಡಿ, ಮರಕಡ, ಮರೋಳಿ. 1980 ರವರೆಗೆ ಮಂಗಳೂರು ನಗರ ಸಭೆಯಾಗಿದ್ದ ಅದರ ವಿಸ್ತೀರ್ಣ 22.70 ಚ.ಕಿ.ಮೀ ಇತ್ತು. ಈ ಗ್ರಾಮಗಳ ಸೇರ್ಪಡೆಯಿಂದ ಪುರಸಭೆ ದಿನಾಂಕ 23-03-1980 ರಲ್ಲಿ ಮಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡಿತು. ನಂತರವೂ ಈ ನಗರ ಪಾಲಿಕೆ ಆಡಳಿತಾಧಿಕಾರಿಯವರ ವಶದಲ್ಲೇ ಇತ್ತು. ನಗರ ಪಾಲಿಕೆಯಾದ ಬಳಿಕ 1983 ರಲ್ಲಿ ಪದವು ಮುನ್ಸಿಪಾಲಿಟಿಯನ್ನು ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳಲಾಯಿತು. ಆಗ ವಿಸ್ತೀರ್ಣ 73.60 ಚ.ಕಿ.ಮೀ 4.12.1984 ರಲ್ಲಿ ಮಂಗಳೂರು ನಗರ ಪಾಲಿಕೆಗೆ ಚುನಾವಣೆ ನಡೆಯಿತು ನಗರದ ಜನಸಂಖ್ಯೆ 1,72,252 ಇದ್ದು ಮಹಾನಗರ ಪಾಲಿಕೆಯಾದಾಗ 2,52,775 ಆಗಿತ್ತು. 1995 ರಲ್ಲಿ ಸುರತ್ಕಲ್, ಮುಲ್ಕಿ, ಹೊಸಬೆಟ್ಟು, ಕುಳಾಯಿ, ಕಾಟಿಪಳ್ಳ ಇವನ್ನು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ಸೇರಿಸಿಕೊಳ್ಳಲಾಗಿರುತ್ತದೆ. ಆಗ ವಿಸ್ತೀರ್ಣ 133.20 ಚ.ಕಿ.ಮೀ 1997 ರಲ್ಲಿ ಮುಲ್ಕಿ ಪುರಸಭೆಯನ್ನು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಬಿಡುಗಡೆಗೊಳಿಸಿದ್ದು ಆಗ ವಿಸ್ತೀರ್ಣ 115.16 ಚ.ಕಿ.ಮೀ ದಿನಾಂಕ 10-04-2002 ರಲ್ಲಿ ಬಜಾಲ್, ಕಣ್ಣೂರು, ತಿರುವೈಲ್, ಕುಡುಪು ಪಂಚಾಯತ್ ಪ್ರದೇಶಗಳ ಸೇರ್ಪಡೆಯಿಂದ ಪ್ರಸಕ್ತ ವಿಸ್ತೀರ್ಣ 132.45 ಚ.ಕಿ.ಮೀರಷ್ಟಿದೆ (ರೈ 2016).


MANGALORE CITY CORPORATION
VARIOUS WARDS
N
WARD NO.
WARD NAME
COLOUR

ಮಂಗಳೂರು ಮಹಾನಗರ ಪಾಲಿಕೆ ಸಂರಚನೆ

ಕಳೆದ 37 ವರ್ಷಗಳಿಂದ ಚುನಾಯಿತ ಮಂಡಳಿ ಕಾರ್ಯ ನಿರ್ವಹಿಸುತ್ತಿದೆ. 2012 ರಿಂದ ನಗರದಲ್ಲಿ ಇರುವ ವಾರ್ಡುಗಳ ಸಂಖ್ಯೆ 60 ಚುನಾಯಿತ ಕಾರ್ಪೋರೇಟರ್‌ಗಳು: 60, ನಾಮಕರಣಗೊಂಡ ಕಾರ್ಪೋರೇಟರ್ ಗಳು: 5, ನಗರ ಪಾಲಿಕೆಯ ಚುನಾವಣೆಯ ನಂತರದ ಅಧಿಕಾರಾವಧಿ: 5 ವರ್ಷ, ಮೇಯರ್ ಅವಧಿ: 1 ವರ್ಷ, ಉಪಮೇಯರ್ ಅವಧಿ: 1 ವರ್ಷ, ಈಗ ನಗರ ಪಾಲಿಕೆಯಲ್ಲಿ 4 ಸ್ಥಾಯಿ ಸಮಿತಿಗಳಿದ್ದು ಪ್ರತಿ ಸಮಿತಿಗೆ 7 ಸದಸ್ಯರು: ಅವಧಿ 1 ವರ್ಷ: ಸ್ಥಾಯಿಸಮಿತಿಗಳ ಅದ್ಯಕ್ಷರು: ಅವಧಿ: 1 ವರ್ಷ.

೩.೧.೧ ಚುನಾಯಿತ ಪ್ರನಿಧಿಗಳ ಸಂರಚನೆ

ಚುನಾಯಿತ ಪ್ರತಿನಿಧಿಗಳ ಪೈಕಿ ಬಹುಮತ ಪಡೆದ ಪಕ್ಷ ಆಡಳಿತ ನಡೆಸುತ್ತದೆ. ಮೇಯರ್ ಉಪಮೇಯರ್ ಮತ್ತು ಸ್ಥಾಯಿ ಸಮಿತಿಗಳು ಆಡಳಿತದ ಪ್ರಮುಖ ಅಂಗಗಳು ನಗರ ಪಾಲಿಕೆಯ ಸದಸ್ಯರ ಸಭೆ ತಿಂಗಳಿಗೆ ಒಂದು ಬಾರಿ ನಡೆಯುತ್ತದೆ. ತುರ್ತು ಸಂದರ್ಭಗಳಲ್ಲಿ ಒಂದು ಅಥವಾ ಎರಡು ಸಭೆಗಳು ನಡೆಯಬಹುದು.

ಸಂವಿಧಾನದ 74ನೇ ತಿದ್ದುಪಡಿ ಪ್ರಕಾರ 2014 ರಂದು ನಗರ ಪಾಲಿಕೆಗೆ ಚುನಾವಣೆ ನಡೆದು 60 ಮಂದಿ ಸದಸ್ಯರು ಆಯ್ಕೆಗೊಂಡಿರುತ್ತಾರೆ. ಅವರಲ್ಲಿ 33 ಪುರುಷ ಸದಸ್ಯರು ಮತ್ತು 27 ಮಹಿಳಾ ಸದಸ್ಯರು. ಇವರಲ್ಲದೆ ಇಬ್ಬರು ಲೋಕಸಭ ಸದಸ್ಯರು, ನಾಲ್ಕು ಮಂದಿ ರಾಜ್ಯ ವಿಧಾನ ಸಭೆ ಸದಸ್ಯರು ಹಾಗೂ ಇಬ್ಬರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರೂ ಸಹ ನಗರ ಪಾಲಿಕೆಯ ನಾಮಕರಣಗೊಂಡ ಸದಸ್ಯರಾಗಿದ್ದು ಒಟ್ಟು ಸದಸ್ಯರ ಸಂಖ್ಯೆ 68 ಆಗಿದೆ. ಮಹಾನಗರ ಪಾಲಿಕೆಯಲ್ಲಿ ಪರಿಣಾಮಕಾರಿ ಆಡಳಿತಕ್ಕಾಗಿ ಐದು ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದೆ ಅವುಗಳೆಂದರೆ 1. ಸಾಮಾಜಿಕ ನ್ಯಾಯ ಸಮಿತಿ 2. ಆರೋಗ್ಯ ಸಮಿತಿ 3. ತೆರಿಗೆ ಮತ್ತು ಆರ್ಥಿಕ ಸಮಿತಿ 4. ತೆರಿಗೆ ಅಪೀಲು ಸಮಿತಿ 5. ಕಾಮಗಾರಿ ಸಮಿತಿ

ಪ್ರತಿ ಸಮಿತಿಯಲ್ಲಿ ಅಧ್ಯಕ್ಷರಲ್ಲದೇ ಎರಡರಿಂದ ಆರು ಮಂದಿ ಸದಸ್ಯರಿರುತ್ತಾರೆ. ಈ ಸಮಿತಿಗಳು ಶಾಸನ ಬದ್ಧ ಸ್ಥಾಯಿ ಸಮಿತಿಗಳಾಗಿದ್ದು ಪ್ರತಿ ತಿಂಗಳು ಸಭೆ ಸೇರಿ ಸಾರ್ವಜನಿಕ ಹಿತದೃಷ್ಟಿಯ ನಿರ್ಣಯಗಳನ್ನು ಕೈಗೊಳ್ಳುತ್ತವೆ

ಮೇಯರ್

ಮೇಯರ್ ಅಥವಾ ಮಹಾಪೌರರಿಗೆ ನಗರ ಪಾಲಿಕೆ ಸದಸ್ಯರ ಸಭೆಯ ಅದ್ಯಕ್ಷತೆ ವಹಿಸುವುದು, ಕಾನೂನು ಮತ್ತು ನಿಯಮಗಳ ಅಡಿಯಲ್ಲಿ ಬಂದ ತೀರ್ಮಾನಗಳನ್ನು ಜಾರಿಗೊಳಿಸಲು ಆಯುಕ್ತರಿಗೆ

ನಿರ್ದೇಶನ ನೀಡುವುದು, ಉಪ ಮೇಯರಿಗೆ ಸೂಕ್ತ ಅಧಿಕಾರ ನೀಡುವುದು ಹಣಕಾಸಿನ ಹೊರೆ ಇದ್ದ ಯಾವುದೇ ಕಾರ್ಯವನ್ನು ನಿರ್ಬಂಧಿಸುವುದು ಮುಂದಿನ ಮೇಯರ್ ಚುನಾವಣೆಯ ಅಧ್ಯಕ್ಷಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಪ್ರಮುಖ ಕರ್ತವ್ಯಗಳಾಗಿರುತ್ತವೆ.

ಉಪಮೇಯರ್

ಮೇಯರ್ ಎಂಟು ದಿನಗಳಿಗಿಂತ ಹೆಚ್ಚು ಗೈರು ಹಾಜರಾದಲ್ಲಿ ಅವರ ಅಧಿಕಾರದಲ್ಲಿರುವ ಎಲ್ಲ ಕೆಲಸ ಕಾರ್ಯಗಳನ್ನು ಉಪಮೇಯರ್ ನಡೆಸುವುದು ಆಡಳಿತ ಅಡಿಟ್ ಮತ್ತು ಲೆಕ್ಕಪತ್ರಗಳ ವರದಿಗಳನ್ನು ನೋಡಿಕೊಳ್ಳುವುದು ಉಪಮೇಯರ್ ರವರ ಪ್ರಮುಖ ಕರ್ತವ್ಯಗಳು.

ಸ್ಥಾಯಿಸಮಿತಿ

ನಗರ ಪಾಲಿಕೆಯಲ್ಲಿ 4 ಸ್ಥಾಯಿ ಸಮಿತಿಗಳಿರುತ್ತದೆ. ಈ ಸಮಿತಿಗಳಲ್ಲಿ ಹಣಕಾಸು ಮತ್ತು ತೆರಿಗೆ ಸ್ಥಾಯಿ ಸಮಿತಿ ಒಂದು ವರ್ಷ ಕಾಲ ನಗರದ ಹಣಕಾಸು, ತೆರಿಗೆ ಮತ್ತು ಅಹವಾಲುಗಳನ್ನು ಕುರಿತು ಪರಿಶೀಲನೆ ನಡೆಸುತ್ತದೆ. ಸಾರ್ವಜನಿಕ ಆರೋಗ್ಯ, ಶಿಕ್ಷಣ, ಮತ್ತು ಸಾಮಾಜಿಕ ನ್ಯಾಯ ಸ್ಥಾಯಿಸಮಿತಿ ಒಂದು ವರ್ಷ ಕಾಲ ನಗರದ ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಪರಿಶಿಷ್ಟ ಜಾತಿ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಸಾಮಾಜಿಕ ನ್ಯಾಯದ ಸ್ಥಾಪನೆ, ಕುರಿತು ಪರಿಶೀಲನೆ ನಡೆಸುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಒಂದು ವರ್ಷ ಕಾಲ ನಗರ ನಾಗರಿಕ ಸೌಲಭ್ಯ ನಗರ ಯೋಜನೆ ಮತ್ತು ಅಭಿವೃದ್ಧಿ ಕುರಿತು ಪರಿಶೀಲನೆ ನಡೆಸುತ್ತದೆ. ಲೆಕ್ಕಪತ್ರ ಸ್ಥಾಯಿಸಮಿತಿ ಒಂದು ವರ್ಷ ಕಾಲ ನಗರದ ಲೆಕ್ಕಪತ್ರ ಕುರಿತು ಪರಿಶೀಲನೆ ನಡೆಸುತ್ತದೆ.

ಆಯುಕ್ತರ ಅಧಿಕಾರಗಳು

ನಗರ ಪಾಲಿಕೆಯ ಎಲ್ಲ ಆಸ್ತಿ ಮತ್ತು ದಾಖಲೆಗಳ ಪರಿಶೀಲನೆ ಕೌನ್ಸಿಲ್ ಮತ್ತು ಸ್ಥಾಯಿಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸುವುದು. ನಗರ ಪಾಲಿಕೆಯ ಕೆಲಸಗಳ ಅನುಷ್ಠಾನ ಮತ್ತು ಪರಿಶೀಲನೆ ನಗರ ಪಾಲಿಕೆಯ ಅಧಿಕಾರಿಗಳು ಮತ್ತು ನೌಕರರ ಕಾರ್ಯನಿರ್ವಹಣೆಯ ಪರಿಶೀಲನೆ, ಸರ್ಕಾರಕ್ಕೆ ಸಲ್ಲಿಸಬೇಕಾದ ವಾರ್ಷಿಕ ವರದಿಯ ಸಿದ್ಧತೆ ನಗರಪಾಲಿಕಾ ಕಾಯ್ದೆ 1976 ರ ಕೆಳಗೆ ಬಾರದ ತೀರ್ಮಾನಗಳ ಬಗ್ಗೆ ಸಮಿತಿಗೆ ವರದಿ.

ನಗರ ಹಣಕಾಸು

ಕಂದಾಯದ ಮೂಲಕ ಪಡೆವ ಸಂಪನ್ಮೂಲಗಳು : ಆಸ್ತಿ ತೆರಿಗೆ, ಜಾಹೀರಾತು ತೆರಿಗೆ, ನೀರಿನ ತೆರಿಗೆ, ಪರವಾನಗಿ ಶುಲ್ಕ, ಕಟ್ಟಡ ಪರವಾನಿಗೆ ಶುಲ್ಕ, ಅಭಿವೃದ್ಧಿ ತೆರಿಗೆ, ಸೆಸ್‌ಗಳು ಇತ್ಯಾದಿ ಹೊರಗಿನಿಂದ ಪಡೆವ ಸಂಪನ್ಮೂಲಗಳು : ಎಸ್‌ಎಫ್‌ಸಿ ಅನುಧಾನ, ಅಭಿವೃದ್ಧಿ ಅನುಧಾನ, ಸಬ್ಸಿಡಿಗಳು ಹಲವು ಯೋಜನೆಗಳ ಸಾಲಸೌಲಭ್ಯ ಇತ್ಯಾದಿ ಮಾಹಿತಿ ಹಕ್ಕು ಕಾಯ್ದೆಯ ಅನುಸರಣೆ.

೩.೧.೨ ನಗರ ಪಾಲಿಕೆಯ ಸಾಮಾನ್ಯ ಅಧಿಕಾರಗಳು

1. ಗಡಿರೇಖೆಯ ಪ್ರದೇಶಗಳ ಗುರುತಿಸುವಿಕೆ
2. ಸಾರ್ವಜನಿಕ ಬೀದಿಗಳು ಮತ್ತು ಪ್ರದೇಶಗಳ ನೈರ್ಮಲ್ಯ
3. ಬೀದಿ ಗುಡಿಸುವುದು, ಕಸ ಸಂಗ್ರಹ, ಕಸ ವಿಲೇವಾರಿ, ಒಳಚರಂಡಿ ಸ್ವಚ್ಛತೆ
4. ಬೀದಿ ದೀಪಗಳು
5. ರಸ್ತೆ, ಚರಂಡಿ ಕಲ್ವರ್ಟ್‌ಗಳ ನಿರ್ಮಾಣ
6. ನಗರ ಪಾಲಿಕೆ ಮಾರುಕಟ್ಟೆಗಳ ನಿರ್ವಹಣೆ
7. ನಗರ ಪಾಲಿಕೆಯ ಆಸ್ತಿಗಳ ನಿರ್ವಹಣೆ
8. ರಸ್ತೆಗಳಿಗೆ ಹೆಸರು ಮತ್ತು ಸಂಖ್ಯೆಗಳನ್ನು ನೀಡುವುದು
9. ಅಪಾಯಕಾರಿ ವಸ್ತುಗಳ ಮಾರಾಟದ ಮೇಲೆ ನಿರ್ಬಂಧ
10. ಸಾರ್ವಜನಿಕ ಸ್ಥಳಗಳ ಅನಾಥ ಶವ ಸಂಸ್ಕಾರ
11. ನಗರ ಪಾಲಿಕೆ ಮಾರುಕಟ್ಟೆಗಳ ಮತ್ತು ಕಸಾಯಿಖಾನೆಗಳ ನಿರ್ಮಾಣ ಮತ್ತು ನಿರ್ವಹಣೆ
12. ಪ್ರಾಣಿಗಳಿಗೆ ಕುಡಿವ ನೀರಿನ ಕಟ್ಟೆಗಳ ನಿರ್ಮಾಣ ಮತ್ತು ನಿರ್ವಹಣೆ
13. ರಸ್ತೆ ಬದಿಯಲ್ಲಿ ಗಿಡಗಳನ್ನು ನಡೆಯುವುದು.
14. ಅಪಾಯಕಾರಿ ರೋಗಗಳನ್ನು ಹರಡದಂತೆ ತಡೆಯುವುದು.

೩.೧.೩ ನೀರು ಸರಬರಾಜು

1955 ರಲ್ಲಿ ಪ್ರಥಮವಾಗಿ ಮಂಗಳೂರು ಪುರಸಭೆಯ ನೇತ್ರಾವತಿ ನದಿಯಿಂದ ನೀರು ಪೂರೈಕೆ ಪ್ರಾರಂಭಿಸಿತು. ಅದು ರು. 84.14 ಲಕ್ಷಗಳ ಮೊತ್ತದ ಯೋಜನೆಯಾಗಿದ್ದು ಪ್ರತಿ ಗಂಟೆಗೆ 15 ಗ್ಯಾಲನು ಪ್ರಮಾಣದ ನೀರು ಪೂರೈಸಲಾಗುತ್ತಿತ್ತು ಈಗ ನೇತ್ರಾವತಿ ನದಿಯಿಂದಲೇ ದಿನಕ್ಕೆ 92 ದಶಲಕ್ಷ ಲೀಟರ್ ನೀರು ಪೂರೈಸಲಾಗುತ್ತಿದೆ ಕೊಳವೆ ಬಾವಿಗಳಿಂದ ದಿನವಹಿ 15 ದಶಲಕ್ಷ ಲೀಟರ್ ನೀರು ಲಭ್ಯವಿದೆ ಮತ್ತು 1997 ರಿಂದ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೂರೈಕೆ ನಿರ್ವಹಿಸುತ್ತಿದ್ದು ನಂತರ ನಿರ್ವಹಣೆಯನ್ನು ಮಹಾನಗರ ಪಾಲಿಕೆಗೆ ವಹಿಸಿಕೊಡಲಾಗಿದೆ ನಗರದಲ್ಲಿ ನೀರು ಪೂರೈಕೆಗೆ 18 ಪೂರಕ ಸ್ಥಳಿಯ ಸ್ವಯಾಮಾಡಳಿತ ನೀರು ಸಂಗ್ರಾಹಕಗಳಿದ್ದು ಅವುಗಳ ಸಂಗ್ರಹಣ ಸಾಮರ್ಥ್ಯವು ಮೂರರಿಂದ 50 ಲಕ್ಷ ಲೀಟರ್‌ಗಳವರೆಗಿರುತ್ತದೆ.

ನಗರ ಪಾಲಿಕೆಯು 87,405 ಗೃಹಬಳಕೆ ಸಂಪರ್ಕಗಳು 5,102 ಸಾರ್ವಜನಿಕ ನಲ್ಲಿಗಳು 5,474 ವಾಣಿಜ್ಯ ಸಂಪರ್ಕಗಳು ಹಾಗೂ ಇತರ ಸಂಪರ್ಕಗಳ ಮೂಲಕ ದಿನದ 24 ಗಂಟೆಗಳ ಕಾಲ ನೀರು ಪೂರೈಕೆ ಮಾಡುತ್ತಿದೆ. ಈ ಮೂಲಕ ನಗರದ ಶೇ.90 ರಷ್ಟು ಜನತೆಗೆ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ನೀರು ಪೂರೈಕೆ ಯೋಜನೆ ಕಾಮಗಾರಿ 2006 ರಲ್ಲಿ ಪೂರ್ಣಗೊಂಡು ನೀರು ಪೂರೈಕೆಗೆ

ಸಿದ್ಧವಾಗಿದೆ.2004-05 ರಲ್ಲಿ ನೀರು ಸರಬರಾಜು ವ್ಯವಸ್ಥೆಗೆ ವ್ಯಯಿಸಲಾದ ಮೊತ್ತ ರೂ. 14.16 ಕೋಟಿಗಳಾದರೆ ನಗರ ಪಾಲಿಕೆಯ ನೀರು ತೆರಿಗೆ ಸಂಗ್ರಹ ಮೊತ್ತ ರೂ.10.09 ಕೋಟಿಗಳಾಗಿದ್ದಿತು.

ನಗರದ ಒಳಚರಂಡಿ ವ್ಯವಸ್ಥೆಯು 1969 ರಿಂದ ಪ್ರಾರಂಭವಾಗಿದ್ದು ಜನಾರೋಗ್ಯ ತಾಂತ್ರಿಕ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿದ್ದು ನಂತರ ಜಲಮಂಡಳಿಯ ನಿರ್ವಹಣೆಯಲ್ಲಿದ್ದ ವ್ಯವಸ್ಥೆಯು 1994 ರಿಂದ ಮಹಾನಗರ ಪಾಲಿಕೆಗೆ ಹಸ್ತಾಂತರಗೊಂಡಿದೆ. ಪ್ರಸ್ತುತ 14 ಚದರ ಕಿ.ಮೀ ಗಳ ವ್ಯಾಪ್ತಿಯಲ್ಲಿ 30.400 ಒಳಚರಂಡಿ ಸಂಪರ್ಕಗಳಿದ್ದು ಎರಡು ಲಕ್ಷ ಜನರು ಇದರ ಲಾಭ ಪಡೆದಿದ್ದಾರೆ. ಈ ವ್ಯವಸ್ಥೆಯು ಜಾಲವು 235 ಕಿ.ಮೀಗಳಷ್ಟು ಇದೆ. ಮ್ಯಾನ್ ಹೋಲ್‌ಗಳ ನಿರ್ಮಾಣ ಹಾಗೂ ದುರಸ್ತಿ ಆಶುದ್ಧ ನೀರಿನ ಶುದ್ಧೀಕರಣ ಘಟಕ ನಿರ್ಮಾಣ ಹಾಗೂ ನಿರ್ವಹಣೆಯನ್ನು ಪಾಲಿಕೆಯೇ ನಿರ್ವಹಿಸುತ್ತದೆ.

ಮಳೆ ನೀರು ಹರಿಯಲು ವಿಶೇಷವಾಗಿ ನಿರ್ಮಿತವಾದ 100 ಕಿ.ಮೀ ಗಳಷ್ಟು ಉದ್ದದ ಹೊರಚರಂಡಿ ವ್ಯವಸ್ಥೆ ಇದ್ದು ಇದರ ಮೂಲಕ ಮಳೆ ನೀರು ಸಮುದ್ರ ಸೇರುತ್ತದೆ. ನಗರವು ಸಿಡುಬು, ಪ್ಲೇಗ್, ಹಾಗೂ ಕಾಲರಾ ಸಾಮಕ್ರಾಮಿಕ ರೋಗಗಳಿಂದ ಮುಕ್ತವಾಗಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಮೂರು ಸರ್ಕಾರಿ ಆಸ್ಪತ್ರೆಗಳೂ ಸೇರಿದಂತೆ ಒಟ್ಟು 53 ಆರೋಗ್ಯ ಕೇಂದ್ರಗಳಿದ್ದು ಸೊಳ್ಳೆಗಳಿಂದ ಹರಡುವ ಮಲೇರಿಯಾ ರೋಗದ ನಿಯಂತ್ರಣಕ್ಕೆ ಪಾಲಿಕೆ ಆರೋಗ್ಯ ಶಾಖೆಯ ಸಿಬ್ಬಂದಿ ಶ್ರಮಿಸುತ್ತಾರೆ. ಪಾಲಿಕೆಯ 37 ವಾರ್ಡುಗಳಲ್ಲಿ ನೈರ್ಮಲೀಕರಣ ಕೆಲಸವನ್ನು ಗುತ್ತಿಗೆದಾರರ ಮೂಲಕ ಹಾಗೂ 23 ವಾರ್ಡುಗಳಲ್ಲಿ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿದೆ.

ಸಾಂಕ್ರಾಮಿಕ ಪಿಡುಗುಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಮಲೇರಿಯಾ ನಿರೋಧಕ ದಳ ಇದ್ದು ಆರೋಗ್ಯಾಧಿಕಾರಿಗಳು ಇದರ ನೇತೃತ್ವ ವಹಿಸಿದ್ದಾರೆ. ಮೂರುಮಂದಿ ಸಹಾಯಕ ಆರೋಗ್ಯಾಧಿಕಾರಿಗಳೂ ಸೇರಿದಂತೆ ಒಟ್ಟು 339 ಮಂದಿಯ ಸಿಬ್ಬಂದಿ ವರ್ಗವು ನೈರ್ಮಲೀಕರಣ ಮತ್ತು ಜನಾರೋಗ್ಯಕ್ಕಾಗಿ ಶ್ರಮಿಸುತ್ತದೆ. ಆರೋಗ್ಯಾಧಿಕಾರಿಯು ಜನನ ಮರಣಗಳ ನೋಂದಣಾಧಿಕಾರಿಯಾಗಿದ್ದು ಕಿರಿಯ ಮತ್ತು ಹಿರಿಯ ನೈರ್ಮಲ್ಯ ನೀರೀಕ್ಷಕರ ಸಹಾಯದಿಂದ ಕಾರ್ಯನಿರ್ವಹಿಸುತ್ತಾರೆ.

೩.೧.೪ ಇತರ ಸೌಲಭ್ಯಗಳು

ಪಾಲಿಕೆಯ ವ್ಯಾಪ್ತಿಯಲ್ಲಿ ಜನತೆಯ ಸೌಕರ್ಯಕ್ಕಾಗಿ 44 ಉದ್ಯಾನವನಗಳನ್ನು ನಿರ್ಮಿಸಲಾಗಿದೆ. 2004 ರಲ್ಲಿದ್ದಂತೆ ಪಾಲಿಕೆ ವ್ಯಾಪ್ತಿಯಲ್ಲಿ 49 ಕಿ.ಮೀ ಮಣ್ಣಿನ ರಸ್ತೆ 607 ಕಿ.ಮೀ ಟಾರ್ ರಸ್ತೆ ಹಾಗೂ 16.0 ಕಿ.ಮೀ ಸಿಮೆಂಟ್ ಕಾಂಕ್ರೀಟ್ ರಸ್ತೆ ಸೇರಿದಂತೆ ಒಟ್ಟು 672 ಕಿ.ಮೀ ಉದ್ದದ ರಸ್ತೆ ಇದೆ 1934 ರಲ್ಲಿ ಮಂಗಳೂರು ನಗರದಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಬೀದಿದೀಪವನ್ನು ಬೆಳಗಿಸಲಾಯಿತು.

ನಗರದ ಜನತೆಯು ದೈನಂದಿನ ಗೃಹಪಯೋಗಿ ವಸ್ತುಗಳ ಮಾರಾಟಕ್ಕೆ 60 ವಿವಿಧ ಮಾರುಕಟ್ಟೆ ಪ್ರದೇಶದ ವ್ಯವಸ್ಥೆ ಇದೆ. ಒಂಭತ್ತು ಸಾರ್ವಜನಿಕ ಆಟದ ಮೈದಾನಗಳನ್ನು ನಿರ್ವಹಿಸಲಾಗುತ್ತಿದೆ.

ಮಂಗಳೂರು ಮಹಾನಗರದಲ್ಲಿರುವ ಉದ್ಯಾನವನಗಳು

ಗಾಂಧಿನಗರ: ದೇರೆಬೈಲು, ಮಹಾನಗರ ಪಾಲಿಕೆ ಲೇಡಿಹಿಲ್ ಈಜುಕೊಳದ ಎದುರು, ಕಂಡತ್ ಪಳ್ಳಿ, ಠಾಗೂರ್ ಪಾರ್ಕ್ ಗುತ್ತಮ್ಮ ಸ್ಥಾನ, ಮಲ್ಲಿಕಟ್ಟೆ ಹುತಾತ್ಮರ ಸ್ಮಾರಕ ಮಕ್ಕಳ ಉದ್ಯಾನವನ, ರಾಜಾಜಿ ಉದ್ಯಾನವನ ವೆಲೆನ್ಸಿಯಾ, ಜಪ್ಪು, ಭಾರತ್ ಮೈದಾನ್, ಮಥಾಯಿಸ್ ಪಾರ್ಕ್, ನೆಹರು ಮೈದಾನ ಪಾರ್ಕ್, ಮೂಡುಕಟ್ಟೆ ಬಿಜೈ ಮಿನಿ ಪಾರ್ಕ್, ಸುರತ್ಕಲ್ ಕಛೇರಿ ಆವರಣ.

ಮಂಗಳೂರು ಮಹಾನಗರದಲ್ಲಿರುವ ಮೈದಾನಗಳು

ನೆಹರು ಮೈದಾನ– ಕ್ರಿಕೆಟ್ ಗ್ರೌಂಡ್, ನೆಹರು ಮೈದಾನ ಫುಟ್ಬಾಲ್ ಗ್ರೌಂಡ್, ಎಮ್ಮೆಕೆರೆ, ಉರ್ವ ಮಾರುಕಟ್ಟೆ, ಉರ್ವಾಸ್ಟೋರ್, ಕಾವೂರು ಶಾಂತಿನಗರ, ಜಪ್ಪು ಭಾರತ್ ಮೈದಾನ, ಸುರತ್ಕಲ್ ಕೇಂದ್ರ ಮೈದಾನ, ಸುರತ್ಕಲ್, ಗಣೇಶಪುರ, ಪದವು ಕಲ್ಪನೆ, ತಿರುವೈಲು ವಾಮಂಜೂರು ಮೈದಾನ.

ಸ್ವಯಂಘೋಷಿತ ಆಸ್ತಿ ತೆರಿಗೆ ನಿರ್ಧರಣಾ ಪದ್ಧತಿ

ಆರ್ಥಿಕ ಸ್ಥಳೀಯ ಸಂಸ್ಥೆಗಳನ್ನು ಹೆಚ್ಚು ಸದೃಢಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಸರಕಾರವು ಜಾರಿಗೆ ತಂದ ಹೊಸ ಯೋಜನೆಗಳಲೊಂದು ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯೂ ಒಂದಾಗಿದೆ. ದಿನಾಂಕ 05–05–2010 ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ಕರ್ನಾಟಕ ಪೌರನಿಯಮಗಳ (ತಿದ್ದುಪಡಿ) ಅಧಿನಿಯಮ 2001 ಮತ್ತು ತದನಂತರ ಕರ್ನಾಟಕ ಪೌರನಿಯಮಗಳ (ತಿದ್ದುಪಡಿ) ಸುಗ್ರೀವಾಜ್ಞೆ 2003 ಮತ್ತು ಕರ್ನಾಟಕ ಪೌರನಿಯಮಗಳ (ತಿದ್ದುಪಡಿ) ಅಧಿನಿಯಮ 2003 ರ ಅನ್ವಯ ಸಮಗ್ರ ತಿದ್ದುಪಡಿಗೊಂಡ ಕರ್ನಾಟಕ ಪೌರನಿಯಮಗಳ ಅಧಿನಿಯಮ 1976 ರಲ್ಲಿ ಪದತ್ತ ಅಧಿಕಾರಗಳನ್ವಯ ಕರ್ನಾಟಕ ರಾಜ್ಯಾದ್ಯಂತ ದಿನಾಂಕ 01–04–2002 ರಿಂದ ಎಲ್ಲ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯು ಜಾರಿಗೊಂಡಿರುತ್ತದೆ.

ನೀರು ಪೂರೈಕೆಯ ಮೂಲ:

ನೇತ್ರಾವತಿ ನದಿ ಬಂಟ್ವಾಳ ತಾಲೂಕಿನ ತುಂಬೆ ಗ್ರಾಮ ಮಂಗಳೂರು ನಗರದಿಂದ 21 ಕಿ.ಮೀ ದೂರ ಪೂರೈಕೆಯಾಗುವ ನೀರಿನ ಪ್ರಮಾಣ 90 ಎಂಎಲ್‌ಡಿ 1993 ರಲ್ಲಿ ತುಂಬೆಯಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ 4ಮೀ ಎತ್ತರಕ್ಕೆ ಕಿಂಡಿ ಅಣೆಕಟ್ಟಿನ ನಿರ್ಮಾಣ ನೀರಿನ ಸಂಗ್ರಹಣಾ ಪ್ರಮಾಣ 4.75 ಎಂ.ಸಿ

ಎಂ (45 ದಿನಗಳಿಗೆ ಮಾತ್ರ) 1997 ರಲ್ಲಿ ಸದ್ರಿ ನೀರು ಸರಬರಾಜು ಯೋಜನೆಯನ್ನು ಸಂಪೂರ್ಣವಾಗಿ ಮಂಗಳೂರು ಮಹಾನಗರ ಪಾಲಿಕೆಗ ಹಸ್ತಾಂತರಿಸಿದೆ.

ಕೆರೆಗಳ ಅಭಿವೃದ್ಧಿ

1. ಗುಜ್ಜರಕೆರೆ 2. ಜಪ್ಪುಪಟ್ಣ ಕೆರೆ 3. ಕಂಬ್ಳಿಸ್ಥಾನ 4. ಪಾಲೆಮಾರ್ ಕೆರೆ 5. ತೋಟಗ್ರಾಮದ ಎಮ್ಮೆಕೆರೆ, 6. ಬೈರಾಡಿ ಕೆರೆ, 7. ತೆಕ್ಕಬೆಟ್ಟು ಕೆರೆ, 8. ಸದಾಶಿವದೇವಸ್ಥಾನ ಬಳಿ ಕೆರೆ 9. ಆಶ್ರಮ ಕಾಲನಿ ನಾಗಬನದ ಪಕ್ಕದ ಕಾನಕಟ್ಲ ಕೆರೆ 10. ಕೃಷ್ಣಾಪುರ ಮಠದ ಬಳಿ ಕೆರೆ.

ಮಾರುಕಟ್ಟೆ

ಮಂಗಳೂರು ನಗರದಲ್ಲಿರುವ ಮಾರುಕಟ್ಟೆಗಳು: 1. ಕೇಂದ್ರಿಯ ತರಕಾರಿ ಮಾರುಕಟ್ಟೆ, 2. ಮೀನು ಮಾರುಕಟ್ಟೆ, 3. ಜೆಪ್ಪು ಮಾರುಕಟ್ಟೆ, 4. ಉರ್ವ ಮಾರುಕಟ್ಟೆ, 5. ಉರ್ವಾಸ್ಟೋರ್ ಮಾರುಕಟ್ಟೆ, 6.ಕಂಕನಾಡಿ ಮಾರುಕಟ್ಟೆ, 7. ಕರ್ಕೇರಾ ಗೇಟ್ (ನೆಹರು ಮೈದಾನ(ಮಾರುಕಟ್ಟೆ, 8. ಬಿಜೈ ಮಾರುಕಟ್ಟೆ, 9. ಅಳಿಕೆ ಮಾರುಕಟ್ಟೆ, 10. ಹಳೇಬಂದರು ಮಾರುಕಟ್ಟೆ, 11. ಕರಂಗಲ್ಪಾಡಿ ಮಾರುಕಟ್ಟೆ, 12. ಕದ್ರಿ ಮಾರುಕಟ್ಟೆ, 13. ಪದವು ಮಾರುಕಟ್ಟೆ, 14. ರಥಬೀದಿ ಮಾರುಕಟ್ಟೆ, 15. ಸುರತ್ಕಲ್ ಹಳೆಯ ಮಾರುಕಟ್ಟೆ, 16. ಸುರತ್ಕಲ್ ಹೊಸ ಮಾರುಕಟ್ಟೆ, 17. ಸುರತ್ಕಲ್ ಮೂಡಾ ಮಾರುಕಟ್ಟೆ, 18. ಕಣ್ಣೂರು ಮಾರುಕಟ್ಟೆ, 19. ತಿರುವೈಲು ಮಾರುಕಟ್ಟೆ.

ಒಳಚರಂಡಿ ವ್ಯವಸ್ಥೆ

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಜಾಲದ ಮುಖ್ಯ ಅಂಶಗಳು

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಜಾಲವನ್ನು ಮುಖ್ಯವಾಗಿ 4 ವಲಯಗಳಾನ್ನಾಗಿ ವಿಂಗಡಿಸಲಾಗಿದೆ

1. ಕಾವೂರು ಎಸ್‌ಟಿಇ ವಲಯ(43.50 ಎಂಎಲ್‌ಡಿ)
2. ಪಚ್ಚನಾಡಿ ಎಸ್‌ಟಿಇ ವಲಯ(8.75 ಎಂಎಲ್‌ಡಿ)
3. ಜಪ್ಪಿನಮೊಗರು ಎಸ್‌ಟಿಇ ವಲಯ(20 ಎಂಎಲ್‌ಡಿ)
4. ಸುರತ್ಕಲ್ ಎಸ್‌ಟಿಇ ವಲಯ(16.5 ಎಂಎಲ್‌ಡಿ)

ಪುರಭವನದ ಅಭಿವೃದ್ಧಿ

ನವೀಕೃತ ಪುರಭವನ ನವೆಂಬರ್ 14, 2015 ರಂದು ಉದ್ಘಾಟನೆಗೊಂಡಿತು ಪುರಭವನದ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಒಳಾಂಗಣದಲ್ಲಿ ಉತ್ಕೃಷ್ಟ ಮಟ್ಟದ ಕಲಾ ಸವಲತ್ತುಗಳನ್ನು ಒದಗಿಸುವ ನಿಟ್ಟಿನಲ್ಲಿ ನವೀಕೃತಗೊಳಿಸಿದ ಪುರಭವನ ನವೀಕರಣದ ವೆಚ್ಚ ಸುಮಾರು 4.58 ಕೋಟಿ ಪುರಭವನದ ಒಳಾಂಗಣದಲ್ಲಿ ಅಲಾಸ್ಟಿಕ್, ಫಾಲ್ಸಿಲಿಂಗ್ ಧ್ವನಿ ಬೆಳಕು ಮತ್ತು ವೇದಿಕೆ ಆಸನಗಳ ಅಳವಡಿಕೆ ಜನರೇಟರ್ ಮತ್ತು ವಿದ್ಯುದ್ದೀಕರಣ ಕಾಮಗಾರಿ ವಿಶಿಷ್ಟ ಹಾಗೂ ಆಧುನಿಕತೆಗೆ ತಾಂತ್ರಿಕತೆಗೆ ಪೂರಕವಾದ ಸವಲತ್ತುಗಳನ್ನು ಒದಗಿಸಲಾಗಿದೆ. ವೇದಿಕೆಗೆ ಮರದ ಫ್ಲೋರಿಂಗ್ ಅಳವಡಿಸಿ ವಿಸ್ತರಣೆ ಅತ್ಯಾಧುನಿಕ ಬೆಳಕು ಧ್ವನಿ ಮತ್ತು ಗ್ರೀನ್ ರೂಂನಲ್ಲಿ ಕಲಾವಿದರಿಗೆ ವಿವಿಧ ಸೌಲಭ್ಯ ಕಲ್ಪಿಸಲಾಗಿದ್ದು ಆಕರ್ಷಕ ಎಲ್ಇಡಿ ನಾಮಫಲಕ ಗಾರ್ಡನಿಂಗ್ ಜಿಲ್ಲೆಯ ಸಾಂಸ್ಕೃತಿಕ ವೈಭವ ಸಾರುವ ಮ್ಯೂರೈಲ್ ಮತ್ತು ಹೊಖಆಂಗಣದಲ್ಲಿ ಅಗತ್ಯ ಕಾಮಗಾರಿ ಕೆಲಸ ಪೂರ್ಣಗೊಂಡಿದೆ. 27-07-2017 ರಂದು ಪುರಭವನದ ಹೊಸ ಕಾಮಗಾರಿಯ ಕೆಲಸ ಪೂರ್ಣಗೊಂಡು ಉದ್ಘಾಟನೆ ಮಾಡಲಾಗಿದೆ. ಸಾಂಸ್ಕೃತಿಕ ಕಲೆಗೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಇತ್ತೀಚೆಗೆ ಪುರಭವನದಲ್ಲಿ ಹೊಸ ರಂಗಮಂದಿರದ ಸ್ಥಾಪನೆ ಮಾಡಲಾಯಿತು.

ಮಹಾನಗರ ಪಾಲಿಕೆಯ ಸಾಮಾನ್ಯ ಮಾಹಿತಿ(2017-18)

ವಿಷಯಗಳು	ಸಂಖ್ಯೆಗಳು
1. ವಾರ್ಡುಗಳು	60
2. ನಗರದ ಜನಸಂಖ್ಯೆ(2011 ರ ಜನಗಣತಿ ಪ್ರಕಾರ)	4,99,847
3. ಒಟ್ಟು ವಿಸ್ತೀರ್ಣ	132.45 ಚ.ಕಿ.ಮೀ
4. ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು(ಎಮತ್ತುಬಿದರ್ಜೆ)	38
5. ಸಿ ಮತ್ತು ಡಿ ವೃಂದದ ಸಿಬ್ಬಂದಿ ವರ್ಗ	626
6. ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಒಟ್ಟು ಆಸ್ತಿಗಳು	19,7037
7. ಮಹಾನಗರ ಫಾಲಿಕೆಗೆ ಸೇರಿದ ಮಳಿಗೆಗಳು	84
8. ನಗರ ಪಾಲಿಕೆ ಸೇರಿದ ವಸತಿಗೃಹಗಳು	150
9. ಒಟ್ಟು ಪೌರಕಾರ್ಮಿಕರು	ಖಾಯಂ 257
10. ನಗರದಲ್ಲಿ ದಿನನಿತ್ಯ ಉತ್ಪತ್ತಿಯಾಗುವ ತ್ಯಾಜ್ಯ ವಸ್ತು	300 ರಿಂದ 310 ಟನ್
11. ಬರುವ ಉದ್ದಿಮೆಗಳು	28104
12. ವಾಹನಗಳು	9
13. ಒಳಚರಂಡಿ ವಿಭಾಗದ ವಾಹನಗಳು	1
14. ಉದ್ಯಾನವನಗಳು	44

15. ಸ್ಮಶಾನಗಳು	11
16. ಗೃಹಬಳಕೆ ನೀರಿನ ಸಂಪರ್ಕ	87,405
17. ವಾಣಿಜ್ಯ ಬಳಕೆ ನೀರಿನ ಸಂಪರ್ಕ	5,774
18. ಕೈಗಾರಿಕೆ	915
19. ಕಟ್ಟಡ ರಚನೆ	1319
20. ವಾರ್ಷಿಕ ನೀರಿನ ತೆರಿಗೆ ವಸುಲಾತಿ	ರೂ. 3000.00 ಲಕ್ಷ
21. ಮೇಲ್ಮೈ ಚರಂಡಿ	450
22. ಒಳಚರಂಡಿ ಸಂಪರ್ಕ	795
23. ಮ್ಯಾನ್ ಹೋಲ್‌ಗಳು	15
24. ವೆಟ್‌ವೆಲ್ ಗಳು	22
25. ಸುಯೇಜ್ ಟ್ರೀಟ್‌ಮೆಂಟ್ ಪ್ಲಾಂಟ್	4 ಎಸ್.ಟಿ ಪಿ ಗಳು
26. ಮ.ನ.ಪಾ ನಿರ್ವಹಿಸುತ್ತಿರುವ ಪಾರ್ಕ್‌ಗಳು	7

೩.೨ ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಸದಸ್ಯರು (ಕಾರ್ಪೋರೇಟರ್) ಗಳಿಂದ ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆ:

ಈ ಅಧ್ಯಾಯದಲ್ಲಿ ಮಂಗಳೂರು ಮಹಾನಗರಪಾಲಿಕೆಯ ಕ್ಷೇತ್ರ ಕಾರ್ಯಕ್ಕೆ ಆಯ್ಕೆ ಮಾಡಿದ ವಾರ್ಡುಗಳಾದ ಸುರತ್ಕಲ್ ಪಶ್ಚಿಮ, ಸುರತ್ಕಲ್ ಪೂರ್ವ, ಹೊಸಬೆಟ್ಟು, ತಿರುವೈಲ್, ಪದವು ದೇರೆಬೈಲ್ ಪಶ್ಚಿಮ, ಬೋಳೂರು, ಕದ್ರಿ ಉತ್ತರ, ಶಿವಭಾಗ್, ಅತ್ತಾವರ, ಕಂಕನಾಡಿ, ಜೆಪ್ಪು, ಫಳ್ನೀರ್‌ಗಳಲ್ಲಿ (2014–17)ರವರೆಗೆ ಕಾರ್ಯ ನಿರ್ವಹಿಸುತ್ತಿದ್ದ ಮಹಿಳಾ ಸದಸ್ಯರನ್ನು ಭೇಟಿ ಮಾಡಿ ಸಂದರ್ಶನದ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಯ್ಕೆ ಮಾಡಿದ ವಾರ್ಡುಗಳನ್ನು ವಿವಿಧ ಕೋಷ್ಠಕಗಳ ಸಹಾಯದಿಂದ ಅಂಕಿ ಅಂಶಗಳು ಮತ್ತು ಶೇಕಡವಾರು ಪ್ರಮಾಣದಲ್ಲಿ ವಿಶ್ಲೇಷಣೆ ಮಾಡುವ ಮೂಲಕ ಪ್ರಾಯೊಗಿಕ ಮತ್ತು ವೈಜ್ಞಾನಿಕ ವಿಧಾನಗಳಿಂದ ಈ ಅಧ್ಯಯನವನ್ನು ಮಾಡಲಾಗಿದೆ. ಇದರಿಂದ ನಗರ ಸ್ಥಳೀಯ ಸರಕಾರ ವ್ಯವಸ್ಥೆಯಲ್ಲಿ (ಮಂಗಳೂರು ಮಹಾನಗರಪಾಲಿಕೆ) ಮಹಿಳಾ ಸಬಲೀಕರಣವನ್ನು ಕಂಡು ಹಿಡಿಯುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

೩.೨.೧ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಬರುವ 60 ವಾರ್ಡುಗಳ ವಿವರ

ವಾರ್ಡು	ವಾರ್ಡಿನ ಹೆಸರು	ಸದಸ್ಯರ ಹೆಸರು	ವಾರ್ಡು	ವಾರ್ಡಿನ ಹೆಸರು	ಸದಸ್ಯರ ಹೆಸರು
1.	ಸುರತ್ಕಲ್ ಪಶ್ಚಿಮ	ರೇವತಿ.ಕೆ	31	ಬಿಜೈ	ಲ್ಯಾನ್ಸ್‌ಲಾಟ್ ಪಿಂಟೋ
2.	ಸುರತ್ಕಲ್ ಪೂರ್ವ	ಸುಮಿತ್ರ	32	ಕದ್ರಿ ಉತ್ತರ	ರೂಪಾ ಡಿ ಬಂಗೇರ
3.	ಕಾಟಿಪಳ್ಳ ಪೂರ್ವ	ಬಶೀರ್ ಅಹ್ಮದ್	33	ಕದ್ರಿ ದಕ್ಷಿಣ	ಅಶೋಕ್ ಡಿ.ಕೆ
4.	ಕಾಟಿಪಳ್ಳ ಕೃಷ್ಣಾಪುರ	ತಿಲಕ್ ರಾಜ್	34	ಶಿವಭಾಗ್	ಸಬಿತ ಮಿಸ್ಕಿತ್
5.	ಕಾಟಿಪಳ್ಳ ಉತ್ತರ	ಅಯಾಜ್	35	ಪದವು ಸೆಂಟ್ರಲ್	ಕೆ.ಜುಬೈದಾ
6.	ಇಡ್ಯಾ ಪೂರ್ವ	ಗುಣಶೇಖರ ಶೆಟ್ಟಿ	36	ಪದವು ಪೂರ್ವ	ಭಾಸ್ಕರ ಕೆ
7.	ಇಡ್ಯಾ ಪಶ್ಚಿಮ	ಅಶೋಕ್ನ ಶೆಟ್ಟಿ	37	ಮರೋಳಿ	ಕೇಶವ
8.	ಹೊಸಬೆಟ್ಟು	ಪ್ರತಿಭಾ ಕುಳಾಯಿ	38	ಬೆಂದೂರು	ನವೀನ್ ಆರ್ ಡಿಸೋಜ
9	ಕುಳಾಯಿ	ಗಣೇಶ್ ಹೊಸಬೆಟ್ಟು	39	ಫಳ್ನೀರ್	ಜೆಸಿಂತ ವಿಜಯ ಅಲ್ಫೆಡ್
10	ಬೈಕಂಪಾಡಿ	ಪುರುಷೋತ್ತಮ ಚಿತ್ರಾಪುರ	40	ಕೋರ್ಟ್	ಎ.ಸಿ ವಿನಯರಾಜ್
11	ಪಣಂಬೂರು ಬೆಂಗ್ರೆ	ರಘುವೀರ್	41	ಸೆಂಟ್ರಲ್	ಪೂರ್ಣಿಮ

				ಮಾರ್ಕೆಟ್	
12	ಪಂಜಿಮೊಗರು	ದಯಾನಂದ ಶೆಟ್ಟಿ	42	ಡೊಂಗರಕೇರಿ	ರಾಜೇಂದ್ರ
13	ಕುಂಜತ್ ಬೈಲ್ ಉತ್ತರ	ಕೆ.ಮೊಹಮ್ಮದ್	43	ಕುದ್ರೋಳಿ	ಅಬ್ದುಲ್ ಅಜೀಜ್
14	ಮರಕಡ	ಹರಿನಾಥ	44	ಬಂದರ್	ರಮೀಜಾ ಭಾನು
15	ಕುಂಜತ್ ಬೈಲ್ ದಕ್ಷಿಣ	ಕೆ.ಮಧುಕಿರಣ್	45	ಪೋರ್ಟ್	ಅಬ್ದಲು ಲತೀಫ್
16	ಬಂಗ್ರಕುಳೂರು	ಹರೀಶ್ ಎಂ ಶೆಟ್ಟಿ	46	ಕಂಟೋನ್ಮೆಟ್	ದಿವಾಕರ್
17.	ದೇರಬೈಲ್ ಉತ್ತರ	ಶಶಿಧರ ಹಗ್ಡೆ	47	ಮಿಲಾಗ್ರಿಸ್	ಅಬ್ದುಲ್ ರವೂಫ್
18.	ಕಾವೂರು	ದೀಪಕ್ ಕೆ ಪೂಜಾರಿ	48	ಕಂಕನಾಡಿ	ಆಶಾ ಡಿಸಿಲ್ವ
19	ಪಚ್ಚನಾಡಿ	ಕವಿತಾ ಸನಿಲ್	48	ಕಂಕನಾಡಿ ಬಿ	ಟಿ ಪ್ರವೀಣ್ ಚಂದ್ರ ಆಳ್ವ
20	ತಿರುವೈಲ್	ಹೇಮಲತಾ ಆರ್	50	ಅಳಪೆ ದಕ್ಷಿಣ	ವಿಜಯ ಕುಮಾರ್ ಶೆಟ್ಟಿ
21	ಪದವು –ಪಶ್ಚಿಮ	ಅಕಿಲಾ ಆಳ್ವ	51	ಅಳಪೆ ಉತ್ತರೆ	ಬಿ.ಪ್ರಕಾಶ್
22.	ಕದ್ರಿ ಪದವು	ಮಹಾಬಲ ಮಾರ್ಲ	52	ಕಣ್ಣೂರು	ಸುಧೀರ್ ಕುಮಾರ್ ಷಟ್ಟಿ
23	ದೇರೆಬೈಲ್ ಪೂರ್ವ	ಕೆ.ರಾಜೇಶ್	53	ಬಜಾಲ್	ಸುಮೇಯ
24	ದೇರೆಬೈಲ್ ದಕ್ಷಿಣ	ರಜನೀಶ್	54	ಜಪ್ಪಿನಮೊಗರು	ಸುರೇಂದ್ರ
25	ದೇರೆಬೈಲ್ ಪಶ್ಚಿಮ	ನಾಗವೇಣಿ	55	ಅತ್ತಾವರ	ಶೈಲಜಾ
26	ದೇರೆಬೈಲ್ ನೈಋತ್ಯ	ರಾಧಾಕೃಷ್ಣ	56	ಮಂಗಾಳದೇವಿ	ಪ್ರೇಮಾನಂದ ಶೆಟ್ಟಿ
27	ಬೋಳೂರು	ಲತಾ ಸಾಲ್ಯಾನ್	57	ಹೊಯ್ಗೆಬಜಾರ್	ಕವಿತಾ
28	ಮಣ್ಣಗುಡ್ಡ	ಜಯಂತಿ ಆಚಾರ್	58	ಬೋಳಾರ	ರತಿಕಲಾ
29	ಕಂಬ್ಳ	ನವೀನ್‌ಚಂದ್ರ ಕೆ	59	ಜೆಪ್ಪು	ಕು ಅಪ್ಪಿ
30	ಕೊಡಿಯಾಲ್ ಬೈಲ್	ಪ್ರಕಾಶ್ ಬಿ ಸಾಲ್ಯಾನ್	60	ಬೆಂಗ್ರೆ	ಮೀರಾ ಕರ್ಕೇರಾ

ಈ ಮೇಲಿನ ಕೋಷ್ಟಕ (3.2.1)ದಲ್ಲಿ ತಿಳಿಸಿರುವಂತೆ ಪ್ರಸ್ತುತ (2017–18) ಸಾಲಿನ ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್‌ಗಳ ವಿವರವನ್ನು ಗಮನಿಸಿದಾಗ ಒಟ್ಟು 60 ವಾರ್ಡ್‌ಗಳಲ್ಲಿ ಶೇ.73.3% ರಷ್ಟು (22) ಮಹಿಳಾ ಪ್ರತಿನಿಧಿಗಳು ಶೇ.126.6% (38)ರಷ್ಟು ಪುರುಷ ಪ್ರತಿನಿಧಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

೩.೨.೨ ಸೂಚನಾದಾರರ ವೈಯಕ್ತಿಕ ಮಾಹಿತಿ

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸಕ್ತ ಸಾಲಿನ ಮಹಿಳಾ ಪ್ರತಿನಿಧಿಗಳು (ಕಾರ್ಪೊರೇಟರ್)ಗಳ ವೈಯಕ್ತಿಕ ಮಾಹಿತಿಯನ್ನು ಸಂಶೋಧಕನು ವಿಚಾರಿಸಿದಾಗ ತಿಳಿದು ಬಂದ ಮಾಹಿತಿಯನ್ನು ಈ ಕೆಳಗಿನಂತೆ ಕ್ರೋಢೀಕರಿಸಲಾಗಿದೆ.

ಕೋಷ್ಠಕ 3.2.2(1)

ವಿವರಗಳು	ವಯಸ್ಸಿನ ವಿವರ	ಒಟ್ಟು ಸಂಖ್ಯೆ	ಶೇಕಡವಾರು
1. ವಯಸ್ಸು	25–35 ವರ್ಷ	9	30%
	31–40 ವರ್ಷ	6	20%
	40–50 ವರ್ಷ	7	23%
	51–60 ವರ್ಷ	–	–
2. ವಿದ್ಯಾರ್ಹತೆ	ಅನಕ್ಷರಸ್ಥ	–	–
	ಪ್ರಾಥಮಿಕ	–	–
	ಪ್ರೌಢ	3	10%
	ಪಿ.ಯು.ಸಿ	8	26.6%
	ಪದವಿ	9	30%
	ಸ್ನಾತಕೋತ್ತರ	2	6.6%
3. ಜಾತಿ/ಧರ್ಮ	ಪರಿಶಿಷ್ಠ ಜಾತಿ	2	6.6%
	ಪರಿಶಿಷ್ಠ ಪಂಗಡ	1	3.3%
	ಅಲ್ಪಸಂಖ್ಯಾತರು	6	20%
	ಹಿಂದುಳಿದ ವರ್ಗ	10	33%
	ಸಾಮಾನ್ಯ	3	10%
4. ವೈವಾಹಿಕ ಸ್ಥಿತಿ ಗತಿ	ವಿವಾಹಿತೆ	19	63.3%

	ಅವಿವಾಹಿತೆ	3	10%
	ವಿಧವೆ	–	–
5. ಉದ್ಯೋಗ	ಕೂಲಿ	–	–
	ಕೃಷಿ	–	–
	ಸ್ವ ಉದ್ಯೋಗ	9	30%
	ಗೃಹಿಣಿ	12	40%
6. ವಾರ್ಷಿಕ ಆದಾಯ	1 ಲಕ್ಷಕ್ಕಿಂತ ಕಡಿಮೆ	4	13.3%
	1–2 ಲಕ್ಷ	9	30%
	2–4 ಲಕ್ಷ	4	13.3%
	4 ಲಕ್ಷಕ್ಕಿಂತ ಮೇಲು	5	16.6%

(ಮೂಲ– ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ವಯಸ್ಸು: ಒಟ್ಟು 30 ಸೂಚನೆದಾರರಲ್ಲಿ ಶೇ.30ರಷ್ಟು ಮಹಿಳಾ ಪ್ರತಿನಿಧಿಗಳು 25–35 ವರ್ಷದ ಒಳಗಿನ ವಯೋಮಿತಿಯವರು ಆಗಿರುತ್ತಾರೆ. ಶೇ.20ರಷ್ಟು ಮಹಿಳಾ ಪ್ರತಿನಿಧಿಗಳು 31–40 ವರ್ಷದ ಒಳಗಿನ ವಯೋಮಿತಿಯವರಾಗಿರುತ್ತಾರೆ. ಶೇ.7ರಷ್ಟು ಮಹಿಳಾ ಪ್ರತಿನಿಧಿಗಳು 51–60 ವರ್ಷ ವಯೋಮಿತಿಯವರಾಗಿರುತ್ತಾರೆ.

ವಿದ್ಯಾರ್ಹತೆ: ಒಟ್ಟು 30 ಸೂಚನದಾರರಲ್ಲಿ ಶೇ.10ರಷ್ಟು ಮಹಿಳಾ ಪ್ರತಿನಿಧಿಗಳು ಪ್ರೌಢ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಶೇ.26.6%ರಷ್ಟು ಮಹಿಳಾ ಪ್ರತಿನಿಧಿಗಳು ಪದವಿ ಪೂರ್ವ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಶೇ.30ರಷ್ಟು ಮಹಿಳಾ ಪ್ರತಿನಿಧಿಗಳು ಪದವಿ ವ್ಯಾಸಂಗವನ್ನು ಮುಗಿಸಿದವರಾಗಿದ್ದು, ಶೇ.6.6%ರಷ್ಟು ಮಹಿಳಾ ಪ್ರತಿನಿಧಿಗಳು ಸ್ನಾತಕ್ಕೋತ್ತರ ವ್ಯಾಸಂಗವನ್ನು ಮುಗಿಸಿದವರಾಗಿರುತ್ತಾರೆ.

ಜಾತಿ: ಸೂಚನದಾರರ ಜಾತಿವಾರು ಹಂಚಿಕೆಯ ವಿವರವನ್ನು ಗಮನಿಸಿದಾಗ ಶೇ.6.6% ಮಹಿಳಾ ಪ್ರತಿನಿಧಿಗಳು ಪರಿಶಿಷ್ಠ ಜಾತಿಗೆ ಸೇರಿದವರಾಗಿರುತ್ತಾರೆ. ಶೇ.3.3 ಮಹಿಳಾ ಪ್ರತಿನಿಧಿಗಳು ಪರಿಶಿಷ್ಠ ಪಂಗಡದವರಾಗಿರುತ್ತಾರೆ. ಶೇ.20 ಮಹಿಳಾ ಪ್ರತಿನಿಧಿಗಳು ಅಲ್ಪಸಂಖ್ಯಾತರಾಗಿದ್ದು, ಶೇ.10ರಷ್ಟು ಮಹಿಳಾ ಪ್ರತಿನಿಧಿಗಳು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ವೈವಾಹಿಕ ಸ್ಥಿತಿ: ಸೂಚನಾದಾರರ ವೈವಾಹಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ಒಟ್ಟು ಸೂಚನದಾರರಲ್ಲಿ ಶೇ.63.3% ರಷ್ಟು ಮಹಿಳಾ ಪ್ರತಿನಿಧಿಗಳು ವಿವಾಹಿತರಾಗಿದ್ದು ಶೇ.10% ರಷ್ಟು ಮಹಿಳಾ ಪ್ರತಿನಿಧಿಗಳು ಅವಿವಾಹಿತರಾಗಿರುತ್ತಾರೆ. ಒಟ್ಟಾರೆಯಾಗಿ ಗಮನಿಸಿದಾಗ ಮಂಗಳೂರು ಮಹಾನಗರಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪ್ರತಿನಿಧಿಗಳು ವಿವಾಹಿತರಾಗಿರುತ್ತಾರೆ.

ಉದ್ಯೋಗ: ಒಟ್ಟು 30 ಸೂಚನಾದಾರರಲ್ಲಿ ಶೇ.30%ರಷ್ಟು ಜನ ಸ್ವ ಉದ್ಯೋಗದಲ್ಲಿ ನಿರತರಾಗಿದ್ದು, ಶೇ.40ರಷ್ಟು ಜನ ಗೃಹಿಣಿಯಾಗಿರುತ್ತಾರೆ.

ವಾರ್ಷಿಕ ಆದಾಯ: ಒಟ್ಟು 30 ಸೂಚನಾದಾರರಲ್ಲಿ ಶೇ.13.3ರಷ್ಟು ಮಹಿಳಾ ಪ್ರತಿನಿಧಿಗಳು 1 ಲಕ್ಷಕ್ಕಿಂತ ಕಡಿಮೆ ಆದಾಯವನ್ನು ಹೊಂದಿದವರಾಗಿದ್ದು, ಶೇ.30ರಷ್ಟು ಮಹಿಳಾ ಪ್ರತಿನಿಧಿಗಲು 1 ರಿಂದ 2 ಲಕ್ಷ ಆದಾಯವನ್ನು ಹೊಂದಿದವರಾಗಿದ್ದು, ಶೇ.13.3ರಷ್ಟು ಮಹಿಳಾ ಪ್ರತಿನಿಧಿಗಳು 2 ರಿಂದ 4 ಲಕ್ಷ ಆದಾಯವನ್ನು ಹೊಂದಿದವರಾಗಿದ್ದು, ಶೇ.16.6ರಷ್ಟು ಮಹಿಳಾ ಪ್ರತಿನಿಧಿಗಳು 4 ಲಕ್ಷಕ್ಕಿಂತ ಹೆಚ್ಚಿನ ಆದಾಯವನ್ನು ಹೊಂದಿದವರಾಗಿರುತ್ತಾರೆ.

೩.೨.೩ ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳ ಆಡಳಿತ ಅನುಭವ, ಅರಿವು, ಜಾಗೃತಿಯ ಬಗ್ಗೆ ವಿವರಣಾತ್ಮಕ ವಿಶ್ಲೇಷಣೆ

ನಗರ ಸ್ಥಳೀಯ ಸರಕಾರ ವ್ಯವಸ್ಥೆ ಮತ್ತು ಸಂವಿಧಾನಿಕ ಸವಲತ್ತುಗಳ ಅರಿವಿನ ವಿವರ

ಕೋಷ್ಟಕ 3.2.3(2)

ನಗರ ಸ್ಥಳೀಯ ಸರಕಾರ ವ್ಯವಸ್ಥೆಯ ಸಂವಿಧಾನದಿಂದ ಬಂದ ಕೊಡುಗೆಯಾಗಿದೆ. ಸ್ಥಳೀಯ ಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಪರಿಹರಿಸುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ಹಾಗಾಗಿ ಮಹಾನಗರ ಪಾಲಿಕೆಗೆ ಆಯ್ಕೆಯಾದ ಪ್ರತಿನಿಧಿಗಳಿಗೆ ಈ ವ್ಯವಸ್ಥೆ ಮತ್ತು ಪಾಲಿಕೆಗೆ ಸಿಗುವ ಸಂವಿಧಾನಿಕ ಸವಲತ್ತುಗಳ ಮಾಹಿತಿ ಇರಬೇಕಾದುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಮಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಸಂಶೋಧಕನು ದತ್ತಾಂಶವನ್ನು ಸಂಗ್ರಹಿಸುವಾಗ ಕೇಳಿದ ಪ್ರಶ್ನೆಗಳಿಗೆ ಬಂದ ಉತ್ತರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಅಭಿಪ್ರಾಯ	ಸ್ಥಳೀಯ ಸರಕಾರ ವ್ಯವಸ್ಥೆ ಅರಿವು		ಸಂವಿಧಾನಿಕ ಸವಲತ್ತುಗಳ ಅರಿವು	
	ಸೂಚನದಾರರು	ಶೇಕಡಾ	ಸೂಚನದಾರರು	ಶೇಕಡಾ
ಹೌದು	20	66.6%	20	66.6%
ಇಲ್ಲ	10	33%	10	33%
ಒಟ್ಟು	30	100%	30	99.9%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ(3.2.3(2)ದಲ್ಲಿ ಮಹಾನಗರ ಪಾಲಿಕೆಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಅರಿವಿನ ಮಟ್ಟವನ್ನು ಕ್ರೋಢಿಕರಿಸಿ ವಿಶ್ಲೇಷಿಸಲಾಗಿದೆ. ಒಟ್ಟು 30 ಸೂಚನದಾರರಲ್ಲಿಸ್ಥಳೀಯ ಸರಕಾರ ವ್ಯವಸ್ಥೆಯ ಬಗ್ಗೆ ಪ್ರಶ್ನಿಸಿದಾಗ ಶೇ 66.6% ಸೂಚನಾದಾರರು ಸ್ಥಳೀಯ ಸರಕಾರ ವ್ಯವಸ್ಥೆಯ ಸಂಪೂರ್ಣ ಮಾಹಿತಿ ಇರುವುದಾಗಿ ತಿಳಿಸಿರುತ್ತಾರೆ. ಶೇ 33% ಸೂಚನದಾರರು ಸ್ಥಳೀಯ ಸರಕಾರ ವ್ಯವಸ್ಥೆಯ ಬಗ್ಗೆ ಮಾಹಿತಿ ಇಲ್ಲ ಎಂದು ಅಭಿಪ್ರಾಯ ಪಟ್ಟರು. ಸೂಚನದಾರರಲ್ಲಿ ಸಂವಿಧಾನಿಕ ಸವಲತ್ತುಗಳ ಬಗ್ಗೆ ಪ್ರಶ್ನಿಸಿದಾಗ ಶೇ 66.6% ಸೂಚನದಾರರು ಪೂರ್ಣ ಮಾಹಿತಿ ಇರುವುದಾಗಿ ಮತ್ತು 33% ಸೂಚನದಾರರು ಪೂರ್ಣ ಮಾಹಿತಿ ಇಲ್ಲವೆಂದು ಪ್ರತಿಕ್ರಿಯಿಸಿದರು. ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಆಯ್ಕೆಯಾದ ಹೆಚ್ಚಿನವರು ನಗರ ಸ್ಥಳೀಯ ಸರಕಾರ ಸಂಸ್ಥೆಗಳ ಬಗ್ಗೆ ಸಂವಿಧಾನಿಕ ಸವಲತ್ತುಗಳ ಬಗ್ಗೆ ಮೂಲಭೂತ ಮಾಹಿತಿ ಇರುವುದೆಂದು ಕಂಡು ಬಂದಿದೆ.

ವಾರ್ಡಿನ ಜನರಿಗೆ ಸರಕಾರದ ಸವಲತ್ತುಗಳ ಬಗ್ಗೆ ಅರಿವಿನ ಮಾಹಿತಿ

ಯಾವುದೇ ಪ್ರತಿನಿಧಿಯು ಪ್ರತಿನಿಧಿಯಾಗಿ ಆಯ್ಕೆಯಾದ ಮೇಲೆ ಸರಕಾರದ ಸವಲತ್ತುಗಳ ಮಾಹಿತಿ ಮತ್ತು ತನ್ನ ವಾರ್ಡ್‌ನ ಜನರಿಗೆ ಸಿಗುವ ಸರಕಾರಿ ಸೌಲಭ್ಯಗಳ ಮಾಹಿತಿ ಇರಬೇಕಾದದ್ದು ಸಮಂಜಸವಾಗಿದೆ .ಸೌಲಭ್ಯಗಳ ಮಾಹಿತಿ ಇರದಿದ್ದರೆ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಕಷ್ಟ ಈ ಸಂಬಂಧವಾಗಿ ಸಂಶೋಧಕನು ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಮಾಹಿತಿಯನ್ನು ಇಲ್ಲಿ ಕ್ರೋಢಿಕರಿಸಲಾಗಿದೆ.

ಕೋಷ್ಟಕ 3.2.3(3)

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	8	26.6%
ಇಲ್ಲ	22	73.3%
ಒಟ್ಟು	30	99.9%

ಹೌದಾದರೆ ಯಾವ ರೀತಿಯಲ್ಲಿ ಅರಿವನ್ನು ಮೂಡಿಸುತೀರಿ?		
ಅಭಿಪ್ರಾಯ	ಸೂಚನದಾರರು	ಶೇಕಡವಾರು
ಸಭೆಯನ್ನು ಕರೆದು	5	16.6%
ಮನೆ ಬಾಗಿಲಿಗೆ ತೆರಳಿ	25	83.3%
ಒಟ್ಟು	30	99.9%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ 3.2.3(3)ದಲ್ಲಿ ತಿಳಿಸಿರುವಂತೆ ಒಟ್ಟು 30 ಸೂಚನದಾರರ ಪೈಕಿ ಶೇ27% ರಷ್ಟು ಪ್ರತಿನಿಧಿಗಳು ತಮ್ಮ ವಾರ್ಡಿನ ಜನರಿಗೆ ಸರಕಾರದ ಸವಲತ್ತುಗಳ ಬಗ್ಗೆ ಮಾಹಿತಿ ಇದೆ ಎಂದು ಶೇಕಡಾ 73% ಪ್ರತಿನಿಧಿಗಳು ಸರಕಾರದ ಸವಲತ್ತುಗಳ ಬಗ್ಗೆ ಮಾಹಿತಿ ಇಲ್ಲ ಎಂದು ತಿಳಿಸಿರುತ್ತಾರೆ ಜೊತೆಗೆ ವಾರ್ಡ್‌ನ ಜನರಿಗೆ ಸರಕಾರದ ಸವಲತ್ತುಗಳ ಬಗ್ಗೆ ಹೇಗೆ ಅರಿವನ್ನು ಮೂಡಿಸುತ್ತೀರಿ ಎನ್ನುವ ಪ್ರಶ್ನೆಗೆ ಸಂಬಂಧಿಸಿದೆ ಶೇಕಡಾ 17% ರಷ್ಟು ಪ್ರತಿನಿಧಿಗಳು ವಾರ್ಡ್‌ನಲ್ಲಿ ಸಭೆ ಕರೆವ ಮೂಲಕ ಮತ್ತು ಶೇಕಡಾ 83% ರಷ್ಟು ಮಹಿಳಾ ಪ್ರತಿನಿಧಿಗಳು ಜನರ ಮನೆಗೆ ಹೋಗಿ ಅರಿವನ್ನು ಮೂಡಿಸುತ್ತೇವೆ ಎಂದಿದ್ದಾರೆ. ಈ ಎಲ್ಲಾ ಮಾಹಿತಿಯನ್ನು ಗಮನಿಸಿದಾಗ ಹೆಚ್ಚಿನ ಸಂಖ್ಯೆಯ ಮಹಿಳಾ ಪ್ರತಿನಿಧಿಗಳು ತಮ್ಮ ವಾರ್ಡ್‌ನ ಜನರಿಗೆ ಸರಕಾರದ ಸವಲತ್ತುಗಳ ಮಾಹಿತಿಯನ್ನು ತಿಳಿಸುವಲ್ಲಿ ವಿಫಲರಾಗಿದ್ದಾರೆ ಎಂದು ಕಂಡು ಬರುತ್ತದೆ.

<u>ಮಹಿಳಾ ಮೀಸಲಾತಿಯ ಬಗ್ಗೆ ಅರಿವಿನ ವಿವರ</u>

ಭಾರತದಲ್ಲಿ ಮಹಿಳಾ ಮೀಸಲಾತಿ ಒಂದು ಚರ್ಚೆಯ ವಿಷಯವಾಗಿದ್ದು ವಿವಿಧ ರಾಜಕೀಯ ಪಕ್ಷಗಳು ಸಂಸ್ಥೆಯ ಮಹಿಳಾ ಮೀಸಲಾತಿಯ ಮಸೂದೆಯನ್ನು ಜಾರಿ ಮಾಡುವಲ್ಲಿ ಮೀನಮೇಷ ಎನಿಸುತ್ತದೆ. ಮಹಿಳಾ ಮೀಸಲಾತಿಯನ್ನು ನೀಡುವ ಮೂಲಕ ಸಬಲೀಕರಣ ಸಾಧ್ಯವಾಗುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯು ಶೇ 50 ರಷ್ಟು ನೀಡಬೇಕು ಎಂಬುದು ಸ್ಥಳೀಯ ಪ್ರತಿನಿಧಿಗಳ ಬೇಡಿಕೆಯಾಗಿದೆ. ಈ ಸಂಬಂಧವಾಗಿ ಕೇಳಿದ ಪ್ರಶ್ನೆಗೆ ಬಂದ ಉತ್ತರವನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.

ಕೋಷ್ಟಕ 3.2.3.(4)

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	25	83%
ಇಲ್ಲ	5	16.6%
ಒಟ್ಟು	30	99.9%

(ಮೂಲ– ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ (3.2.3.(4)ದಲ್ಲಿ ತಿಳಿಸಿರುವಂತೆ ಒಟ್ಟು 30 ಪ್ರತಿನಿಧಿಗಳಲ್ಲಿ ಶೇ 83ರಷ್ಟು ಪ್ರತಿನಿಧಿಗಳ ತಮಗೆ ಸ್ಥಳೀಯ ಸರಕಾರದಲ್ಲಿ ಮಹಿಳಾ ಮೀಸಲಾತಿಯ ಬಗ್ಗೆ ಅರಿವಿದೆ. ತಾವು ಮೀಸಲಾತಿಯ ಆಧಾರದ ಮೇಲೆ ಈ ಸ್ಥಾನಕ್ಕೆ ಬಂದಿರುವುದು ಎಂದಿರುತ್ತಾರೆ. ಶೇ 17% ರಷ್ಟು ಮಹಿಳಾ ಪ್ರತಿನಿಧಿಗಳು ತಮಗೆ ಸ್ಥಳೀಯ ಸರಕಾರದಲ್ಲಿ ಮಹಿಳಾ ಮಿಸಲಾತಿಯ ಅರಿವು ಇಲ್ಲ ಎಂದಿರುತ್ತಾರೆ. ತಾವು ಸಾಮಾನ್ಯ ವಿಭಾಗದಲ್ಲಿ ಸ್ಪರ್ಧಿಸಿ ಇಲ್ಲಿಗೆ ಆಯ್ಕೆಯಾಗಿರುವುದು ಎಂಬ ಉತ್ತರವನ್ನು ನೀಡಿರುತ್ತಾರೆ. ಮೇಲಿನ ಪ್ರತಿಕ್ರಿಯೆಯನ್ನು ಗಮನಿಸಿದಾಗ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ತಮಗೆ ಸ್ಥಳೀಯ ವ್ಯವಸ್ಥೆಯಲ್ಲಿ ಶೇ 50% ರಷ್ಟು ಮೀಸಲಾತಿಯನ್ನು ಸರಕಾರ ನೀಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿರುತ್ತಾರೆ.

ಪುರುಷರಿಗೆ ಸಮಾನವಾದ ಹಕ್ಕು ಪಾಲಿಕೆಯಲ್ಲಿ ಇದೆಯೇ?

ನಗರ ಸ್ಥಳೀಯ ಸರಕಾರ ವ್ಯವಸ್ಥೆಯಲ್ಲಿ ಮಹಿಳಾ ಮೀಸಲಾತಿಯನ್ನು ನೀಡಿದ್ದರೂ ಪಾಲಿಕೆಯ ಸಭೆಗಳಲ್ಲಿ ಆಡಳಿತದಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾದ ಸ್ಥಾನಮಾನ, ಹಕ್ಕು ಪಡೆಯುವಲ್ಲಿ ವಿಫಲರಾಗಿರುತ್ತಾರೆ. ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾದ ಸ್ಥಾನಮಾನವನ್ನು ಹೊಂದಿದ್ದರೆ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆ.

ಕೋಷ್ಟಕ 3.2.3(5)

ಅಭಿಪ್ರಾಯ	ಸೂಚನಾದಾರ	ಶೇಕಡವಾರು
ಹೌದು	20	66%
ಇಲ್ಲ	10	33%
ಒಟ್ಟು	30	99.9%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ (3.2.3(5)ದಲ್ಲಿ ತಿಳಿಸಿರುವಂತೆ ಒಟ್ಟು ಸೂಚನದಾರರು ಶೇಕಡಾ 66% ರಷ್ಟು ಪ್ರತಿನಿಧಿಗಳು ಪುರುಷರಿಗೆ ಸಮಾನವಾದ ಹಕ್ಕು ಪಾಲಿಕೆಯಲ್ಲಿ ಇದೆ ಎಂದು ಶೇಕಡಾ 33% ರಷ್ಟು ಸೂಚನದಾರರು ಪುರುಷರಿಗೆ ಸಮಾನವಾದ ಹಕ್ಕು ಪಾಲಿಕೆಯಲ್ಲಿ ಇಲ್ಲ ಎಂದಿದ್ದಾರೆ. ಹೆಚ್ಚಿನ ಮಹಿಳಾ ಸದಸ್ಯರನ್ನು ವಿಚಾರಿಸಿದಾಗ ತಮಗೆ ಪುರುಷರಷ್ಟು ಸಮಾನವಾಗಿ ಮಾತನಾಡುವ, ಅಭಿಪ್ರಾಯ ವ್ಯಕ್ತ ಪಡಿಸುವ ಸ್ವಾತಂತ್ರ್ಯ ಪಾಲಿಕೆಯಲ್ಲಿ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

<u>ಆಡಳಿತ ಅನುಭವ:</u>

<u>ಚುನಾವಣೆಗೆ ಸ್ಪರ್ಧಿಸಲು ಕಾರಣವಾದ ಅಂಶಗಳು :</u>

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಪರಮಾಧಿಕಾರವನ್ನು ಹೊಂದಿರುತ್ತಾರೆ. ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಮಹಿಳೆಯರು ಪುರುಷರಷ್ಟೇ ಸಮಾನವಾದ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಅಂತೆಯೇ ಚುನಾವಣೆಗೆ ಸ್ಪರ್ಧಿಸುವ ಸಲುವಾಗಿ ಭಾರತದ ಸಂವಿಧಾನವು ಪುರುಷರಷ್ಟೇ ಸಮಾನವಾಗಿ ಮಹಿಳೆಯರಿಗೆ ಅವಕಾಶವನ್ನು ನೀಡಿದೆ. ಆದರೆ ಮಹಿಳೆಯರು ಕೆಲವೊಂದು ಸಾಮಾಜಿಕ, ವೈಯಕ್ತಿಕ ಕಾರಣದಿಂದ ಚುನಾವಣೆಗೆ ಸ್ಪರ್ಧಿಸಲು ಹಿಂದೇಟು ಹಾಕುತ್ತಿರುತ್ತಾರೆ.

ಕೋಷ್ಟಕ 3.2.3(6)

ಕಾರಣವಾದ ಅಂಶಗಳು	ಸೂಚನಾದಾರರು	ಶೇಕಡವಾರು
ಕುಟುಂಬದ ಪ್ರೇರಣೆ	15	50
ಮಹಿಳಾ ಮೀಸಲಾತಿ	25	83
ಸ್ವ ಪ್ರೇರಣೆ	5	16

ಕುಟುಂಬದ ರಾಜಕೀಯ ಹಿನ್ನಲೆ	10	33
ಒಟ್ಟು	55	182%

ಈ ಮೇಲಿನ ಕೋಷ್ಟಕ (3.2.3(6)ವನ್ನು ಗಮನಿಸಿದಾಗ ಒಟ್ಟು ಪ್ರತಿನಿಧಿಗಳಲ್ಲಿ ಶೇ 50 ಕುಟುಂಬದ ಪ್ರೇರಣೆಯಿಂದ ಚುನಾವಣೆಯಲ್ಲಿ ಆಯ್ಕೆಯಾಗಿದ್ದು ಶೇ 83 ರಷ್ಟು ಮಹಿಳಾ ಪ್ರತಿನಿಧಿಗಳು ಮಹಿಳಾ ಮೀಸಲಾತಿಯಿಂದ ಆಯ್ಕೆಯಾಗಿದ್ದು ಶೇ.16 ರಷ್ಟು ಮಹಿಳಾ ಪ್ರತಿನಿಧಿಗಳು ಸ್ವ ಪ್ರೇರಣೆಯಿಂದ ಆಯ್ಕೆಯಾಗಿದ್ದು ಶೇ.33 ರಷ್ಟು ಮಹಿಳಾ ಪ್ರತಿನಿಧಿಗಳು ಕುಟುಂಬದ ರಾಜಕೀಯ ಬೆಂಬಲದಿಮ್ದ ಆಯ್ಕೆಯಾಗಿದ್ದು ಶೇ.10 ರಷ್ಟು ಮಹಿಳಾ ಪ್ರತಿನಿಧಿಗಳು ಅನಿರೀಕ್ಷಿತವಾಗಿ ಚುನಾವಣೆಯಲ್ಲಿ ಆಯ್ಕೆಯಾಗಿರುವುದು ಕಂಡುಬರುತ್ತದೆ. ಈ ಮೂಲಕ ಒಟ್ಟು ಫಲಿತಾಂಶವನ್ನು ಗಮನಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಮಹಿಳಾ ಮೀಸಲಾತಿಯ ಆಧಾರದಲ್ಲಿ ಚುನಾವಣೆಗೆ ಸ್ಪರ್ಧಿಸಿರುವುದನ್ನು ಕಾಣಬಹುದಾಗಿದೆ.

ಚುನಾವಣಾ ಪೂರ್ವದಲ್ಲಿ ಸಂಘ ಸಂಸ್ಥೆಯ ಸದಸ್ಯತ್ವದ ಬಗ್ಗೆ

ಆಡಳಿತದ ಚುಕ್ಕಾಣಿಯನ್ನು ಹಿಡಿಯುವ ಸಲುವಾಗಿ ಪ್ರತಿಯೊಬ್ಬ ಸದಸ್ಯನಿಗೂ ಅದರ ಪೂರ್ವಾನುಭವ ಇರದಿದ್ದರೆ ಮುಂದುವರೆಯಲು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ದತ್ತಾಂಶವನ್ನು ಸಂಗ್ರಹಣೆ ಮಾಡುವಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಪಾಲಿಕೆಗೆ ಆಯ್ಕೆಯಾಗುವ ಮೊದಲು ತಾವು ಸತತವಾಗಿ ಮಹಿಳಾ ಮಂಡಲ, ಸ್ವ-ಸಹಾಯ ಸಂಘ ದೇವಸ್ಥಾನದ ಸಮಿತಿ, ಜಾತಿ ಸಂಘಟನೆಯಲ್ಲಿ ತಮ್ಮನ್ನು ತಾವು ತೊಡಗಿಸಿರುವುದು ಕಂಡುಬರುತ್ತದೆ.

ಕೋಷ್ಟಕ 3.2.3(7)

ಅಭಿಪ್ರಾಯ	ಹೌದು	ಇಲ್ಲ
ಮಹಿಳಾ ಮಂಡಲ	20	66%
ಸ್ವ-ಸಹಾಯ ಸಂಘ	20	66%
ರಾಜಕೀಯ ಪಕ್ಷ	10	33%
ಜಾತಿ ಸಂಘಟನೆ	15	50%
ಒಟ್ಟು	65	215%

(ಮೂಲ- ಸರ್ವೇ)

(ಮೇಲಿನ ಕೋಷ್ಟಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (3.2.3(7)ವನ್ನು ಗಮನಿಸಿದಾಗ ಒಟ್ಟು ಪ್ರತಿಕ್ರಿಯದಾರರಲ್ಲಿ ಶೇ ರಷ್ಟು ಮಹಿಳಾ ಪ್ರತಿನಿಧಿಗಳು 66% ಮಹಿಳಾ ಮಂಡಲದ ಸದಸ್ಯರಾಗಿದ್ದು ಶೇ 66% ರಷ್ಟು ಪ್ರತಿನಿಧಿಗಳು ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು ಶೇ 33 ರಷ್ಟು ಸದಸ್ಯರು ರಾಜಕೀಯ ಪಕ್ಷದ ಸದಸ್ಯರಾಗಿರುವುದು ಕಂಡು ಬರುತ್ತದೆ. ಶೇ 50 ರಷ್ಟು ಸದಸ್ಯರು ಜಾತಿ ಸಂಘಟನೆಯ ಸದಸ್ಯರಾಗಿರುತ್ತಾರೆ. ಈ ಎಲ್ಲಾ ಫಲಿತಾಂಶವನ್ನು ಗಮನಿಸಿದಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಚುನಾವಣ ಪೂರ್ವದಲ್ಲಿ ಮಹಿಳ ಮಂಡಲ, ಸ್ವ-ಸಹಾಯ ಸಂಘದ ಸದಸ್ಯರಾಗಿದ್ದು ನಿರಂತರವಾಗಿ ಸಾಮಾಜಿಕ ಕಾರ್ಯದಲ್ಲಿ ತೊಡಗಿರುವುದರಿಂದ ಅವರಿಗೆ ಆಡಳಿತದ ಅನುಭವವನ್ನು ಪಡೆಯುವಲ್ಲಿ ಸಹಕಾರಿಯಾಗಿದೆ.

<u>ನಿಮ್ಮ ಆಡಳತಕ್ಕೆ ಸಹಾಯಕವಾದ ಅಂಶಗಳು:</u>

ಕೋಷ್ಟಕ 3.2.3(8)

ಅಭಿಪ್ರಾಯ	ಬಹಳ ಮಟ್ಟಿಗೆ		ಸ್ವಲ್ಪ ಮಟ್ಟಿಗೆ		ಇಲ್ಲವೇ ಇಲ್ಲ	
	ಸೂಚನಾದಾರರು	ಶೇಕಡಾವಾರು	ಸೂಚನಾದಾರರು	ಶೇಕಡಾವಾರು	ಸೂಚನಾದಾರರು	ಶೇಕಡಾವಾರು
ಶಿಕ್ಷಣ ಎಷ್ಟು ಸಹಾಯಕ	20	66.6%	7	23.3%	3	10%
ಕುಟುಂಬದ ರಾಜಕೀಯ ಅನುಭವ	15	50%	5	16.6%	10	33%
ಹಿರಿಯ ಸದಸ್ಯರ ಸಹಾಯ	23	76.6%	5	16.6%	2	6.6%
ಒಟ್ಟು	58	193.2%	7	56.5%	16	49.6%

(ಮೂಲ- ಸರ್ವೇ)

(ಮೇಲಿನ ಕೋಷ್ಟಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (3.2.3(8)ದಲ್ಲಿ ತಿಳಿಸಿರುವಂತೆ ಒಟ್ಟು ಪ್ರತಿಕ್ರಿಯೆದಾರರಲ್ಲಿ ಶೇ.67% ರಷ್ಟು ಮಹಿಳಾ ಪ್ರತಿನಿಧಿಗಳಿಗೆ ಶಿಕ್ಷಣ, ಶೇ.50% ರಷ್ಟು ಮಹಿಳಾ ಪ್ರತಿನಿಧಿಗಳಿಗೆ ಅವರ ಕುಟುಂಬದ ರಾಜಕೀಯ ಅನುಭವ, ಶೇ. 77% ರಷ್ಟು ಪ್ರತಿನಿಧಿಗಳಿಗೆ ಪಾಲಿಕೆಯ

ಹಿರಿಯ ಸದಸ್ಯರ ಆಡಳಿತ ಸಹಾಯ ದೊರಕಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಪಾಲಿಕೆಯ ಮಹಿಳಾ ಸದಸ್ಯರಿಗೆ ಅವರು ಕಲಿತ ಶಿಕ್ಷಣ ಮತ್ತು ಪಾಲಿಕೆಯಲ್ಲಿರುವ ಹಿರಿಯ ಸದಸ್ಯರ ಸಹಾಯವು ಅವರಿಗೆ ಆಡಳಿತಕ್ಕೆ ಸಂಬಂಧಪಟ್ಟಂತೆ ಸಹಾಯ ಮಾಡುವ ಅಂಶವಾಗಿದೆ ಎಂದು ಪರಿಗಣಿಸಲಾಗಿದೆ.

ತರಬೇತಿ ಕಾರ್ಯಾಗಾರದ ಸದುಪಯೋಗ:

ಪಾಲಿಕೆಯ ಚುನಾಯಿತ ಪ್ರತಿನಿಧಿಗಳ ಕಾರ್ಯವೈಖರಿಯನ್ನು ಹೆಚ್ಚಿಸುವ ಸಲುವಾಗಿ ಅವರಲ್ಲಿ ಆಡಳಿತದ ಅನುಭವವನ್ನು ಹೆಚ್ಚಿಸುವ ಸಲುವಾಗಿ ಅವರಿಗೆ ಬೇರೆ ಬೇರೆ ರೀತಿಯ ಕಾರ್ಯಾಗಾರವನ್ನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮತ್ತು ಬೆಂಗಳೂರು, ಮೈಸೂರು ನಗರಗಳಲ್ಲಿ ಆಯೋಜಿಸಿರುತ್ತದೆ. ಈ ಸಂಬಂಧವಾಗಿ ಕೇಳಿದ ಪ್ರಶ್ನೆಗಳಿಗೆ ಪಾಲಿಕೆಯ ಮಹಿಳಾ ಸದಸ್ಯರು ಕೊಟ್ಟ ಉತ್ತರವನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

ಕೋಷ್ಟಕ 3.2.3(9)

ಅಭಿಪ್ರಾಯ	ಹೌದು		ಇಲ್ಲ		ಒಟ್ಟು
	ಸೂಚನಾದಾರರು	ಶೇಕಡಾವಾರು	ಸೂಚನಾದಾರರು	ಶೇಕಡಾವಾರು	
ತರಬೇತಿ ಕಾರ್ಯಾಗಾರದ ಉಪಯೋಗ ಪಡೆದವರು	26	86.6%	3	10%	30 96.6%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (3.2.3(9)ದಲ್ಲಿ ತಿಳಿಸಿರುವಂತೆ ಶೇ. 86%ರಷ್ಟು ಮಹಿಳಾ ಪ್ರತಿನಿಧಿಗಳು ತರಬೇತಿ ಕಾರ್ಯಾಗಾರದ ಉಪಯೋಗವನ್ನು ಪಡೆದಿರುವುದು ಶೇ. 10ರಷ್ಟು ಮಹಿಳಾ ಪ್ರತಿನಿಧಿಗಳು ತರಬೇತಿ ಕಾರ್ಯಾಗಾರದ ಉಪಯೋಗವನ್ನು ಪಡೆಯದೆ ಇರುವುದು ಕಂಡುಬರುತ್ತದೆ ಒಟ್ಟು ಪ್ರತಿನಿಧಿಗಳಲ್ಲಿ ಹೆಚ್ಚಿನ ಪ್ರತಿನಿಧಿಗಳು ತರಬೇತಿ ಕಾರ್ಯಗಾರದ ಉಪಯೋಗವನ್ನು ಪಡೆದು ಆ ಮೂಲಕ ತಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಿರುವುದನ್ನು ಕಾಣಬಹುದಾಗಿದೆ.

೩.೩.೪ ಸ್ಥಾಯಿ ಸಮಿತಿಗಳ ವಿವರ

ಮಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿಗೆ ಸಂಬಂಧಿಸಿದಂತೆ ಸಂಶೋಧಕರು ಪಾಲಿಕೆಯ 5 ವರ್ಷಗಳ ಕಾರ್ಯವೈಖ್ಯರಿಯ ದತ್ತಾಂಶವನ್ನು ಅಧ್ಯಯನಕ್ಕೆ ಬಳಸಲಾಗಿದೆ ಆದರೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ಥಳೀಯ ಸರ್ಕಾರದ ಮಹಿಳಾ ಮೀಸಲಾತಿ ಚುನಾವಣೆಗೆ ಸಂಬಂಧಿಸಿದಂತೆ 2013-14ನೇ ಸಾಲಿನಲ್ಲಿ ತಕಾರಾರು ಬಂದಿದ್ದು 1 ವರ್ಷ ಚುನಾವಣೆಯನ್ನು ರದ್ದು ಗೊಳಿಸಿದ್ದು ಆಯುಕ್ತರ ಆಡಳಿತವನ್ನು ಜಾರಿಗೆ ತಂದಿದ್ದು ನಾಲ್ಕು ವರ್ಷಗಳ ಮಾಹಿತಿಯನ್ನು ಮಾತ್ರ ಅಧ್ಯಯನದ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ

<u>ಮಂಗಳೂರು ಮಹಾನಗರಪಾಲಿಕೆ 2014-15ನೇ ಸಲಿನ ಆಡಳಿತಾರೂಢ ಹಾಗೂ ಸ್ಥಾಯಿ ಸಮಿತಿಗಳ ವಿವರಗಳು</u>

ಶ್ರೀ/ಶ್ರೀಮತಿ

1. ಮಹಾಬಲ ಮಾರ್ಲ, ಮಹಾಪೌರರು
2. ಕವಿತಾ, ಉಪ ಮಹಾಪೌರರು
3. ಎಂ ಶಶಿಧರ್ ಹೆಗ್ಡೆ, ಮುಖ್ಯ ಸಚೇತಕರು
4. ಪ್ರೇಮಾನಂದ ಶೆಟ್ಟಿ, ವಿಪಕ್ಷ ನಾಯಕರು

ಕೋಷ್ಟಕ 3.3.4(1)

ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ	**ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.**	**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ**	**ಲೆಕ್ಕ ಪತ್ರ ಸ್ಥಾಯಿ ಸಮಿತಿ**
ಶ್ರೀಯುತರಾದ 1. ಜೆಸಿಂತಾ ವಿಜಯಾ 2. ಆಶಾ ಡಿಸಿಲ್ವ	ಶ್ರೀಯುತರಾದ 1. ಅಶೋಕ್ ಶೆಟ್ಟಿ 2. ಅಪ್ಪಿ 3. ಬಶೀರ್	ಶ್ರೀಯುತರಾದ 1. ಅಶೋಕ್ ಕುಮಾರ್ ಡಿ.ಕೆ	ಶ್ರೀಯುತರಾದ 1. ಪುರುಷೋತ್ತಮ ಚಿತ್ರಾಪುರ 2. ಸಬಿತಾ ಮಿಸ್ಕಿತ್

3. ಶೈಲಜ 4. ರಾಧಾಕೃಷ್ಣ 5. ರಾಜೇಂದ್ರ 6. ರೂಪ ಡಿ.ಬಂಗೇರ 7. ಕೆ.ರಾಜೇಶ್	ಅಹಮ್ಮದ್ 4. ಅಖಿಲಾ ಆಳ್ವ 5. ಬಿ.ಪ್ರಕಾಶ್ 6. ಸುಧೀರ್ ಶೆಟ್ಟಿ 7. ಸುಮಿತ್ರ	2. ಕವಿತಾ ಸನಿಲ್ 3. ಎ.ಸಿ ವಿನಯರಾಜ್ 4. ಪ್ರತಿಭಾ ಕುಳಾಯಿ 5. ಟಿ.ಪ್ರವೀಣ್ ಚಂದ್ರ ಆಳ್ವ 6. ಗಣೇಶ್ ಹೊಸಬೆಟ್ಟು 7. ನವೀನ್ ಚಂದ್ರ.ಕೆ	3. ಕೆ.ಜುಬೈದಾ 4. ರತಿಕಲಾ 5. ಲತಾ ಸಾಲ್ಯಾನ್ 6. .ವಿಜಯಕುಮಾರ್ 7. ಸುರೇಂದ್ರ

ಈ ಮೇಲಿನ ಕೋಷ್ಟಕ (3.3.4(1)ದಲ್ಲಿ ತಿಳಿಸಿರುವಂತೆ 2014-15ನೇ ಸಾಲಿನ ಸ್ಥಾಯಿ ಸಮಿತಿಗಳ ವಿವರವನ್ನು ಗಮನಿಸಿದಾಗ ತೆರಿಗೆ ಮತ್ತು, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿಯಲ್ಲಿ ಶೇ. 57% ರಷ್ಟು (4) ರಷ್ಟು ಮಹಿಳಾ ಪ್ರಾಧ್ಯಾನತೆಯನ್ನು ಕಾಣಬಹುದು, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಶೇ. 42 (4) ಮಹಿಳಾ ಪ್ರಾತಿನಿಧ್ಯ ಮತ್ತು ನಗರ ಯೋಜನೆ, ಅಭಿವೃದ್ಧಿ ಸ್ಥಾಯಿ ಸಮಿತಿಯಲ್ಲಿ ಶೇ. 28 (2) ರಷ್ಟು ಮಹಿಳಾ ಪ್ರಾತಿನಧ್ಯವನ್ನು, ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ಶೇ. 57 (4) ಮಹಿಳಾ ಪ್ರಾತಿನಿಧ್ಯವನ್ನು ಕಾಣಬಹುದು

<u>ಮಂಗಳೂರು ಮಹಾನಗರಪಾಲಿಕೆ 2015-16 ನೇ ಸಾಲಿನ ಆಡಳಿತಾರೂಢ ಹಾಗೂ ಸ್ಥಾಯಿ ಸಮಿತಿಗಳ ವಿವರಗಳು</u>

ಶ್ರೀ/ ಶ್ರೀಮತಿ

1. ಜೆಸಿಂತಾ ವಿಜಯಾ ಆಲ್ಫ್ರೆಡ್, ಮಹಾಪೌರರು
2. ಪುರುಷೋತ್ತಮ ಚಿತ್ರಾಪುರ, ಉಪ ಮಹಾಪೌರರು
3. ಎಂ ಶಶಿಧರ್ ಹೆಗ್ಡೆ, ಮುಖ್ಯ ಸಚೇತಕರು
4. ಸುಧೀರ್ ಶೆಟ್ಟಿ, ವಿಪಕ್ಷ ನಾಯಕರು

ಕೋಷ್ಟಕ 3.3.4(2)

ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ.	ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.	ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ.	ಲೆಕ್ಕ ಪತ್ರ ಸ್ಥಾಯಿ ಸಮಿತಿ.
ಶ್ರೀಯುತರಾದ 1. ಹರಿನಾಥ್ 2. ಎ.ಸಿ. ವಿನಯರಾಜ್ 3. ಅಶೋಕ್ ಶೆಟ್ಟಿ 4. ಅಖಿಲಾ ಆಳ್ವ 5. ರಾಜೇಂದ್ರ 6. ಹೇಮಲತಾ ಆರ್ ಸಾಲ್ಯಾನ್ 7. ರಘುವೀರ್	ಶ್ರೀಯುತರಾದ 1. ಪ್ರಕಾಶ್ ಬಿ. ಸಾಲ್ಯಾನ್ 2. ರತಿಕಲಾ 3. ನಾಗವೇಣಿ 4. ಪ್ರತಿಭಾ ಕುಳಾಯಿ 5. ರಜನೀಶ್ 6. ಗುಣಶೇಖರ ಶೆಟ್ಟಿ 7. ಪೂರ್ಣಿಮ	ಶ್ರೀಯುತರಾದ 1. ದೀಪಕ್ ಕೆ. ಪೂಜಾರಿ 2. ಅಪ್ಪಿ 3. ಶೈಲಜ 4. ಲತಾ ಸಾಲ್ಯಾನ್ 5. ಬಶೀರ್ ಅಹಮ್ಮದ್ 6. ತಿಲಕ್ ರಾಜ್ 7. ದಿವಾಕರ್	ಶ್ರೀಯುತರಾದ 1. ಕೇಶವ 2. ಆಶಾ ಡಿಸಿಲ್ವ 3. ಸುಮೈಯ 4. ಬಿ. ಪ್ರಕಾಶ್ 5. ಮೀರಾ ಕರ್ಕೇರಾ 6. ವಿಜಯಕುಮಾರ್ 7. ಜಯಂತಿ ಆಚಾರ್

ಈ ಮೇಲಿನ ಕೋಷ್ಟಕ (3.3.4(2)ದಲ್ಲಿ ತಿಳಿಸಿರುವಂತೆ 2015-16ನೇ ಸಾಲಿನ ಸ್ಥಾಯಿ ಸಮಿತಿಗಳ ವಿವರವನ್ನು ಗಮನಿಸಿದಾಗ ತೆರಿಗೆ ಮತ್ತು, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿಯಲ್ಲಿ ಶೇ. 28% ರಷ್ಟು (2) ರಷ್ಟು ಮಹಿಳಾ ಪ್ರಾಧ್ಯಾನತೆಯನ್ನು ಕಾಣಬಹುದು, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಶೇ. 57 (4) ಮಹಿಳಾ ಪ್ರಾತಿನಿಧ್ಯ ಮತ್ತು ನಗರ ಯೋಜನೆ, ಅಭಿವೃದ್ಧಿ ಸ್ಥಾಯಿ ಸಮಿತಿಯಲ್ಲಿ ಶೇ. 42 (3) ರಷ್ಟು ಮಹಿಳಾ ಪ್ರಾತಿನಧ್ಯವನ್ನು, ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ಶೇ. 57 (4) ಮಹಿಳಾ ಪ್ರಾತಿನಿಧ್ಯವನ್ನು ಕಾಣಬಹುದು

ಮಂಗಳೂರು ಮಹಾನಗರಪಾಲಿಕೆ 2016-17ನೇ ಸಾಲಿನ ಆಡಳಿತಾರೂಢ ಹಾಗೂ ಸ್ಥಾಯಿ ಸಮಿತಿಗಳ ವಿವರಗಳು

ಶ್ರೀ/ ಶ್ರೀಮತಿ

1. ಶ್ರೀ ಹರಿನಾಥ್, ಮಹಾಪೌರರು
2. ಕುಮಾರಿ ಸುಮಿತ್ರ, ಉಪ ಮಹಾಪೌರರು
3. ಎಂ ಶಶಿಧರ್ ಹೆಗ್ಡೆ, ಮುಖ್ಯ ಸಚೇತಕರು
4. ಶ್ರೀಮತಿ ರೂಪ ಡಿ ಬಂಗೇರಾ, ವಿಪಕ್ಷ ನಾಯಕರು

ಕೋಷ್ಟಕ 3.3.4(3)

ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ.	ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.	ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ.	ಲೆಕ್ಕ ಪತ್ರ ಸ್ಥಾಯಿ ಸಮಿತಿ.
ಶ್ರೀಯುತರಾದ 1. ಕುಮಾರಿ ಅಪ್ಪಿ 2. ಶೈಲಜ 3. ಸುರೇಂದ್ರ 4. ನವೀನ್ ಚಂದ್ರ ಕೆ. 5. ಟಿ ಪ್ರವೀಣ್ ಚಂದ್ರ ಆಳ್ವ 6. ಶ್ರೀಮತಿ ಸುಮ್ಮೈಯಾ 7. ಶ್ರೀಮತಿ ಪ್ರತೀಭಾ ಕುಳಾಯಿ	ಶ್ರೀಯುತರಾದ 1. ಶ್ರೀಮತಿ ಕವಿತಾ ಸನಿಲ್ 2. ಶ್ರೀಮತಿ ಲತಾ ಸಲ್ಯಾನ್ 3. ಶ್ರೀ ರಜನೀಶ್ 4. ಶ್ರೀಮತಿ ನಾಗವೇಣಿ 5. ಶ್ರೀ ಪ್ರೇಮಾನಂದ ಶೆಟ್ಟಿ 6. ಶ್ರೀ ಕೆ. ರಾಜೇಶ್ 7. ಶ್ರೀ ದೀಪಕ್ ಕೆ. ಪೂಜಾರಿ	ಶ್ರೀಯುತರಾದ 1. ಶ್ರೀ ಲ್ಯಾನ್ಸಿ ಲೋಟ್ ಪಿಂಟೋ 2. ಶ್ರೀ ಅಶೋಕ್ ಶೆಟ್ಟಿ 3. ಶ್ರೀಮತಿ ರತಿಕಲಾ 4. ಶ್ರೀ ವಿಜಯ ಕುಮಾರ್ 5. ಶ್ರೀ ಕೆ. ಮಧುಕಿರಣ್ 6. ಶ್ರೀ ನವೀನ್ ಆರ್	ಶ್ರೀಯುತರಾದ 1. ಶ್ರೀ ಬಶೀರ್ ಅಹಮದ್ 2. ಶ್ರೀಮತಿ ಪೂರ್ಣಿಮಾ 3. ಶ್ರೀ ರಘುವೀರ್ 4. ಶ್ರೀಮತಿ ಕೆ ಜುಬೈದಾ 5. ಶ್ರೀ ಬಿ ಪ್ರಕಾಶ್ 6. ಶ್ರೀಮತಿ ಅಖಿಲಾ ಆಳ್ವ 7. ಶ್ರೀಮತಿ ಕವಿತಾ

		ಡಿಸೋಜಾ 7. ಶ್ರೀ ಪುರುಷೋತ್ತಮ ಚಿತ್ರಾಪುರ	

ಈ ಮೇಲಿನ ಕೋಷ್ಟಕ (3.3.4(3) ದಲ್ಲಿ ತಿಳಿಸಿರುವಂತೆ 2016-17ನೇ ಸಾಲಿನ ಸ್ಥಾಯಿ ಸಮಿತಿಗಳ ವಿವರವನ್ನು ಗಮನಿಸಿದಾಗ ತೆರಿಗೆ ಮತ್ತು, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿಯಲ್ಲಿ ಶೇ. 57% ರಷ್ಟು (4) ರಷ್ಟು ಮಹಿಳಾ ಪ್ರಾಧ್ಯಾನತೆಯನ್ನು ಕಾಣಬಹುದು, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಶೇ. 57 (4) ಮಹಿಳಾ ಪ್ರಾತಿನಿಧ್ಯ ಮತ್ತು ನಗರ ಯೋಜನೆ, ಅಭಿವೃದ್ಧಿ ಸ್ಥಾಯಿ ಸಮಿತಿಯಲ್ಲಿ ಶೇ.14.28% (1) ರಷ್ಟು ಮಹಿಳಾ ಪ್ರಾತಿನಧ್ಯವನ್ನು, ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ಶೇ. 57 (4) ಮಹಿಳಾ ಪ್ರಾತಿನಿಧ್ಯವನ್ನು ಕಾಣಬಹುದು

ಮಂಗಳೂರು ಮಹಾನಗರಪಾಲಿಕೆ 2017-18ನೇ ಸಾಲಿನ ಆಡಳಿತಾರೂಢ ಹಾಗೂ ಸ್ಥಾಯಿ ಸಮಿತಿಗಳ ವಿವರಗಳು

ಶ್ರೀ/ ಶ್ರೀಮತಿ

5. ಶ್ರೀಮತಿ ಕವಿತಾ ಸನಿಲ್, ಮಹಾಪೌರರು
6. ಶ್ರೀ ರಜನೀಶ್, ಉಪ ಮಹಾಪೌರರು
7. ಎಂ ಶಶಿಧರ್ ಹೆಗ್ಡೆ, ಮುಖ್ಯ ಸಚೇತಕರು
8. ಗಣೇಶ್ ಹೊಸಬೆಟ್ಟು, ವಿಪಕ್ಷ ನಾಯಕರ

ಕೋಷ್ಠಕ 3.3.4(4)

ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ.	ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ.	ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ.	ಲೆಕ್ಕ ಪತ್ರ ಸ್ಥಾಯಿ ಸಮಿತಿ.

ಶ್ರೀಯುತರಾದ	ಶ್ರೀಯುತರಾದ	ಶ್ರೀಯುತರಾದ	ಶ್ರೀಯುತರಾದ
1. ಶ್ರೀಮತಿ ಪ್ರತಿಭಾ ಕುಳಾಯಿ 2. ಬಶೀರ್ ಅಹಮದ್ 3. ಕೆ. ಜುಬೈದಾ 4. ಮೀರಾ ಕರ್ಕೆರಾ 5. ರಾಧಾಕೃಷ್ಣ 6. ಸುಧೀರ್ ಶೆಟ್ಟಿ 7. ಪ್ರತಾಪ್ ಬಿ ಸಲ್ಯಾನ್	1. ಶ್ರೀಮತಿ ನಾಗವೇಣಿ 2. ಕುಮಾರಿ ಅಪ್ಪಿ 3. ಶ್ರೀ ಗುಣಶೇಖರ್ ಶೆಟ್ಟಿ 4. ಶ್ರೀಮತಿ ಜಯಂತಿ ಆಚಾರ್ 5. ಎ.ಸಿ. ವಿನಯ ರಾಜ್ 6. ಆಶಾ ಡಿಸಿಲ್ವಾ 7. ದೀಪಕ್ ಪೂಜಾರಿ	1. ಶ್ರೀ ಅಬ್ದುಲ್ ರವೂಫ್ 2. ಅಶೋಕ್ ಶೆಟ್ಟಿ 3. ಪ್ರವೀಣ್ ಚಂದ್ರ ಆಳ್ವ 4. ಹರೀಶ್ ಶೆಟ್ಟಿ 5. ಅಶೋಕ್ ಶೆಟ್ಟಿ 6. ಕವಿತಾ 7. ಮಹಮ್ಮದ್	1. ಸಬಿತಾ ಮಿಸ್ಕಿತ್ 2. ಸುಮೈಯಾ 3. ಶೈಲಜಾ 4. ರತಿಕಲಾ 5. ಹೇಮಂತ್ 6. ದಿವಾಕರ್ 7. ಪ್ರಕಾಶ್

ಈ ಮೇಲಿನ ಕೋಷ್ಟಕ(3.3.4(4)ದಲ್ಲಿ ತಿಳಿಸಿರುವಂತೆ 2017–18ನೇ ಸಾಲಿನ ಸ್ಥಾಯಿ ಸಮಿತಿಗಳ ವಿವರವನ್ನು ಗಮನಿಸಿದಾಗ ತೆರಿಗೆ ಮತ್ತು, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿಯಲ್ಲಿ ಶೇ. 42% ರಷ್ಟು (3) ರಷ್ಟು ಮಹಿಳಾ ಪ್ರಾಧ್ಯಾನತೆಯನ್ನು ಕಾಣಬಹುದು, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಶೇ. 42 (3) ಮಹಿಳಾ ಪ್ರಾತಿನಿಧ್ಯ ಮತ್ತು ನಗರ ಯೋಜನೆ, ಅಭಿವೃದ್ಧಿ ಸ್ಥಾಯಿ ಸಮಿತಿಯಲ್ಲಿ ಶೇ.14.28% (1) ರಷ್ಟು ಮಹಿಳಾ ಪ್ರಾತಿನಧ್ಯವನ್ನು, ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ಶೇ. 57 (4) ಮಹಿಳಾ ಪ್ರಾತಿನಿಧ್ಯವನ್ನು ಕಾಣಬಹುದು

ಮಂಗಳೂರು ಮಹಾನಗರ ಪಾಲಿಕೆಯ ಮಹಾಪೌರರು(೨೦೧೭–೧೮)

ಕವಿತಾ ಸನಿಲ್

ಶ್ರೀಮತಿ ಕವಿತಾ ಸನಿಲ್ ಇವರು ಪಚ್ಚನಾಡಿಯ ಚುನಾಯಿತ ಮಹಿಳಾ ಪ್ರತಿನಿಧಿಯಾಗಿದ್ದು ಪ್ರಸ್ತುತ ಮಹಾನಗರ ಪಾಲಿಕೆಯ ಮಹಾಪೌರರು ಆಗಿರುತ್ತಾರೆ. ಪದವಿ ಶಿಕ್ಷಣವನ್ನು ಪಡೆದ ಇವರ ಯಶಸ್ವಿ ಚುನಾಯಿತ ಪ್ರತಿನಿಧಿಯಾಗಿದ್ದಾರೆ. ೨೦೧೭–೧೮ ರ ಸಾಲಿನ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಿಳಾ ಮೀಸಲಾತಿಯ ಆಧಾರದಲ್ಲಿ ಅಧಿಕಾರವನ್ನು ಕೈಗೊಂಡ ಇವರು ತಮ್ಮ

ಯಶಸ್ವಿ ಜನಪರ ಕಾರ್ಯಚಟುವಟಿಕೆಗಳಿಂದಾಗಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜನಮನ ಗೆದ್ದಿದ್ದಾರೆ.

ಕಾರ್ಯವೈಖರಿ: ಪಾಲಿಕೆಯಲ್ಲಿ ಅತ್ಯಂತ ಶಿಸ್ತಿನ ಮಹಿಳೆಯಾದ ಇವರು ಪಾಲಿಕೆಯ ಆಡಳಿತ ನಿರ್ವಹಣೆಯನ್ನು ಸಮರ್ಥವಾಗಿ ಮಾಡಿರುತ್ತಾರೆ.

೧) ಕಳೆದ ಜುಲೈನಲ್ಲಿ ನಗರದಲ್ಲಿ ನಡೆಯುತ್ತಿದ್ದ ಅನಧಿಕೃತ ಸ್ಕಿಲ್‌ಗೇಮ್‌ಗಳ ಮೇಲೆ ದಾಳಿ

೨) ಅಕ್ರಮ ಮಸಾಜ್ ಪಾರ್ಲರ್‌ಗಳ ಮೇಲೆ ದಾಳಿ ನಡೆಸಿ ನಿಯಂತ್ರಣ

೩) ನಿರಂತರ ಮಳೆಯ ಕಾರಣದಿಂದ ನಗರದ ಕಾಲೇಜೊಂದರ ಬಳಿ ಮರ ಬಿದ್ದು ಜನರಿಗೆ ಸಮಸ್ಯೆಯಾದಾಗ ಕೂಡಲೇ ಸ್ಥಳಕ್ಕೆ ಆಗಮಿಸಿ ಪಾಲಿಕೆಯ ಕಡೆಯಿಂದ ತುರ್ತು ಸೇವೆಯ ಸೌಲಭ್ಯ

೪) ರಸ್ತೆಗಳ ಕಾಮಗಾರಿ ಕೆಲಸದ ಶೀಘ್ರ ಪರಿಶೀಲನೆ

೫) ಬುದ್ಧಿಮಾಂದ್ಯ ಮಕ್ಕಳ ಜೊತೆ ಸಂವಾದ

೬) ಕ್ರೀಡಾಪಟು, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ

೭) ನ್ಯಾಯಾಧೀಶರ ಜೊತೆ ಸಂವಾದ

೮) ನಗರದಲ್ಲಿ ಇ–ಶೌಚಾಲಯ ರಚನೆಗೆ ಸಹಕಾರ

೯) ನಗರದಲ್ಲಿ ನಡೆಯುತ್ತಿದ್ದ ಗಾಂಜಾ ಅಡ್ಡೆಗಳ ಮೇಲೆ ದಾಳಿ

ಪ್ರಸ್ತುತ ಪಾಲಿಕೆಯ ಮಹಾಪೌರರಾಗಿರುವ ಇವರು ತಾನೊಬ್ಬ ಮಹಿಳೆ ಎಂದು ದೃತಿಗೆಡದೆ ಸಂಸಾರದ ಜವಾಬ್ದಾರಿ ಮತ್ತು ಪಾಲಿಕೆಯ ಕಾರ್ಯಚಟುಮಟಿಕೆಯನ್ನು ಯಶಸ್ವಿಯಾಗಿ ನಡೆಸುತ್ತಾ ಪಾಲಿಕೆಯಲ್ಲಿ ಮಹಿಳಾ ಸಬಲೀಕರಣ, ರಾಜಕೀಯ ಪ್ರಾತಿನಿಧ್ಯವನ್ನು ಸಾಧಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಅಧ್ಯಾಯ-೪

ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ, ಸಬಲೀಕರಣದ ವಿವರ, ಮಹಿಳೆಯರು ಎದುರಿಸುತ್ತಿರುವ ರಾಜಕೀಯ ಸಮಸ್ಯೆಗಳು

ಈ ಅಧ್ಯಾಯದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಪ್ರತಿನಿಧಿಗಳ ಕಾರ್ಯವೈಖರಿ, ಮಹಿಳಾ ಪ್ರತಿನಿಧಿಗಳ ವೈಯಕ್ತಿಕ ಸಬಲೀಕರಣದ ವಿವರ, ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯದ ಸವಾಲುಗಳನ್ನು ಒಳಗೊಂಡಿರುತ್ತದೆ.

೪.೧ ಮಹಿಳಾ ಪ್ರತಿನಿಧಿಗಳ ಕಾರ್ಯವೈಖರಿ

ವಾರ್ಡಿನ ಸದಸ್ಯರಾಗಿ ಕೈಗೊಂಡ ಕಾರ್ಯಗಳು

ಸ್ಥಳೀಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ನಗರ ಸ್ಥಳೀಯ ಸರಕಾರಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ ಈ ನಿಟ್ಟಿನಲ್ಲಿ ಸ್ಥಳೀಯ ಜನಪ್ರತಿನಿಧಿಗಳು ತಮಗೆ ವಹಿಸಿರುವ ಕಾರ್ಯವನ್ನು ಸರಿಯಾಗಿ ನಿರ್ವಹಿಸುವುದರೆ ಮೂಲಕ ಜನರ ಮೆಚ್ಚುಗೆಗೆ ಪಾತ್ರವಾಗಬಹುದು ಹಾಗಾಗಿ ಜನಪರ ಕಾರ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಬೇಕಾದುದು ಪ್ರತಿಯೊಬ್ಬ ಜನಪ್ರತಿನಿಧಿಯ ಕರ್ತವ್ಯವಾಗಿದೆ.

ಕೋಷ್ಟಕ 4.1.1(1)

	ಹೌದು			ಇಲ್ಲ	
ಕ್ರ.ಸಂ	ಅಭಿಪ್ರಾಯ	ಸೂಚನದಾರರು	ಶೇಕಡಾವಾರು	ಸೂಚನಾದಾರರು	ಶೇಕಡಾವಾರು
1	ಮೂಲಭೂತ ಸೌಕರ್ಯ	30	100%	–	–
2	ಒಳಚರಂಡಿ ವ್ಯವಸ್ಥೆ	20	66%	10	33%
3	ವಿದ್ಯುತ್	23	76%	7%	23%

	ದೀಪ				
4	ಪರಿಶಿಷ್ಟ ಜಾತಿ/ ಪಂಗಡದ ಅಭಿವೃದ್ಧಿ	25	83.3%	5	16%
5	ಕೈಗಾರಿಕೆ	10	33.3%	20	66%
6	ಬಡತನ ನಿರ್ಮೂಲನೆ	25	83.3%	5	16.6%
7	ಸ್ಮಶಾನ	15	50%	15	50%
8	ತೋಟಗಾರಿಕೆ	22	73.3%	8	26.6%
9	ಪ್ರಾಣಿಗಳ ರಕ್ಷಣೆ	27	90%	3	10%
10	ಬಸ್ ನಿಲ್ದಾಣ	28	93%	2	66%

(ಮೂಲ– ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (4.1.1(1)ದಲ್ಲಿ ತಿಳಿಸಿರುವಂತೆ ಒಟ್ಟು ಪ್ರಕ್ರಿಯೆದಾರರಲ್ಲಿ ಶೇ 100% ರಷ್ಟು ಮಹಿಳಾ ಸದಸ್ಯರು ಮೂಲಭೂತ ಸೌಕರ್ಯಕ್ಕೆ ಮಹತ್ವವನ್ನು ನೀಡುತ್ತಿದ್ದು ಶೇ 66%ರಷ್ಟು ಒಳಚರಂಡಿ ವ್ಯವಸ್ಥೆಗೆ ಮಹತ್ವವನ್ನು ನೀಡುತ್ತಿದ್ದು ಶೇ 76% ರಷ್ಟು ವಿದ್ಯುತ್ ದೀಪ ಸೌಲಭ್ಯವನ್ನು ಒದಗಿಸುವಲ್ಲಿ ಪ್ರಾಧ್ಯಾನತೆ ನೀಡುತ್ತಿದ್ದು ಶೇ 83% ರಷ್ಟು ಮಹಿಳಾ ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಸರಕಾರದಿಂದ ಸಿಗುವ ಅನುದಾನವನ್ನು ಒದಗಿಸುತ್ತಿದ್ದಾರೆ. ಬಡತನ ನಿರ್ಮೂಲನೆ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದು ಶೇ 50%ರಷ್ಟು ಮಹಿಳಾ ಪ್ರತಿನಿಧಿಗಳ ಸ್ಮಶಾನ ತೋಟಗಾರಿಕೆಗೆ ಪ್ರಾಧ್ಯನತೆ ಶೇ 90% ರಷ್ಟು ಸದಸ್ಯರು ಪ್ರಾಣಿಗಳ ರಕ್ಷಣೆ ಶೇ 93 % ರಷ್ಟು ಸದಸ್ಯರು ಬಸ್ ನಿಲ್ದಾಣ ಸೇವೆಯನ್ನು ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದ್ದಾರೆ ಅಲ್ಲದೆ ಕೈಗಾರಿಕೆ ಸ್ಮಶಾನ ನಿರ್ಮಾಣದಲ್ಲಿ ಕಡಿಮೆ ಸಂಖ್ಯೆಯ ಸದಸ್ಯರು ಮಹತ್ವ ನೀಡುವುದನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳಾ ಪ್ರತಿನಿಧಿಗಳಲ್ಲಿ ಹೆಚ್ಚಿನವರು ಸರಕಾರದಿಂದ ಬಂದ

ಅನುದಾನವನ್ನು ಒಟ್ಟಾಗಿ ಜನರಿಗೆ ಸಿಗುವ ಮೂಲಭೂತ ಸೌಕರ್ಯಕ್ಕಾಗಿ ವಿನಿಯೋಗಿಸುವುದು ಒಂದು ಗಮನಾರ್ಹ ವಿಷಯವಾಗಿದೆ

ನಗರ ಸ್ವಚ್ಛತೆ ಮತ್ತು ಮಾರುಕಟ್ಟೆಗೆ ಪರಿಸರ ಸಂರಕ್ಷಣೆ

ನಗರದ ಸ್ವಚ್ಛತೆ ಪರಿಸರ ಸಂರಕ್ಷಣೆಯ ಪಾಲಿಕೆಯ ಸದಸ್ಯರ ಕಾರ್ಯವೈಖರಿಯಲ್ಲಿ ಒಂದು ಮುಖ್ಯವಾದ ಕಾರ್ಯಚಟುವಟಿಕೆಯಾಗಿದ್ದು ಸ್ವಚ್ಛತೆಯನ್ನು ಕಾಪಾಡುವಲ್ಲಿ ಸರಕಾರ ಸ್ಥಳೀಯ ಸರಕಾರಕ್ಕೆ ಸಂಬಂಧಿಸಿದಂತೆ ವಿವಿಧ ಯೋಜನೆಯನ್ನು ತಂದಿದ್ದು ಅದನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಪಾಲಿಕೆಯ ಸದಸ್ಯರ ಮೇಲಿರುತ್ತದೆ. ಈ ನಿಟ್ಟಿನಲ್ಲಿ ಸಂಶೋಧಕನು ಪ್ರಕ್ರಿಯೆದಾರರಲ್ಲಿ ಪ್ರಶ್ನೆಗಳನ್ನು ಕೇಳುವಾಗ ಬಂದ ಉತ್ತರವನ್ನು ಈ ಕೆಳಗಿನಂತೆ ಕ್ರೋಢಿಕರಿಸಿ ಇಲ್ಲಿ ತಿಳಿಸಲಾಗಿದೆ.

ಕೋಷ್ಠಕ–4.1.1(2)

ನಗರದ ಸ್ವಚ್ಛತೆ	ಸೂಚನಾದಾರರು	ಶೇಕಡಾವಾರು
ನಗರದ ಸ್ವಚ್ಛತೆ	25	83.3%
ಮಾರುಕಟ್ಟೆ ನಿರ್ಮಾಣ	7	23.3%
ಪರಿಸರ ಸಂರಕ್ಷಣೆ	25	83.3%
ಒಟ್ಟು	57	189.9%

(ಮೂಲ– ಸರ್ವೇ)

(ಮೇಲಿನ ಕೋಷ್ಠಕ (4.1.1(2)ದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಒಟ್ಟು ಪ್ರಕ್ರಿಯೆದಾರರಲ್ಲಿ ತಮ್ಮ ವಾರ್ಡಿನ ಸ್ವಚ್ಛತೆಯನ್ನು ಕಾಪಾಡುವಲ್ಲಿ ಶೇ 83% ರಷ್ಟು ಮಹಿಳಾ ಪ್ರತಿನಿಧಿಗಳು ಪ್ರಾಧ್ಯಾನತೆಯನ್ನು ನೀಡುತ್ತಿದ್ದು ಶೇ 23.3% ರಷ್ಟು ಮಹಿಳಾ ಪ್ರತಿನಿಧಿಗಳು ಮಾರುಕಟ್ಟೆಗೆ ಸಂಬಂಧಿಸಿದಂತೆ ಮಹತ್ವವನ್ನು ನೀಡುತ್ತಿದ್ದು ಶೇ 83% ರಷ್ಟು ಮಹಿಳಾ ಪ್ರತಿನಿಧಿಗಳು ತಮ್ಮ ವಾರ್ಡಿನ ಪರಿಸರ ಸಂರಕ್ಷಣೆಯ ಮಹತ್ವಕ್ಕೆ ಪ್ರಾಧ್ಯಾನತೆಯನ್ನು ನೀಡಿರುತ್ತಾರೆ. ಒಟ್ಟು ಪ್ರಕ್ರಿಯೆದಾರರಲ್ಲಿ ಹೆಚ್ಚಿನ

ಮಹಿಳಾ ಪ್ರತಿನಿಧಿಗಳು ವಾರ್ಡಿನ ಒಟ್ಟು ಪ್ರಕ್ರಿಯೆದಾರರಲ್ಲಿ ಸ್ವಚ್ಛತೆಯ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿರುವುದು ಕಾಣಬಹುದಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣವನ್ನು ಸಾಧಿಸುವಲ್ಲಿ ಪಾತ್ರ

ಮಹಿಳಾ ಮತ್ತು ಮಕ್ಕಳ ಕಲ್ಯಾಣವನ್ನು ಸಾಧಿಸುವ ನಿಟ್ಟಿನಲ್ಲಿ ಸರಕಾರವು ನಗರದಲ್ಲಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿದ್ದು ಈ ಮೂಲಕ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ಪೌಷ್ಟಿಕ ಆಹಾರ ಪೂರೈಕೆ, ಆರೋಗ್ಯ ಸೌಲಭ್ಯ, ಬಾಣಂತಿ ಸೌಲಭ್ಯ, ತಾಯಿ ಮಗುವಿನ ಪೋಷಣೆ, ಮಹಿಳೆಯರಿಗೆ ಸಂಬಂಧಿಸಿದಂತೆ ವಿವಿಧ ಸಾಲ ಯೋಜನೆ ಅಂತೆಯೇ ಅಲ್ಪಸಂಖ್ಯಾತರ ಕಲ್ಯಾಣವನ್ನು ಸಾಧಿಸಲು ಅವರಿಗೆ ಸಂಬಂಧಿಸಿದಂತೆ ಸಾಲಸೌಲಭ್ಯ ವಿದ್ಯಾರ್ಥಿವೇತನ ಮೀಸಲಾತಿ ಮೊದಲಾದ ಯೋಜನೆಯನ್ನು ರೂಪಿಸಲಾಗಿದೆ.

ಈ ಎಲ್ಲಾ ಸೌಲಭ್ಯವನ್ನು ಪ್ರತಿ ವಾರ್ಡಿನ ಜನರಿಗೆ ತಲುಪಿಸುವ ಜವಾಬ್ದಾರಿಯು ವಾರ್ಡಿನ ಸದಸ್ಯರ ಮೇಲೆ ಇದ್ದು ಸಂಶೋಧಕನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಮಹಿಳಾ ಪ್ರತಿನಿಧಿಗಳ ಉತ್ತರವನ್ನು ಇಲ್ಲಿ ಕ್ರೋಢಿಕರಿಸಲಾಗಿದೆ

ಕೋಷ್ಠಕ-4.1.1(3)

	ಹೌದು		ಇಲ್ಲ	
ಅಭಿಪ್ರಾಯ	ಸೂಚನದಾರರು	ಶೇಕಡಾವಾರು	ಸೂಚನೆದಾರರು	ಶೇಕಡಾವಾರು
ಮಹಿಳಾ ಮತ್ತು ಮಕ್ಕಳ ಕಲ್ಯಾಣ	25	83%	5	16%
ಅಲ್ಪಸಂಖ್ಯಾತರ ಕಲ್ಯಾಣ	20	66%	10	33%
ಒಟ್ಟು	45	149%	15	49%

(ಮೂಲ- ಸರ್ವೇ)

(ಮೇಲಿನ ಕೋಷ್ಠಕ ದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (4.1.1(3)ದಲ್ಲಿ ತಿಳಿಸಿರುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿಯನ್ನು ಸಾಧಿಸುವಲ್ಲಿ ಶೇ 83% ರಷ್ಟು ಮಹಿಳಾ ಪ್ರತಿನಿಧಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದು ಶೇ 5% ರಷ್ಟು ಇಲ್ಲ ಎಂದು ಪ್ರತಿಕ್ರಿಯಿಸಿದ್ದು ಅಲ್ಪಸಂಖ್ಯಾತರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಶೇ 66% ರಷ್ಟು ಪ್ರಕ್ರಿಯೆದಾರರು ಮೇಲ್ವಿಚಾರಣೆಯನ್ನು ನಡೆಸುತ್ತೇವೆ ಎಂದು ತಿಳಿಸಿರುತ್ತಾರೆ. ಒಟ್ಟಾರೆಯಾಗಿ ಗಮನಿಸಿದಾಗ ಹೆಚ್ಚಿನ ಮಹಿಳಾ

ಪ್ರತಿನಿಧಿಗಳ ತಮ್ಮ ವಾರ್ಡಿನಲ್ಲಿ ಬರುವ ಮಹಿಳೆ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿದ್ದು ಸರಕಾರದಿಂದ ಅವರಿಗೆ ಸಿಗುವ ಯೋಜನೆಯನ್ನು ಅವರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದ್ದಾರೆ.

ನಗರ ಪಾಲಿಕೆಯ ಕಛೇರಿಗೆ ಸೂಚನದಾರರು ನಿತ್ಯ ಭೇಟಿ ನೀಡುವ ವಿವರ

ಅಭಿಪ್ರಾಯ	ಸೂಚನದಾರರು	ಶೇಕಡಾವಾರು
ಪ್ರತಿದಿನ	12	40%
ವಾರಕೊಮ್ಮೆ ಸಭೆ	20	66.5%
ಸಮಾರಂಭಗಳಿಗೆ ಮಾತ	5	16%
ತಿಂಗಳಿಗೊಮ್ಮೆ	15	50%
ಒಟ್ಟು	52	172.5%

ಕೋಷ್ಠಕ–4.1.1(4)

(ಮೂಲ– ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಠಕ 4.1.1(4)ದಲ್ಲಿ ತಿಳಿಸಿರುವಂತೆ ಪಾಲಿಕೆಗೆ ಎಷ್ಟು ದಿನಗಳಿಗೊಮ್ಮೆ ಭೇಟಿ ನೀಡುತ್ತಾರೆ ಎಂಬುದನ್ನು ತಿಳಿಯಲು ಪ್ರಯತ್ನಿಸಿದಾಗ ಒಟ್ಟು ಸೂಚಾನಾಧಾರರಲ್ಲಿ ಶೇ. 40ರಷ್ಟು ಜನ ಪ್ರತಿ ದಿನ ಕಛೇರಿಗೆ ಭೇಟಿ ನೀಡುತ್ತೇವೆ ಎಂದರೆ 66% ರಷ್ಟು ಜನ ವಾರಕೊಮ್ಮೆ ಕಛೇರಿಗೆ ಬೇಟಿ ನೀಡುತ್ತೇವೆ.ಶೇ 5% ರಷ್ಟು ಜನಸಭೆ ಸಮಾರಂಭಗಳಿಗೆ ಮಾತ್ರ ಶೇ 15% ರಷ್ಟು ಜನ ತಿಂಗಳಿಗೊಮ್ಮೆ ಭೇಟಿ ನೀಡುತ್ತೇವೆ ಎಂದಿರುತ್ತಾರೆ.

ವಾರ್ಡಿನ ಜನರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ

ನಗರ ಸ್ಥಳೀಯ ಸರಕಾರ ವ್ಯವಸ್ಥೆಯಲ್ಲಿ ಜನರು ತಮ್ಮ ಸಮಸ್ಯೆಗಳನ್ನು ಸ್ಥಳೀಯ ಮಟ್ಟದ ಜನಪ್ರತಿನಿಧಿಗಳಿಗೆ ಹೇಳಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಅವಕಾಶವನ್ನು ಹೊಂದಿರುತ್ತಾರೆ. ಸ್ಥಳೀಯವಾಗಿ ಆಯ್ಕೆಯಾದ ಜನಪ್ರತಿನಿಧಿಗಳು ಅವರ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಸ್ಪಂದಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸಂಶೋಧಕರು ಕೇಳಿರುವ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಮಹಿಳಾ ಪ್ರತಿನಿಧಿಗಳ ಅಭಿಪ್ರಾಯವನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಕೋಷ್ಠಕ-4.1.1(5)

ಅಭಿಪ್ರಾಯ	ಸೂಚನಾದಾರರು	ಶೇಕಡಾವಾರು
ಮನೆಬಾಗಿಲಿಗೆ ತೆರಳಿ	25	83%
ಕಚೇರಿಯಲ್ಲಿ	10	33%
ಸಭೆಯ ಮೂಲಕ	15	50%
ಒಟ್ಟು	50	166%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (4.1.1(5)ದಲ್ಲಿ ತಿಳಿಸಿರುವಂತೆ ಮಹಿಳಾ ಜನಪ್ರತಿನಿಧಿಗಳಲ್ಲಿ ಶೇ 83% ರಷ್ಟು ಸದಸ್ಯರು ಅವರ ಮನೆಬಾಗಿಲಿಗೆ ಹೋಗಿ ಅವರ ಸಮಸ್ಯೆಗೆ ಸ್ಪಂದಿಸಿದರೆ ಶೇ 33 % ರಷ್ಟು ಸದಸ್ಯರು ಜನರ ಸಮಸ್ಯೆಗೆ ಸ್ಪಂದಿಸಲು ಕಛೇರಿಗೆ ಬರಲು ಹೇಳಿದರೆ ಶೇ 50% ರಷ್ಟು ಸದಸ್ಯರು ವಾರ್ಡಿನಲ್ಲಿ ಸಭೆಯನ್ನು ಕರೆಯುವ ಮೂಲಕ ಜನರ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಾರೆ

ಪಾಲಿಕೆಯಲ್ಲಿ ಮಹಿಳೆಯರ ಸಬಲೀಕರಣ ಸಾಧಿಸುವ ರೀತಿ

ಸಬಲೀಕರಣ ಎನ್ನುವುದು ಮಹಿಳೆಯರನ್ನು ಸಬಲರನ್ನಾಗಿ ಮಾಡುವಲ್ಲಿ ಹೊಸ ಪ್ರಯೋಗವಾಗಿದೆ. ಸಬಲೀಕರಣವನ್ನು ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸುವಂತೆ ಅರ್ಥೈಸಿದರೆ ಮಹಿಳಾ ರಾಜಕೀಯ ಮೀಸಲಾತಿ ಆಡಳಿತದಲ್ಲಿ ಅವಕಾಶ ಮಹಿಳಾ ಪ್ರಾತಿನಿಧ್ಯವನ್ನು ನೀಡುವ ಮೂಲಕ ಕೊಡಲು ಸಾದ್ಯ ಮಹಾನಗರ ಪಾಲಿಕೆಯಲ್ಲಿ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳಲ್ಲಿ ಈ ಸಂಬಂಧವಾಗಿ ಕೇಳಿದ ಪ್ರಶ್ನೆಗಳಿಗೆ ಬಂದ ಉತ್ತರವನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಕೋಷ್ಠಕ-4.1.1(6)

ಅಭಿಪ್ರಾಯ	ಸೂಚನಾದಾರರು	ಶೇಕಡಾವಾರು
ಹೌದು	25	83%

ಇಲ್ಲ	5	16%
ಒಟ್ಟು	30	99%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ(4.1.1(6) ದಲ್ಲಿ ತಿಳಿಸಿರುವಂತೆ ಒಟ್ಟು 30 ಸೂಚನಾದಾರರಲ್ಲಿ ಶೇ 83 ರಷ್ಟು ಸದಸ್ಯರು ಮಹಿಳಾ ಸಬಲೀಕರಣವನ್ನು ಮಹಿಳೆಯರ ಪರವಾಗಿ ಮಾತಾನಡುವ ಮೂಲಕ, ಮಹಿಳಾ ಮೀಸಲಾತಿಗೆ ಒತ್ತು ನೀಡುವ ಮೂಲಕ, ಮಹಿಳಾ ಅಭಿಪ್ರಾಯಕ್ಕೆ ಒಪ್ಪಿಗೆ ನೀಡುವ ಮೂಲಕ, ಮಹಿಳೆಯ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸಬಲೀಕರಣವನ್ನು ಸಾಧಿಸುವ ಪ್ರಯತ್ನವನ್ನು ಮಾಡುತ್ತಾರೆ ಎಂಬ ಅಭಿಪ್ರಾಯ ಬಂದಿರುತ್ತದೆ.

ಸ್ಥಳೀಯ ಸರ್ಕಾರ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಪುರುಷರಷ್ಟೆ ಪ್ರಾತಿನಿಧ್ಯ ಇದೆಯೇ?

ಸ್ಥಳೀಯ ಸರ್ಕಾರಿ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಎನ್ನುವುದು ಒಂದು ಖುಷಿಯ ವಿಷಯವಾಗಿದೆ. ಮಹಿಳೆಯರು ಪುರುಷರಷ್ಟೆ ಸಮಾನರು ಎಂದು ತೋರಿಸಲು ಈ ವ್ಯವಸ್ಥೆ ಪೂರಕವಾಗಿದೆ ಆದರೆ ಕೆಲವೊಂದು ಸಮಸ್ಯೆಗಳನ್ನು ಗಮನಿಸಿದಾಗ ಇನ್ನು ಕೂಡ ಮಹಿಳೆ ಪುರುಷರಷ್ಟೆ ಪ್ರಾಬಲ್ಯ ಪಡೆದಿಲ್ಲ ಎಂದು ಕಂಡುಬರುತ್ತದೆ.

ಅಭಿಪ್ರಾಯ	ಸೂಚನಧಾರರು	ಶೇಕಡಾವಾರು
ಹೌದು	17	23%
ಇಲ್ಲ	23	76%
ಒಟ್ಟು	40	99%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಕೋಷ್ಟಕದಲ್ಲಿ ತಿಳಿಸಿರುವಂತೆ ಒಟ್ಟು ಪ್ರತಿನಿಧಿಗಳಲ್ಲಿ ಶೇ 76% ರಷ್ಟು ಮಹಿಳಾ ಪ್ರತಿನಿಧಿಗಳು ಸ್ಥಳೀಯ ಸರಕಾರ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಪುರುಷರಿಗೆ ಪ್ರಾತಿನಿಧ್ಯ ಇಲ್ಲ ಎಂದಿರುತ್ತಾರೆ.ಶೇ 23 ರಷ್ಟು ಮಹಿಳಾ ಪ್ರತಿನಿಧಿಗಳು ಈ ವ್ಯವಸ್ಥೆಯಲ್ಲಿ ತಮಗೆ ಪುರುಷರಷ್ಟು ಪ್ರಾತಿನಿಧ್ಯ ಇದೆ ಎಂದಿದ್ದಾರೆ.ಒಟ್ಟಾರೆಯಗಿ ಗಮನಿಸಿದಾಗ ಹೆಚ್ಚಿನ ಸಂಖ್ಯೆಯ ಮಹಿಳಾ

ಪ್ರತಿನಿಧಿಗಳು ತಮಗೆ ಸರಕಾರ ನೀಡುತ್ತಿರುವ ಪ್ರಾತಿನಿಧ್ಯ ಪುರುಷರಿಗೆ ಸಮಾನವಾಗಿ ಇಲ್ಲ ಇನ್ನು ಶೇ 50%ರಷ್ಟು ಪ್ರಾತಿನಿಧ್ಯ ನೀಡಬೇಕು ಎಂಬ ಉತ್ತರ ಬಂದಿರುತ್ತದೆ.

ವಾರ್ಡಿನ ಕಾಮಗಾರಿ ಪರೀಕ್ಷಿಸಿರುವ ವಿವರ

ಕೋಷ್ಠಕ 4.1.1(7)

ಅಭಿಪ್ರಾಯ	ಸೂಚನದಾರರು	ಶೇಕಡಾವಾರು
ಒಬ್ಬರೇ	20	66%
ಪತಿಯ ಜೊತೆ	5	16%
ಸದಸ್ಯರ ಜೊತೆ	15	50%
ಪತಿ ಒಬ್ಬರೇ ಹೋಗುವವರು	5	16%
ಮನೆಯ ಇತರ ಸದಸ್ಯರು	–	–
ಒಟ್ಟು	45	148%

(ಮೂಲ– ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (4.1.1(7)ದಲ್ಲಿ ತಿಳಿಸಿರುವಂತೆ ವಾರ್ಡಿನ ಕಾಮಾಗಾರಿ ಪರೀಕ್ಷಿಸಲು ಯಾರ ಜೊತೆ ಹೋಗುವಿರಿ ಎನ್ನುವ ಪ್ರಶ್ನೆಗೆ ಮಹಿಳಾ ಪ್ರತಿನಿಧಿಗಳಲ್ಲಿ ಶೇಕಡಾ 66 ರಷ್ಟು ಜನ ತಾವು ಒಬ್ಬರೇ ಎಂದು ಶೇ 16 ರಷ್ಟು ಜನ ತಮ್ಮ ಪತಿಯ ಜೊತೆ ಎಂದು ಶೇ. 16 ರಷ್ಟು ಜನ ಪತಿ ಒಬ್ಬರೇ ಹೋಗುವವರು ಎಂದು ತಿಳಿಸಿರುತ್ತಾರೆ. ಒಟ್ಟಿನಲ್ಲಿ ಮಹಾನಗರ ಪಾಲಿಕೆಯಲ್ಲಿರುವ ಹೆಚ್ಚಿನ ಮಹಿಳಾ ಪ್ರತಿನಿಧಿಗಳ ತಮ್ಮ ವಾರ್ಡಿಗೆ ಸಂಬಂದಪಟ್ಟಂತೆ ಕಾಮಗಾರಿಯನ್ನು ಪರೀಕ್ಷಿಸುವ ಮೇಲ್ವಿಚಾರಣೆಯನ್ನು ವಹಿಸಿದ್ದು ಹೆಚ್ಚಿನ ಸಂಖ್ಯೆಯ ಮಹಿಳಾ ಪ್ರತಿನಿಧಿಗಳು ತಾವು ಒಬ್ಬರೇ ಹೋಗಿ ಕಾರ್ಯವೈಖರಿಯ ಮೇಲ್ವಿಚಾರಣೆ ನಡೆಸುವರು.

ಸ್ಥಾಯಿ ಸಮಿತಿಯ ಸದಸ್ಯತ್ವದ ಮಾಹಿತಿ

ಮಂಗಳೂರು ಮಹಾನಗರ ಪಾಲಿಕೆಯು ತೆರಿಗೆ ಸಮಿತಿ, ಸಾರ್ವಜನಿಕ ಆರೋಗ್ಯ ಸಮಿತಿ ನಗರ ಸಮಿತಿ, ಲೆಕ್ಕಪತ್ರ ಸಮಿತಿ, ಎಂಬ ನಾಲ್ಕು ಸಮಿತಿಯ ಮೂಲಕ

ಕಾರ್ಯಚರಿಸುತ್ತಿದ್ದು ಪ್ರತಿ ಸಮಿತಿಯಲ್ಲೂ ಮಹಿಳೆಯರ ಸದಸ್ಯತ್ವವನ್ನು ಕಾಣಬಹುದು ಅದಕ್ಕೆ ಸಂಬಂಧಿಸಿದ ವಿಶ್ಲೇಷಣೆಯನ್ನು ಈ ಕೆಳಗೆ ಕಾಣಬಹುದು.

<u>ಕೋಷ್ಟಕ 4.1.1(8)</u>

ಅಭಿಪ್ರಾಯ	ಸೂಚನಾದಾರರು	ಶೇಕಡವಾರು
ತೆರಿಗೆ ಸಮಿತಿ	12	40%
ಸಾರ್ವಜನಿಕ ಆರೋಗ್ಯ ಸಮಿತಿ	14	46.6%
ನಗರ ಸಮಿತಿ	7	23.33%
ಲೆಕ್ಕ ಪತ್ರ ಸಮಿತಿ	16	53.33%
ಒಟ್ಟು	49	163.23%

(ಮೂಲ- ಸರ್ವೇ)

(ಮೇಲಿನ ಕೋಷ್ಟಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮಂಗಳೂರು ಮಹಾ ನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ನೀವು ಯಾವ ಸ್ಥಾಯಿ ಸಮಿತಿಯ ಸದಸ್ಯರಾಗಿದ್ದೀರಿ ಎಂದು ಕೇಳಿದಾಗ ಈ 5 ವರ್ಷಗಳಲ್ಲಿ ಹೆಚ್ಚಿನ ಮಹಿಳಾ ಸದಸ್ಯರು ಸಾರ್ವಜನಿಕ ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯ ಸಮಿತಿಯ ಸದಸ್ಯರಾಗಿರುವುದು ಕಂಡು ಬರುತ್ತದೆ. ಅಂದರೆ ಶೇ.46.6ರಷ್ಟು ಸದಸ್ಯರು ಈ ಸಮಿತಿಯ ಸದಸ್ಯರಾಗಿದ್ದಾರೆ. ಅನಂತರದಲ್ಲಿ ಶೇ.40ರಷ್ಟು ತೆರಿಗೆ ಸಮಿತಿಯ ಸದಸ್ಯರು, ಶೇ.23.33% ರಷ್ಟು ನಗರ ಸಮಿತಿಯ, ಶೇ. 53.33% ಲೆಕ್ಕ ಪತ್ರ ಸಮಿತಿಯ ಸದಸ್ಯರಾಗಿದ್ದಾರೆ.

ಮಹಿಳಾ ಪ್ರತಿನಿಧಿಗಳ ಸಾಮಾನ್ಯ, ಕಡ್ಡಾಯ, ಐಚ್ಛಿಕ ಕಾರ್ಯಗಳ ವಿವರ

ಕೋಷ್ಟಕ 4.1.1(9)

ಅಭಿಪ್ರಾಯ	ಸೂಚನಾದಾರರು	ಶೇಕಡವಾರು
ಸಾಮಾನ್ಯ ಕಾರ್ಯಗಳು	10	33.3%
ಕಡ್ಡಾಯ ಕಾರ್ಯಗಳು	20	66.6%
ಐಚ್ಛಿಕ ಕಾರ್ಯಗಳು	15	50%
ಒಟ್ಟು	45	149%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಠಕ (4.1.1(9) ದಲ್ಲಿ ತಿಳಿಸಿರುವಂತೆ ಒಟ್ಟು ಸೂಚನಾದಾರರಲ್ಲಿ ಶೇ.33.3ರಷ್ಟು ಮಹಿಳಾ ಪ್ರತಿನಿಧಿಗಳು ಸಾಮಾನ್ಯ ಕಾರ್ಯಕ್ಕೆ ಮಹತ್ವ ನೀಡುತ್ತಿದ್ದು ಶೇ. 66.6ರಷ್ಟು ಮಹಿಳಾ ಪ್ರತಿನಿಧಿಗಳು ಕಡ್ಡಾಯ ಕಾರ್ಯಗಳಿಗೆ ಮಹತ್ವ ನೀಡುತ್ತಿದ್ದು ಶೇ. 50ರಷ್ಟು ಪ್ರತಿನಿಧಿಗಳು ಐಚ್ಛಿಕ ಕಾರ್ಯಗಳಿಗೆ ಮಹತ್ವ ನೀಡುತ್ತಿದ್ದಾರೆ.

೪.೨ ರಾಜಕೀಯ ಪ್ರಾತಿನಿಧ್ಯದಿಂದಾಗಿ ಮಹಿಳಾ ಪ್ರತಿನಿಧಿಗಳ ವೈಯಕ್ತಿಕ ಸಬಲೀಕರಣದ ವಿವರ

ಪಾತ್ರ ನಿರ್ವಹಣೆಯಲ್ಲಿ ಎದುರಿಸುತ್ತಿರುವ ಮಾನಸಿಕ ಒತ್ತಡ

ನಗರ ಪಾಲಿಕೆಯ ಮಹಿಳಾ ಸದಸ್ಯರು ತಮ್ಮ ಪಾತ್ರ ನಿರ್ವಹಣೆಯಲ್ಲಿ ಎದುರಿಸುತ್ತಿರುವ ಮಾನಸಿಕ ಒತ್ತಡಕ್ಕೆ ಸಂಬಂಧ ಪಟ್ಟಂತೆ ಹಲವಾರು ವಿಷಯಗಳನ್ನು ಚರ್ಚಿಸಲಾಯಿತು. ಇಲ್ಲಿ ಹಲವು ರೀತಿಯ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ನಾವು ನೋಡಬಹುದು. ಈ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಂಕಿ-ಅಂಶಗಳ ಮೂಲಕ ಈ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಠಕ 4.2.2(1)

ಅಭಿಪ್ರಾಯ	ಹೌದು		ಇಲ್ಲ		ಒಟ್ಟು
	ಸೂಚನದಾರರು	ಶೇಕಡವಾರು	ಸೂಚನ ದಾರರು	ಶೇಕಡವಾರು	
ಪ್ರತಿನಿಧಿಯಾದ ಮೇಲೆ ನಿಮ್ಮ ಮಾನಸಿಕ ಸ್ಥಿತಿ ಏರುಪೇರಾಗಿದೆಯೇ	5	16%	25	83%	5+25=30 16+83=100%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ(4.2.2(1)ದಲ್ಲಿ ತಿಳಿಸಿರುವಂತೆ ಶೇ 16% ರಷ್ಟು ಮಹಿಳಾ ಪ್ರತಿನಿಧಿಗಳು ಮಾನಸಿಕ ಸ್ಥಿತಿ ಏರುಪೇರಾಗಿದೆ ಎಂದು ಹೇಳಲು ಪ್ರಧಾನವಾಗಿ ಕೌಟುಂಬಿಕ

ಜವಾಬ್ದಾರಿ ಹೆಚ್ಚಾಗಿರುವುದೇ ಕಾರಣವಾಗಿದೆ. ಇದು ಗುರುತರವಾದ ಕಾರ್ಯವೇ ಆಗಿರುವುದರಿಂದ ನಿಭಾಯಿಸಿಕೊಂಡು ಹೋಗುವದೇ ಒಂದು ಸವಲಾಗಿದೆ.

ಶೇ 83% ರಷ್ಟು ಮಹಿಳಾ ಪ್ರತಿನಿಧಿಗಳ ಯಾವುದೇ ರೀತಿಯಲ್ಲಿ ಮಾನಸಿಕ ಸ್ಥಿತಿ ಏರು ಪೇರಾಗಿಲ್ಲ ಎಂಬುದಾಗಿ ಹೇಳಿಕೆ ಕೊಡಲು ಕಾರಣ ಈ ಹೇಳಿಕೆಯನ್ನು ನೀಡಿದ ಮಹಿಳಾ ಸದಸ್ಯರೆಲ್ಲರೂ ಕೂಡಾ 2ನೇ ಬಾರಿ ಗೆದ್ದು ಬಂದವರಾಗಿರುವುದರಿಂದ ಅನುಭವಿ ಸದಸ್ಯರಾಗಿರುತ್ತಾರೆ. ಇವರುಗಳು ಮಾನಸಿಕವಾಗಿ ಸಿದ್ಧರಿದ್ದು ಎಲ್ಲಾ ಕೆಲಸ ಕಾರ್ಯಗಳನ್ನು ಸಲೀಸಾಗಿ ಮಾಡುವಂತಹ ಮನೋದೃಢತೆಯನ್ನು ಹೊಂದಿರುವರು.

ಸಂಸಾರದ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿದ್ದೀರಾ?

ಕೋಷ್ಟಕ ರಲ್ಲಿ ನಗರಪಾಲಿಕೆಯ ಮಹಿಳಾ ಸದಸ್ಯರು ತಮ್ಮ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಶೋಧಕನು ಹೇಳಿದ ಪ್ರಶ್ನೆಗಳಿಗೆ ಬಂದ ಅಭಿಪ್ರಾಯವನ್ನು ಇಲ್ಲಿ ಕ್ರೋಢಿಕರಿಸಲಾಗಿದೆ.

ಕೋಷ್ಠಕ 4.2.2(2)

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	26	86%
ಇಲ್ಲ	4	13%
ಒಟ್ಟು	30	100%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ (4.2.2(2)ದಲ್ಲಿ ತಿಳಿಸಿರುವಂತೆ ಒಟ್ಟು 30 ಮಹಿಳಾ ಪ್ರತಿನಿಧಿಗಳಲ್ಲಿ ಶೇ 13% ರಷ್ಟು ಸದಸ್ಯರು ಹೌದು ಸ್ವಲ್ಪ ಮಟ್ಟಿಗೆ ಕುಟುಂಬದ ಜವಾಬ್ದಾರಿಗಳ ಸಮಸ್ಯೆಯಾದವು ಎಂಬುದಾಗಿ ಉತ್ತರಿಸಿದ್ದಾರೆ. ಕಾರಣ ಮಹಿಳಾ ಪ್ರತಿನಿಧಿಗಳು, ಒಬ್ಬ ಮಹಿಳೆಯಾಗಿ ಏಕಕಾಲಕ್ಕೆ ಕುಟುಂಬದಲ್ಲಿ ಒಬ್ಬ ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಅತ್ತೆಯಾಗಿ ಮಗಳಾಗಿ ಇಷ್ಟೆಲ್ಲಾ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಜೊತೆಗೆ ಎಲ್ಲರಿಗೂ ನ್ಯಾಯ ಒದಗಿಸುವ ಗುರುತರವಾದ ಜವಾಬ್ದಾರಿಯನ್ನು ಹೊತ್ತಿರುತ್ತಾಳೆ. ಈ ಕಾರ್ಯವನ್ನು ಸರಿದೂಗಿಸುವಾಗ ಮಹಿಳಾ ಸದಸ್ಯೆಗೆ ಸ್ವಲ್ಪ ಸ್ವಲ್ಪ ಮಟ್ಟಿಗೆ ಸಮಸ್ಯೆಯಾಗುತ್ತದೆ. ಹಾಗೆ

ಪಾಲಿಕೆಯ ಕಾರ್ಯ ನಿರ್ವಹಿಸುವಾಗ ಕುಟುಂಬದ ಜವಾಬ್ದಾರಿಗಳು ಯಾವುದೇ ತರಹದ ಸಮಸ್ಯೆಯಾಗುದಿಲ್ಲ ಎಂದು ಶೇ 86% ರಷ್ಟು ಪ್ರತಿನಿಧಿಗಳು ತಿಳಿಸಿರುತ್ತಾರೆ. ಕಾರಣ ಈ ಮಹಿಳೆಯರು ಕುಟುಂಬದ ಜವಾಬ್ದಾರಿಯನ್ನು ಮುಗಿಸಿದವರಾಗಿದ್ದು ಅವರು ಹೆಚ್ಚಾಗಿ ಪ್ರತಿನಿಧಿಯ ಜವಾಬ್ದಾರಿ ಹೊತ್ತ ಮಹಿಳೆಯಾಗಿರುವುದು ಇಲ್ಲ ತಿಳಿಯುತ್ತದೆ.

ಕುಟುಂಬದ ಬೆಂಬಲ

ಕೋಷ್ಠಕ 4.2.2(3)

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಬೆಂಬಲವಿದೆ	27	90%
ಬೆಂಬಲವಿಲ್ಲ	3	10%
ಒಟ್ಟು	30	100%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ(4.2.2(3)ದಲ್ಲಿ ತಿಳಿಸಿರುವಂತೆ ಪಾಲಿಕೆಯ ಕಾರ್ಯ ನಿರ್ವಹಿಸುವಾಗ ಕುಟುಂಬ ಸದಸ್ಯರ ಬೆಂಬಲ ಹೇಗೆ ಇದೆ ಎಂಬ ಪ್ರಶ್ನೆಗೆ ಉತ್ತರಿಸಿದ 50 ಪ್ರತಿನಿಧಿಗಳಲ್ಲಿ ಶೇ 90 ರಷ್ಟು ಸದಸ್ಯರು ಬೆಂಬಲ ಇದೆ ಎಂದಿದ್ದಾರೆ. ಶೇ 10 ರಷ್ಟು ಸದಸ್ಯರು ಸರಿಯಾದ ಬೆಂಬಲ ಇಲ್ಲ ಎಂದಿದ್ದಾರೆ ಒಟ್ಟರೆಯಾಗಿ ಗಮನಿಸಿದಾಗ ಬೆಂಬಲ ಇದೆ ಎಂದು ಹೇಳುವ ಸದಸ್ಯರಲ್ಲಿ ಕಾರಣ ಕೇಳಿದಾಗ ತಮ್ಮ ಮನೆಯಲ್ಲಿ ತಮ್ಮ ಸಾಧನೆಯನ್ನು ಗೌರವಿಸುತ್ತಾರೆ ಮತ್ತು ಅವರಿಗೆ ಕುಟುಂಬದಲ್ಲಿ ಒಳ್ಳೆಯ ಗೌರವ ಇದೆ ಎನ್ನುತ್ತಾರೆ. ಕುಟುಂಬದ ಬೆಂಬಲ ಇಲ್ಲ ಎಂದು ಹೇಳಿದ ಸದಸ್ಯರಲ್ಲಿ ಕಾರಣ ಕೇಳಿದಾಗ ಕುಟುಂಬದಲ್ಲಿ ಮಹಿಳೆ ಮನೆಯ ಎಲ್ಲರಿಗೂ ಅವಶ್ಯಕವು, ಅನಿವಾರ್ಯವು ಅದವಳು ಆದವಳು ಅವರಿಗೆ ಅಗತ್ಯ ಇರುವ ಸಮಯದಲ್ಲಿ ಈಕೆ ಅವರ ಅವಶ್ಯಕತೆಯನ್ನು ಪೂರೈಸದೆ ಇದ್ದಾಗ ಕುಟುಂಬದ ಸದಸ್ಯರಲ್ಲಿ ಅಸಹಕಾರ ಮನೋಭಾವನೆ ಉಂಟಾಗುತ್ತದೆ ಎಂದಿದ್ದಾರೆ.

ಪುರುಷರಿಗೆ ಸಮಾನವಾದ ಅಭಿವೃದ್ಧಿ ಕಾರ್ಯವನ್ನು ಅನುಷ್ಠಾನಗೊಳಿಸಲು ಸಾಧ್ಯವೇ

ಪಾಲಿಕೆಯ ಜನಪರವಾದ ಕಾರ್ಯಗಳನ್ನು ನಿರ್ವಹಿಸುವ ವಿಷಯದಲ್ಲಿ ಪುರುಷ ಪ್ರತಿನಿಧಿಗಳಿಗೆ ಸರಿಯಾಗಿ ಅಧಿಕಾರವನ್ನು ಮಹಿಳಾ ಪ್ರತಿನಿಧಿಗಳಿಗೂ ನೀಡಿರುತ್ತದೆ. ಆದರೆ

ಇಂದಿನ ಸಮಾಜದಲ್ಲಿ ಕೆಲವು ಸಂದರ್ಭದಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಮಹಿಳಾ ಪ್ರತಿನಿಧಿಗಳು ಕೆಲವೊಂದು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಈ ಸಂಬಂಧವಾಗಿ ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಈ ಕೆಳಗಿನ ವಿಶ್ಲೇಷಣೆಯಲ್ಲಿ ಕಾಣಬಹುದಾಗಿದೆ.

ಕೋಷ್ಠಕ 4.2.2(4)

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	23	76%
ಇಲ್ಲ	7	23%
ಒಟ್ಟು	30	99%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ(4.2.2(4)ದಲ್ಲಿ ತಿಳಿಸಿರುವಂತೆ ಒಟ್ಟು ಪ್ರತಿನಿಧಿಗಳಲ್ಲಿ ಶೇ 76% ರಷ್ಟು ಪ್ರತಿಕ್ರಿಯೆದಾರರು ತಾವು ಪುರುಷರಿಗೆ ಸಮಾನವಾಗಿಯೇ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತೇವೆ ಎಂದು ಶೇ 23% ರಷ್ಟು ಮಹಿಳಾ ಪ್ರತಿನಿಧಿಗಳು ತಾವು ಪುರುಷರಿಗೆ ಸಮಾನವಾಗಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತಿಲ್ಲ ಎಂದಿದ್ದಾರೆ.

ಮಹಿಳೆಯಾಗಿರುವ ಕಾರಣದಿಂದ ಅಧಿಕಾರಿಗಳು ತಪ್ಪು ಮಾಹಿತಿ ನೀಡುತ್ತಾರೆ

ಪಾಲಿಕೆಯ ಕಾರ್ಯ ಚಟುವಟಿಕೆಗಳು ನಿರಂತರವಾಗಿ ಭಾಗವಹಿಸಿ ತಮ್ಮ ವಾರ್ಡ್‌ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವುದು ಪ್ರತಿಯೊಬ್ಬ ಜನ ಪ್ರತಿನಿಧಿಯ ಕರ್ತವ್ಯವಾಗಿರುತ್ತದೆ, ಈ ಸಂದರ್ಭದಲ್ಲಿ ಕೆಲವು ವೇಳೆ ಹೊಸದಾಗಿ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು ತಮಗೆ ಅರಿವಿಲ್ಲದ ಮಾಹಿತಿಯನ್ನು ಪಾಲಿಕೆಯ ಇತರ ಪುರುಷ ಸದಸ್ಯರಲ್ಲಿ ಮುಕ್ತವಾಗಿ ಕೇಳಲು ಅಂಜಿಕೆಯನ್ನು ವ್ಯಕ್ತ ಪಡಿಸುತ್ತಾರೆ ಈ ವೇಳೆ ಹಲವಾರು ಪುರುಷ ಸದಸ್ಯರು ಮಹಿಳಾ ಪ್ರತಿನಿಧಿಗಳು ಅರೆ ಮಾಹಿತಿ ತಮ್ಮ ಮಾಹಿತಿ ನೀಡಿರುವ ಬಗ್ಗೆ ವಿವರನ್ನು ಈ ಕೆಳಗಿನ ವಿಶ್ಲೇಷಣೆಯಲ್ಲಿ ಕಾಣಬಹುದು.

ಕೋಷ್ಠಕ 4.2.2(5)

ಅಭಿಪ್ರಾಯ	ಸೂಚನದಾರರು	ಶೇಕಡವಾರು
ಹೌದು	10	33%

ಇಲ್ಲ	20	66%
ಒಟ್ಟು	30	100%

(ಮೂಲ- ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ (4.2.2(5)ದಲ್ಲಿ ತಿಳಿಸಿರುವಂತೆ ಶೇ 33% ರಷ್ಟು ಸದಸ್ಯರು ತಮಗೆ ಅಧಿಕಾರಿಗಳು ಅರೆ ಮಾಹಿತಿ ನೀಡಿದ್ದಾರೆ ಎಂದಿದ್ದಾರೆ ಶೇ 20 ರಷ್ಟು ಸದಸ್ಯರು ತಮಗೆ ಅಧಿಕಾರಿಗಳು ಅರೆ ಮಾಹಿತಿ ನೀಡಿಲ್ಲ ಎಂದಿರುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಪಾಲಿಕೆಯಲ್ಲಿ ಕೆಲವು ವೇಳೆ ಪುರುಷ ನಾಯಕರು ಪಕ್ಷ ಭೇದವನ್ನು ಗಮನದಲ್ಲಿಟ್ಟುಕೊಂಡು ಮಹಿಳೆ ಎಂಬ ಕಾರಣಕ್ಕಾಗಿ ಅವರನ್ನು ಕಡೆಗಣಿಸಿ ಅವರಿಗೆ ಸರಿಯಾದ ಮಾಹಿತಿ ನೀಡದೆ ಇರುವುದು ಕ್ಷೇತ್ರಾಧ್ಯಯನದಿಂದ ತಿಳಿದು ಬರುತ್ತದೆ.

ಪಾಲಿಕೆಯ ಕಾರ್ಯಕಲಾಪಗಳಲ್ಲಿ ಎದುರಾಗುವ ಜಾತಿ-ಲಿಂಗ ತೊಡಕುಗಳ ವಿವರ

ಜಾತಿ ಮತ್ತು ಲಿಂಗ ತಾರತಮ್ಯ ಎಂಬುದು ಭಾರತಕ್ಕೆ ಅಂಟಿಕೊಂಡ ಶಾಪವಾಗಿದೆ. ಯಾವುದೇ ಕ್ಷೇತ್ರಕ್ಕೆ ಹೋದರೂ ಅಲ್ಲಿ ಜಾತಿ-ಲಿಂಗ ತಾರತಮ್ಯವನ್ನು ಕಾಣಬಹುದಾಗಿದೆ. ಸರಕಾರ ಇವುಗಳನ್ನು ಕಡಿಮೆ ಮಾಡಬೇಕು ಎಂಬ ನಿಟ್ಟನಲ್ಲಿ ಬೇರೆಬೇರೆ ಯೋಜನೆಗಳನ್ನು ತಂದರೂ ಅದು ಹೇಳಿಕೊಳ್ಳುವ ಮಟ್ಟಿಗೆ ಫಲವನ್ನು ಕೊಡುತ್ತಿಲ್ಲ. ರಾಜಕೀಯ ಕ್ಷೇತ್ರಕ್ಕೆ ಬಂದರೆ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಜಾತಿ ಆಧಾರದ ಮೇಲೆ ಆಯ್ಕೆಯಾಗಿ ಬಂದಿರುವುದನ್ನು ಕಾಣಬಹುದು ಈ ಸಂಬಂಧವಾಗಿ ಸಂಶೋಧಕನು ಕೇಳಿದ ಪ್ರಶ್ನೆಗಳಿಗೆ ಬಂದ ಉತ್ತರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಲಿಂಗ ಅಡ್ಡಿ ಮಾಡುವ ಮಾಹಿತಿ

<u>ಕೋಷ್ಠಕ 4.2.2(6)</u>

ಅಭಿಪ್ರಾಯ	ಸೂಚನಾದಾರರು	ಶೇಕಡಾವಾರು
ಹೌದು	5	16.6
ಇಲ್ಲ	25	83
ಒಟ್ಟು	30	99.6%

ಜಾತಿ ಅಡ್ಡಿ ಮಾಡುವ ವಿವರ

ಅಭಿಪ್ರಾಯ	ಸೂಚನಾದಾರರು	ಶೇಕಡಾವಾರು
ಹೌದು	26	86.6

ಇಲ್ಲ	4	13.3
ಒಟ್ಟು	30	99.9%

(ಮೂಲ- ಸರ್ವೇ)

(ಮೇಲಿನ ಕೋಷ್ಟಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಕೋಷ್ಟಕ (4.2.2(6) ಸಂಖ್ಯೆ ರಲ್ಲಿ ತಿಳಿಸಿರುವಂತೆ ಮಂಗಳೂರು ಮಹಾನಗ ಪಾಲಿಕೆಯಲ್ಲಿ ಲಿಂಗ ಅಡ್ಡಿಮಾಡುವ ವಿವರವನ್ನು ಕೇಳಿದಾಗ ಒಟ್ಟು 30 ಪ್ರತಿನಿಧಿಗಳು ಶೇ 83% ರಷ್ಟು ಪ್ರತಿನಿಧಿಗಳ ಪಾಲಿಕೆಗೆ ಸಂಬಂಧಿಸಿದಂತೆ ಕಾರ್ಯಾಚರಿಸುವಾಗ ನಮಗೆ ಲಿಂಗ ಅಡ್ಡಿ ಮಾಡುವುದಿಲ್ಲ ಎಂಬ ಉತ್ತರವನ್ನು ನೀಡಿರುತ್ತಾರೆ. ಶೇ 16.6 ರಷ್ಟು ಪ್ರತಿನಿಧಿಗಳು ಲಿಂಗ ಅಡ್ಡಿ ಮಾಡುತ್ತದೆ ಎಂಬ ಉತ್ತರವನ್ನು ನೀಡಿರುತ್ತಾರೆ. ಜಾತಿಗೆ ಅಡ್ಡಿಮಾಡುವ ವಿವರವನ್ನು ಕೇಳಿದಾಗ ಶೇ 86.6% ರಷ್ಟು ಮಹಿಳಾ ಪ್ರತಿನಿಧಿಗಳು ಪಾಲಿಕೆಯಲ್ಲಿ ಜಾತಿ ಒಂದು ತೊಡಕಾಗಿದೆ ಎಂಬ ಉತ್ತರವನ್ನು ನೀಡಿದರೆ ಶೇ 13.3% ರಷ್ಟು ಮಹಿಳಾ ಪ್ರತಿನಿಧಿಗಳು ತಮಗೆ ಈ ಕ್ಷೇತ್ರಕ್ಕೆ ಬರಲು ಜಾತಿ ಅಡ್ಡಿಯಾಗಿಲ್ಲ ಎಂಬ ಉತ್ತರವನ್ನು ನೀಡಿರುತ್ತಾರೆ.

ಸಭೆಗಳಲ್ಲಿ ತೀರ್ಮಾನವಾದ ವಿಷಯ ಸರಿಕಾಣದಿದ್ದಲ್ಲಿ ವಿರೋಧಿಸುವಿರಾ?

ಕೋಷ್ಟಕ 4.2.2(7)

ಅಭಿಪ್ರಾಯ	ಸೂಚನಾದಾರರು	ಶೇಕಡ
ಹೌದು	25	83%
ಇಲ್ಲ	5	16%
ಒಟ್ಟು	30	99%

(ಮೂಲ- ಸರ್ವೇ)

(ಮೇಲಿನ ಕೋಷ್ಟಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ (4.2.2(7)ದಲ್ಲಿ ತಿಳಿಸಿರುವಂತೆ ಒಟ್ಟು ಪ್ರಕ್ರಿಯೆದಾರರಲ್ಲಿ ಸಭೆಗಳಲ್ಲಿ ತೀರ್ಮಾನವಾದ ವಿಷಯ ಸರಿಕಾಣದಿದ್ದಲ್ಲಿ ವಿರೋಧಿಸುವಿರಾ ಎಂಬ ಪ್ರಶ್ನೆಗೆ ಶೇ 83 ರಷ್ಟು ಮಹಿಳಾ ಪ್ರತಿನಿಧಿಗಳು ಖಂಡಿತವಾಗಿಯೂ ವಿರೋಧಿಸುತ್ತೇವೆ. ಎಂದು ಶೇ 16 ರಷ್ಟು ವಿರೋಧಿಸಿವುದಿಲ್ಲ ಎಂದು ತಿಳಿಸಿರುತ್ತಾರೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ನಮ್ಮ ಸಮಾಜ ಹಾಗೂ ನಗರ ಸ್ಥಳೀಯ ಸರಕಾರಗಳು ಪುರುಷ ಪ್ರಧಾನವಾದರೂ ಕೂಡಾ ಸರಿಕಾಣದ ಅಂದರೆ ಅದು ತಪ್ಪು ಎಂದು ಗೊತ್ತಾದಲ್ಲಿ ಅದನ್ನು ವಿರೋಧಿಸುವ ಮನೋಭಾವನೆ ಇಂದಿನ ಪಾಲಿಕೆಯ ಮಹಿಳಾ ಪ್ರತಿನಿಧಿಗಳಿಗೆ ಇದೆ ಎನ್ನುವುದು ಗಮನಾರ್ಹ ಇಂದು ಮಹಿಳೆಯರು ಸ್ವತಂತ್ರವಾಗಿ ಯೋಚಿಸ ಬಲ್ಲವರಾಗಿದ್ದು

ಸ್ವಾವಲಂಬಿಗಳು ಸಬಲರೂ ಆದ ಕಾರಣ ಇಂತಹ ವಿಷಯಗಳನ್ನು ವಿರೋಧಿಸುವ ಮನೋಭಾವ ಹೊಂದಲು ಸಾಧ್ಯವಿದೆ.

ಕೌಟುಂಬಿಕ ಸಮಾರಂಭಗಳಲ್ಲಿ ನಿಮ್ಮನ್ನು ಗುರುತಿಸುವ ದೃಷ್ಟಿಕೋನ

<u>ಕೋಷ್ಟಕ 4.2.2(8)</u>

ಅಭಿಪ್ರಾಯ	ಸೂಚನಾದಾರರು	ಶೇಕಡವಾರು
ವಿಶೇಷವಾಗಿ ಗುರುತಿಸುತ್ತಾರೆ	25	83%
ಸಾಮಾನ್ಯವಾಗಿ	5	16%
ಒಟ್ಟು	30	99%

(ಮೂಲ– ಸರ್ವೇ)

(ಮೇಲಿನ ಕೋಷ್ಟಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಈ ಮೇಲಿನ ಕೋಷ್ಟಕ(4.2.2(8)ದಲ್ಲಿ ತಿಳಿಸಿರುವಂತೆ ಒಟ್ಟು ಪ್ರತಿನಿಧಿಗಳಲ್ಲಿ ಶೇಕಡ 83ರಷ್ಟು ಪ್ರತಿನಿಧಿಗಳು ತಮ್ಮನ್ನು ಕೌಟುಂಬಿಕ ಸಮಾರಂಭಗಳಲ್ಲಿ ವಿಶೇಷವಾಗಿ ಗುರುತಿಸುತ್ತಾರೆ ಎಂದು ತಿಳಿಸಿರುತ್ತಾರೆ ಶೇಕಡಾ 16ರಷ್ಟು ಮಹಿಳಾ ಪ್ರತಿನಿಧಿಗಳು ತಾವು ಮೊದಲಿನಂತೆ ಸಾಮಾನ್ಯ ಸ್ಥಾನ ಮಾನ ಹೊಂದಿದ್ದೇವೆ ಎಂದಿರುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಪ್ರತಿಯೊಬ್ಬ ಮಹಿಳೆಯು ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನಕ್ಕೆ ಬಂದಾಗ ಅವಳ ಕುಟುಂಬ ಸಮಾಜದಲ್ಲಿ ಅವಳನ್ನು ವಿಶೇಷವಾಗಿ ಕಾಣುವ ಮತ್ತು ಗುರುತಿಸುವ ಮನೋಭಾವನೆಯನ್ನು ಕಾಣಬಹುದಾಗಿದೆ.

ನೀವು ಯಾರಿಗೆ ಹೊಣೆಗಾರರಾಗಿದ್ದೀರಿ

ಪಾಲಿಕೆಯ ಸದಸ್ಯರಾಗಿ ಆಯ್ಕೆಯಾದ ನಂತರ ಪ್ರತಿಯೊಬ್ಬ ಪ್ರತಿನಿಧಿಯ ತನ್ನ ಜವಾಬ್ದಾರಿಯ ಮತ್ತು ಕರ್ತವ್ಯಗಳನ್ನು ಅರಿತು ತನ್ನನ್ನು ಆಯ್ಕೆ ಮಾಡಿದ ಜನಸಾಮಾನ್ಯರಿಗೆ ಹೊಣೆಗಾರರಿಗೆ ಇರುವುದು ಸಮಂಜಸವಾಗಿದೆ ಈ ಸಂಬಂಧ ಸಂಶೋಧಕನು ಕೇಳಿದ ಪ್ರಶ್ನೆಗಳಿಗೆ ಬಂದ ಪ್ರತಿಕ್ರಿಯೆಯನ್ನು ಈ ಕೆಳಗಿನ ವಿಶ್ಲೇಷಣೆಯಲ್ಲಿ ಕಾಣಬಹುದು.

<u>ಕೋಷ್ಟಕ 4.2.2(9)</u>

ಅಭಿಪ್ರಾಯ	ಸೂಚನದಾರು	ಶೇಕಡಾವಾರು
ಮತದರರಿಗೆ	15	50%

ಆಶ್ರಯದಾತರಿಗೆ	10	33%
ಪಾಲಿಕೆಗೆ	5	16%
ಚುನಾಯಿತ ಪ್ರತಿನಿಧಿಗಳಿಗೆ	–	–
ಒಟ್ಟು	30	99%

(ಮೂಲ– ಸರ್ವೇ)

(ಮೇಲಿನ ಕೋಷ್ಠಕದಲ್ಲಿ ಶೆ.100%ಕ್ಕಿಂತ ಅಧಿಕವಾಗಿರುವುದು ಬಹು ಅಭಿಪ್ರಾಯಗಳು ಕಾರಣ)

ಮೇಲಿನ ಕೋಷ್ಟಕ(4.2.2(9)ದಲ್ಲಿ ತಿಳಿಸಿರುವಂತೆ ಶೇ 50% ರಷ್ಟು ಸದಸ್ಯರು ತಾವು ಮತದಾರರಿಗೆ ಜವಾಬ್ದಾರರಾಗಿದ್ದೇವೆ. ಎಂದು ಶೇ 33% ರಷ್ಟು ಸದಸ್ಯರು ಆಶ್ರಯದಾತರಿಗೆ ಜವಾಬ್ದಾರರಾಗಿದ್ದೇವೆ. ಶೇ 16% ರಷ್ಟು ಸದಸ್ಯರು ಪಾಲಿಕೆಗೆ ಹೊಣೆಗಾರರಾಗಿದ್ದೇವೆ. ಒಟ್ಟಾರೆಯಾಗಿ ಗಮನಿಸಿಧಾಗ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ತಮಗೆ ವಹಿಸಿರುವ ಜವಾಬ್ದಾರಿಯ ಬಗ್ಗೆ ಪ್ರಜ್ಞೆಯನ್ನು ಹೊಂದಿದವರಾಗಿದ್ದು ಮತದಾರರಿಗೆ ಹೊಣೆಗಾರರಾಗಿದ್ದೇವೆ. ಎಂದು ಉತ್ತರಿಸುತ್ತಿದ್ದಾರೆ.

೪.೩ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯದ ಸವಾಲುಗಳು

ಮಹಿಳೆಯರು ಎದುರಿಸುತ್ತಿರುವ ರಾಜಕೀಯ ಸಮಸ್ಯೆಗಳು

ಪ್ರಸ್ತುತದಲ್ಲಿ ರಾಜಕೀಯ ಕ್ಷೇತ್ರದಿಂದ ಪ್ರಾರಂಭವಾಗಿರುವ ಮಹಿಳಾ ಮೀಸಲಾತಿ ಶಿಕ್ಷಣ ಕ್ಷೇತ್ರದವರೆಗೂ ಹಬ್ಬಿ ನಿಂತಿದೆ. ರಾಜಕೀಯ ಕ್ಷೇತ್ರದಲ್ಲಿ ನೀಡಬಹುದಾದ ಮೀಸಲಾತಿ ಮಹಿಳಾ ಸಂಕುಲದಲ್ಲಿ ರಾಜಕೀಯ ಅರಿವು ಮೂಡಿಸುವಲ್ಲಿ ಕಾರಣವಾಗುತ್ತದೆ. ಇತ್ತೀಚೆಗೆ ಪಂಚಾಯತಿ ಆಡಳಿತ ವ್ಯವಸ್ಥೆಯಿಂದ ಹಿಡಿದು ಪಾರ್ಲಿಮೆಂಟಿನ ಆಡಳಿತ ವ್ಯವಸ್ಥೆವರೆಗೂ ರಾಜಕೀಯವಾಗಿ ಮಹಿಳಾ ಮೀಸಲಾತಿಯನ್ನು ಅನುಸರಿಸಲಾಗುತ್ತಿದೆ. ಕೇವಲ ಮೀಸಲಾತಿಯನ್ನು ಕೊಟ್ಟಾಕ್ಷಣ ಮಹಿಳೆ ಸಮಾನ ಅವಕಾಶಗಳನ್ನು ಪಡೆದುಕೊಳ್ಳುತ್ತಾಳೆ ಎನ್ನುವ ಅಂಶ ನಗೆ ಪಾಟಲಾದೀತು. ಪ್ರತಿಯಾಗಿ ತನಗಾಗಿ ಇರುವ ಮೀಸಲಾತಿಯನ್ನು ಮಹಿಳೆ ತನ್ನೊಳಗಿನ ಅಂತಃಶಕ್ತಿಯ ಅರಿವಿನ ಮೂಲಕ ಹೇಗೆ ತನ್ನ ಏಳಿಗೆಗಾಗಿ ಬಳಸಿಕೊಳ್ಳುತ್ತಾಳೆ ಎಂಬುದೇ ಮುಖ್ಯವಾಗಿದೆ.

ಜಗತ್ತು 21ನೇ ಶತಮಾನಕ್ಕೆ ಕಾಲಿಟ್ಟಿರುವ ಮಹಿಳೆಯರಿಗೆ ಇನ್ನೂ ರಾಜಕೀಯದಲ್ಲಿ ಸಮಾನ ಸ್ಥಾನ ಮಾನ ದೊರೆತಿಲ್ಲ. ಅದರಲ್ಲೂ ವಿಶೇಷವಾಗಿ ಭಾರತದಲ್ಲಿ ಮಹಿಳೆಯರಿಗೆ ರಾಜಕೀಯ ಸಮಾನತೆ ಲೋಕಸಭೆ ಹಾಗೂ ವಿಧಾನ ಸಭೆಗಳಲ್ಲಿ ಶೇ. 33 ರಷ್ಟು ಮೀಸಲಾತಿ ಇನ್ನೂ ಕನಸಾಗಿಯೇ ಉಳಿದಿವೆ. ಒಂದು ವೇಳೆ ಮಹಿಳಾ ಮೀಸಲಾತಿ ಅಂಗೀಕಾರವಾದರೆ ದೇಶದಲ್ಲಿ ಹೊಸದೊಂದು ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯೇ ಉದಯವಾಗುವುದರಲ್ಲಿ ಸಂದೇಹವಿಲ್ಲ.

ರಾಜಕೀಯ ಕ್ಷೇತ್ರ ಮತ್ತು ಮಹಾನಗರ ಪಾಲಿಕೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ಪುರುಷರೇ ಮೇಲುಗೈ: ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಹಿಂದುಳಿಯಲು ಕಾರಣವೆಂದರೆ ಈಗಿರುವ ಪ್ರತಿಕೂಲ ಹಾಗೂ ಬೆಂಬಲವಿಲ್ಲದ ವಾತಾವರಣದಲ್ಲಿ ಮಹಿಳೆಯರು ಬದುಕುತ್ತಿದ್ದಾರೆ. ತಮ್ಮನ್ನು ಬೇರೆಯಾಗಿ ಪರಿಗಣಿಸಲಾಗುತ್ತದೆ ಎಂಬ ಭಾವನೆಯಿಂದ ಸಂಪೂರ್ಣ ನಿರುತ್ಸಾಹಗೊಂಡಿದ್ದಾರೆ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 16% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ಸಾಂಪ್ರದಾಯಿಕ ದೃಷ್ಟಿಕೋನ ಮತ್ತು ನಿಲುವುಗಳು: ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಭಾಗವಹಿಸದಿರುವುದಕ್ಕೆ ಇನ್ನೊಂದು ಮುಖ್ಯ ಅಂಶವೆಂದರೆ ಸಮಾಜದ ಸಾಂಪ್ರದಾಯಿಕ ದೃಷ್ಟಿಕೋನ ಮತ್ತು ನಿಲುವುಗಳು. ಮಹಿಳೆಯರು ತಮ್ಮ ಕೆಲಸ ಕಾರ್ಯಗಳನ್ನು ತಮ್ಮ ಮನೆಗಳಿಗೆ ಮಾತ್ರ ಸೀಮಿತಗೊಳಿಸಬೇಕೆಂಬುದು ಇಂದಿಗೂ ಮುಂದುವರಿದ ಮನೆಯಲ್ಲಿ ಗಂಡು ಮಕ್ಕಳಿಗೆ ಕೊಡುವ ಸ್ವಾತಂತ್ರ್ಯ ಹೆಣ್ಣು ಮಕ್ಕಳಿಗೆ ಕೊಡುವುದಿಲ್ಲ. ಹೀಗಾಗಿ ಮಹಿಳೆಯರಿಗೆ ಬಾಹ್ಯ ಜಗತ್ತಿನ ಸಂಪರ್ಕ ಅಷ್ಟಕಷ್ಟೆ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 20% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ಮಹಿಳೆಯರ ಘನತೆ-ಗೌರವಕ್ಕೆ ಧಕ್ಕೆ: ಮಹಿಳೆಯರು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದರೆ ಕುಟುಂಬ ವ್ಯವಸ್ಥೆ ಅಸ್ಥಿರಗೊಳ್ಳುವುದು, ರಾಜಕಾರಣದಲ್ಲಿ ಯಶಸ್ವಿಯಾಗಲು ಅನುಸರಿಸಬೇಕಾದ ಮಾರ್ಗಗಳು ಮಹಿಳೆಯರ ಘನತೆ- ಗೌರವಕ್ಕೆ ಧಕ್ಕೆಯನ್ನುಂಟು ಮಾಡುತ್ತವೆ ಎನ್ನುವ ಕಾರಣಕ್ಕಾಗಿ ಮಹಿಳೆಯರು ರಾಜಕೀಯ ಪ್ರವೇಶವನ್ನು ನಿರಾಕರಿಸಲಾಗುತ್ತಿದೆ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 10% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ರಾಜಕೀಯ ಪ್ರಜ್ಞೆ ಮತ್ತು ಶಿಕ್ಷಣದ ಕೊರತೆ : ಮಹಿಳೆಯರಲ್ಲಿ ರಾಜಕೀಯ ಶಿಕ್ಷಣದ ಕೊರತೆಯ ಕಾರಣದಿಂದ ರಾಜಕೀಯ ಕ್ಷೇತ್ರದಲ್ಲಿ ಹಿಂದುಳಿಯಲು ಕಾರಣವಾಗಿದೆ. ಬಹುತೇಕ ಮಹಿಳೆಯರು ಅನಕ್ಷರತೆಯಿಂದ ಕೂಡಿರುವುದು, ಇದರಲ್ಲಿ ದಲಿತ ಮತ್ತು ಹಿಂದುಳಿದ ಮಹಿಳೆಯರನ್ನು ದೂರ ತಳ್ಳಲ್ಪಟ್ಟಿರುವುದು, ಬಹುತೇಕ ಪುರುಷರು ಈ ಅವಕಾಶವನ್ನು ಪಡೆದು ಮಹಿಳೆಯರನ್ನು ಮೂಲೆಗುಂಪು ಮಾಡುತ್ತಾರೆ. ಈ ಸಂಬಂಧವಾಗಿ ಸಂಶೋಧಕರು

ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 15% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ರಾಜಕೀಯ ನಾಯಕತ್ವದ ಕೊರತೆ: ಮಹಿಳೆಯರಲ್ಲಿ ರಾಜಕೀಯ ಮುಖಂಡತ್ವ/ನಾಯಕತ್ವದ ಲಕ್ಷಣಗಳ ಕೊರತೆ ಕಾರಣ ರಾಜಕೀಯದಲ್ಲಿ ಪ್ರವೇಶ ಮಾಡಲು ಹಿಂಜರಿಕೆ ಉಂಟಾಗುತ್ತಿದೆ. ಜೊತೆಗೆ ಮಹಿಳಾ ಸಂಘಟನೆಯಲ್ಲಿನ ಸಾಮರ್ಥ್ಯದ ಕೊರತೆಯೂ ಕಾರಣವೆನಿಸಿದೆ. ರಾಜಕೀಯಕ್ಕೆ ಮಾನಸಿಕವಾಗಿ ಸಿದ್ಧವಾಗಿದ್ದರೂ ಸಂಘಟನ ಚತುರತೆ ಕಡಿಮೆ ಇದೆ. ಪುರುಷ ಪ್ರಧಾನ ಸಮಾಜದಲ್ಲಿ ಏನೂ ಮಾಡಲಾಗದಂತಹ ಆಂತರಿಕ ಮನೋಭಾವ ಅವರನ್ನು ಕಾಡುತ್ತಿದೆ. ಒಂದು ವೇಳೆ ರಾಜಕೀಯ ನಾಯಕತ್ವ ಪಡೆದರೆ ಸಮಾಜದ ಅವಹೇಳನಕ್ಕೆ ಗುರಿಯಾಗುತ್ತಾರೆ. ಕಾರಣ ಆಕೆಯ ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತದೆಂಬ ಭಯವಿದೆ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 20% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ಹಣ ಬಲ ಮತ್ತು ತೋಳ್ಬಲದ ಕೊರತೆ: ಮಹಿಳೆಯರಿಗೆ ಚುನಾವಣೆ ಸಮಯದಲ್ಲಿ ಹಣಬಲ ಮತ್ತು ತೋಳ್ಬಲದ ಕೊರತೆಯ ರಾಜಕೀಯದಿಂದ ದೂರ ಉಳಿಯಲು ಕಾರಣವಾಗಿದೆ. ರಾಜಕೀಯದೊಂದಿಗೆ ಮನೆಯ ಜವಾಬ್ದಾರಿಯನ್ನು ಹೊರಬೇಕಾಗಿರುವುದು, ಕೌಟುಂಬಿಕ ಹೊಣೆಗಾರಿಕೆಯನ್ನು ಹೊರುತ್ತಿರುವುದು ಸಹ ಕಾರಣವಾಗಿದೆ. ಪುರುಷ ಸಮಾಜವು ಮಹಿಳೆಯರನ್ನು ರಾಜಕೀಯದಲ್ಲಿ ತೊಡಗಿಸಿ ಹಣಖರ್ಚು ಮಾಡಲು ಸಿದ್ಧರಿಲ್ಲ. ಆಕೆಯನ್ನು ರಾಜಕೀಯಕ್ಕೆ ಕಳಿಸಿದರೆ ಕೌಟುಂಬಿಕ ನಿರ್ವಹಣೆ ಅಡಚಣೆ ಮತ್ತು ಅವರು ದೈಹಿಕವಾಗಿ ಸಮರ್ಥರಲ್ಲದಿರುವುದು ಕಾರಣವಾಗಿದೆ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 50% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ರಾಜಕೀಯದಲ್ಲಿ ಅನುಭವದ ಕೊರತೆ: ರಾಜಕೀಯದಲ್ಲಿ ಅನಾಸಕ್ತಿ ಮಹಿಳೆಯರನ್ನು ರಾಜಕೀಯದಲ್ಲಿ ಹಿಂದುಳಿದಿರಲು ಕಾರಣವಾಗಿದೆ. ರಾಜಕೀಯ ಅನುಭವ, ಅರಿವು ಇಲ್ಲದಿರುವುದು ಹಾಗೂ ಮಹಿಳೆ ಕುಟುಂಬ ರಾಜಕೀಯ ಹಿನ್ನೆಲೆಯ ಕೊರತೆಯಿಂದಾಗಿ ರಾಜಕೀಯಕ್ಕೆ ಪ್ರವೇಶಿಸಲು ಹಿಂದೇಟು ಹಾಕುತ್ತಿರುವುದು ಸಹ ಕಾರಣವಾಗಿದೆ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 30% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ಭಯ, ಹಿಂಜರಿಕೆಯ ಮತ್ತು ಸಂಕೋಚದ ಸ್ವಭಾವಗಳು: ಮಹಿಳೆಯರಲ್ಲಿ ಕೀಳರಿಮೆ ಭಾವನೆ, ಹಿಂಜರಿಕೆ ಸ್ವಭಾವಗಳು, ರಾಜಕೀಯ ಕ್ಷೇತ್ರದಲ್ಲಿ ಪ್ರವೇಶಿಸಲು ಸಮಸ್ಯೆಯಾಗಿದೆ. ಇಂತಹ ಅವಕಾಶವನ್ನು ಪುರುಷರು ಬಳಸಿಕೊಳ್ಳುವುದರಿಂದ ಮಹಿಳೆಯರು ರಾಜಕೀಯದಲ್ಲಿ ಮುಂದೆ ಬರಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಚುನಾವಣೆಯಲ್ಲಿ ಸೋಲಿನ ಭೀತಿ ಚುನಾವಣಾ ಪ್ರಚಾರದಲ್ಲಿ ಆಕೆಯಿಂದ ವ್ಯಕ್ತವಾಗುವ ಮುಗ್ಧತೆ, ರಾಜಕೀಯ ತಂತ್ರಗಾರಿಕೆಯ ಕೊರತೆ ಸಹಜವಾಗಿ ಮಹಿಳೆಯನ್ನು ರಾಜಕೀಯದಿಂದ ದೂರ ಇರಿಸಿದ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 30% ಮಹಿಳಾ ಪ್ರತಿನಿಧಿಗಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ಪಕ್ಷಪಾತ ನೀತಿ: ರಾಜಕೀಯ ಪಕ್ಷಗಳು ಮಹಿಳೆಯರಲ್ಲಿ ಪಕ್ಷಪಾತ ನೀತಿಯನ್ನು ಅನುಸರಿಸುತ್ತಿರುವುದರಿಂದ ರಾಜಕೀವನ್ನು ಪ್ರವೇಶಿಸಲು ಸಮಸ್ಯೆಯಾಗಿ ಪರಣಮಿಸಿದೆ. ಹಾಗೂ ಮಹಿಳೆಯರ ಸಮಸ್ಯೆಗಳ ನಿವಾರಣೆಗೆ ಯಾವುದೇ ರಾಜಕೀಯ ಅಜೆಂಡಾ ಇಲ್ಲದಿರುವುದು. ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿಗೆ ರಾಜಕೀಯ ಸ್ಥಾನಮಾನ, ಅಧಿಕಾರ ಇಲ್ಲದಿರುವುದು ಹಾಗೂ ಪಕ್ಷದಲ್ಲಿ ಮಹಿಳೆಯರ ಬಗ್ಗೆ ಸಕಾರಾತ್ಮಕ ಧೋರಣೆ ಇಲ್ಲದಿರುವುದು ಕಾರಣವಾಗಿದೆ. ಈ ಸಂಬಂದಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗ ಳಲ್ಲಿ ಕೇಳಿದ ಪ್ರಶ್ನೆಗೆ ಶೇ. 40% ಮಹಿಳಾ ಪ್ರತಿನಿಧಿಗ ಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ರಾಜಕೀಯ ಮೀಸಲಾತಿಯ ಅನ್ಯಾಯ: ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ನೀಡದೆ ಅನ್ಯಾಯ ಮಾಡುತ್ತಿರುವುದು, ಮಹಿಳಾ ಮೀಸಲಾತಿ ನೀತಿಯನ್ನು ಅಂಗೀಕರಿಸದಿರುವುದು, ಮಹಿಳೆಯರಲ್ಲಿ ರಾಜಕೀಯ

ಇಚ್ಛಾಸಕ್ತಿಯ ಕೊರತೆ ಇರುವುದು ಅವರು ರಾಜಕೀಯದಲ್ಲಿ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ಈ ಸಂಬಂಧವಾಗಿ ಸಂಶೋಧಕರು ಮಂಗಳೂರು ಮಹಾನಗರ ಪಾಲಿಕೆಯ ಮಹಿಳಾ ಪ್ರತಿನಿಧಿಗಳಲ್ಲಿ ಕೇಳಿದ ಪ್ರಶ್ನೆಗೆ ಶೇ. 70% ಮಹಿಳಾ ಪ್ರತಿನಿಧಿಗ ಳು ಹೌದು ಎಂಬ ಉತ್ತರವನ್ನು ನೀಡಿರುತ್ತಾರೆ.

ಮಹಿಳಾ ಸಶಕ್ತೀಕರಣಕ್ಕೆ ಅಡ್ಡಿಯಾಗುತ್ತಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯಗಳನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ಇಂತಹ ಸಮಸ್ಯೆಯನ್ನು ಹೋಗಲಾಡಿಸಿ ಮಹಿಳೆಯರನ್ನು ಸಶಕ್ತರನ್ನಾಗಿ ಮಾಡಬೇಕಾದರೆ ಮೊದಲು ಸಮಾಜದಲ್ಲಿನ ಜನರ ಮನೋಭಾವದಲ್ಲಿ ಪರಿವರ್ತನೆಯಾಗಬೇಕು ಸಮಾಜದಲ್ಲಿ ಮಹಿಳೆಯರ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕು ಇದನ್ನು ಕೇವಲ ಕಾನೂನಿನ ಬಲದಿಂದ ಮಾತ್ರ ಬದ ಲಾಯಿಸಿದರೆ ಸಾಲದು. ಬದಲಿಗೆ ಕಠಿಣ ಶಿಕ್ಷೆ ಕಾಯಿದೆಯನ್ನು ರೂಪಿಸಬೇಕು. ಮಹಿಳೆಯರಲ್ಲಿ ಸಾಕ್ಷರತಾ ಪ್ರಮಾಣವನ್ನು

ಹೆಚ್ಚಿಸಬೇಕು. ಮಹಿಳಾ ಧೋರಣೆ ವಿರುದ್ಧ ಧ್ವನಿ ಎತ್ತುವ ಮನೋಭಾವ ಮಹಿಳೆಯರಲ್ಲಿಯೇ ಬರಬೇಕು. ಭಾರತದಂತಹ ಸಂಕೀರ್ಣ ಸಮಾಜದಲ್ಲಿ ಜನಸಂಖ್ಯೆ ಪ್ರಮಾಣದಲ್ಲಿ ಹಾಗೂ ಕೌಟುಂಬಿಕ ಬದುಕಿನಲ್ಲಿ ಪುರುಷನಿಗೆ ಸಮಾನಳಾಗಿರುವ ಮಹಿಳೆಯರನ್ನು ಖಾಸಗೀ ಮತ್ತು ಸಾರ್ವಜನಿಕ ಬದುಕಿನಲ್ಲಿ ಎರಡನೇ ಸ್ತರಕ್ಕೆ ನಿಗದಿ ಮಾಡುವುದರ ಬದಲಿಗೆ ಮೊದಲು ದರ್ಜೆಯಲ್ಲಿ ಕಾಣುವ ಪ್ರಯತ್ನ ಜನ ಮತ್ತು ಕಾನೂನುಗಳಿಂದ ಆಗಬೇಕಿದೆ. ಕುಟುಂಬದಲ್ಲಿ ಮಹಿಳೆಯರಿಗೆ ತೀರ್ಮಾನ ಕೈಗೊಳ್ಳುವ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು. ಮಹಿಳೆಯರ ಆರ್ಥಿಕ ಸಧೃಡತೆಗೆ ಸರ್ಕಾರ ಪರಿಣಾಮಕಾರಿ ನೀತಿ ಯೋಜನೆಗಳನ್ನು ರೂಪಿಸಬೇಕು. ಪಂಚಾಯತಿಗಳಲ್ಲಿ ಮಹಿಳೆಯರಿಗೆ ನೀಡುವ ಮೀಸಲಾತಿಯನ್ನು ರಾಜಕೀಯ ಕ್ಷೇತ್ರಕ್ಕೂ ವಿಸ್ತರಿಸಬೇಕು. ಇದಕ್ಕಾಗಿ ರಾಜಕೀಯ ಇಚ್ಚಾಶಕ್ತಿ ರೂಪುಗೊಳ್ಳಬೇಕಿದೆ. ಮಹಿಳೆಯರು ಎಲ್ಲಾ ಬೇಧಭಾವಗಳನ್ನು ತೊಡೆದುಹಾಕಿ ತಮ್ಮ ಮುಂದಿರುವ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಲು ಶೀಘ್ರ ಎಚ್ಚೆತ್ತುಕೊಳ್ಳಬೇಕು.

ಅಧ್ಯಾಯ –೫

ಸಲಹೆ, ಸೂಚನೆ ಮತ್ತು ಉಪಸಂಹಾರ

೫.೧ ಸಾರಾಂಶ

ನಗರ ಸ್ಥಳೀಯ ಸರ್ಕಾರದಲ್ಲಿ ಮಹಿಳಾ ಸದಸ್ಯರು ಸಾಮಾಜಿಕ, ಅರ್ಥಿಕ, ರಾಜಕೀಯ ಮತ್ತು ಆಡಳತಾತ್ಮಕ ಸಮಸ್ಯೆಗಳನ್ನು ಹೋಗಲಾಡಿಸಿ ಅವರು ಪಾಲಿಕೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಸಶಕ್ತರಾಗಬೇಕಾದರೆ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯದಲ್ಲಿ ದೊರೆತ ಪ್ರಾಥಮಿಕ ಮಾಹಿತಿ. ಬೇರೆ ಬೇರೆ ಪತ್ರಿಕೆ. ನಿಯತಕಾಲಿಕೆ, ಗ್ರಂಥಗಳಿಂದ ದೊರೆತ ವಿಷಯಗಳನ್ನು ಕ್ರೋಢೀಕರಿಸಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ಇರುವ ಸಮಸ್ಯೆ ಸವಾಲುಗಳನ್ನು ಅಧ್ಯಯನ ಮಾಡಿ ಕೆಲವು ನಿರ್ಧಾರಗಳಿಗ ಬಂದಿದ್ದು ಸಲಹೆಸೂಚನೆಯನ್ನು ನೀಡಲಾಗಿದೆ.

ಪ್ರಸ್ತುತ ಉಪಸಂಹಾರ ಅಧ್ಯಾಯವು ಸಂಶೋಧನಾ ಅಧ್ಯಯನ ನಡೆಸಿದ ವಿಷಯಕ್ಕೆ ಸಂಬಂಧಿಸಿದ ಅಧ್ಯಯನದಿಂದ ಕಂಡುಬಂದ ಫಲಿತಾಂಶಗಳು ಮತ್ತು ಮಹಿಳಾ ಸಶಕ್ತೀಕರಣಕ್ಕೆ ಸಲಹೆ ಮತ್ತು ಶಿಪಾರಸ್ಸುಗಳನ್ನು ಒಳಗೊಂಡಿದೆ ಈ ಸಂಶೋಧನಾ ಅಧ್ಯಯನವು ಪ್ರಮುಖವಾಗಿ ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಪ್ರತಿನಿಧಿಗಳ ಕುರಿತಾಗಿದೆ.' ಇದಕ್ಕೆ ಪೂರಕವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ವಿವರಗಳನ್ನು ಕ್ರೂಢೀಕರಿಸಿ ಒಟ್ಟು 5 ಅಧ್ಯಾಯಗಳನ್ನು ಈ ಸಂಶೋಧನಾ ಅಧ್ಯಯನದಲ್ಲಿ ಸಮಗ್ರವಾಗಿ ಚರ್ಚಿಸಲಾಗಿದೆ.

೫.೨ ಅಧ್ಯಯನದಿಂದ ಕಂಡುಬಂದ ಫಲಿತಾಂಶಗಳು

- ಅಧಿಕ ಸಂಖ್ಯೆಯ ಮಹಿಳಾ ಸದಸ್ಯರಿಗೆ ಪಾಲಿಕೆಯ ಅಧಿಕಾರ ಮತ್ತು ಕಾರ್ಯಗಳ ಬಗ್ಗೆ ಸ್ಪಷ್ಟವಾದ ಅರಿವಿಲ್ಲದಿರುವುದು

- ಮಹಿಳಾ ಸದಸ್ಯರಿಗೆ ಕುಟುಂಬದ ಬೆಂಬಲ ಹಾಗೂ ಪ್ರೋತ್ಸಾಹ ಸ್ವತಂತ್ರ ಇಲ್ಲದಿರುವುದು.
- ಮಂಗಳೂರು ಮಹಾನಗರ ಪಾಲಿಕೆಯ ವಾರ್ಡುಗಳ ಅಭಿವೃದ್ಧಿಯನ್ನು ಗಮನಿಸಿದಾಗ ಪುರುಷ ಸದಸ್ಯರಿಗಿಂತ ಹೆಚ್ಚಾಗಿ ಮಹಿಳಾ ಸದಸ್ಯರು ಉತ್ತಮ ರೀತಿಯಲ್ಲಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸಿರುವುದು ತಿಳಿದು ಬರುತ್ತದೆ.
- ಪಾಲಿಕೆಯಲ್ಲಿ ಮಹಿಳಾ ಸದಸ್ಯರು ಚಲಾಯಿಸಬೇಕಾದ ಅಧಿಕಾರ ಮತ್ತು ಕಾರ್ಯಗಳು, ತೀರ್ಮಾನಗಳನ್ನು ಅವರ ಪರವಾಗಿ ಪತಿ, ಪಕ್ಷದ ಮುಖಂಡರು ಕಾರ್ಯನಿರ್ವಹಿಸುತ್ತಿರುವುದು.
- ಪಾಲಿಕೆಯ ಚುನಾವಣೆಗೆ ಸ್ಪರ್ಧಿಸಲು ಆಸಕ್ತಿ ಇಲ್ಲದಿದ್ದರೂ ಮಹಿಳೆಯರನ್ನು ಬಲವಂತ ಮತ್ತು ಒತ್ತಾಯದಿಂದ ನಿಲ್ಲಿಸಿರುವುದು.
- ಪಾಲಿಕೆಗೆ ಸರ್ಕಾರದಿಂದ ಬರುವ ಅನುದಾನ, ಖರ್ಚು ವೆಚ್ಚದ ಬಗ್ಗೆ ಮಹಿಳಾ ಸದಸ್ಯರುಗಳಿಗೆ ಗೊತ್ತಿಲ್ಲದಿರುವುದು.
- ಪಾಲಿಕೆಯಲ್ಲಿ ಮಹಿಳಾ ಸದಸ್ಯರಿಗೆ ರಾಜಕೀಯ ಪಕ್ಷಪಾತತೆ, ಜಾತೀಯತೆ, ಹಸ್ತಕ್ಷೇಪ ಮಾಡಿರುವುದು.
- ಮಹಿಳಾ ಸದಸ್ಯರುಗಳಲ್ಲಿ ಭಯ, ಹಿಂಜರಿಕೆ, ಸಂಕೋಚ ಮತ್ತು ಮುಜುಗರದ ಸ್ವಭಾವ ಹೆಚ್ಚಾಗಿ ಇರುವುದು.
- ಪಾಲಿಕೆಯ ಮಹಿಳಾ ಸದಸ್ಯರ 33% ಮೀಸಲಾತಿಯಿಂದ 50% ಹೆಚ್ಚಿಸಬೇಕೆಂಬ ನಿಲುವು ವ್ಯಕ್ತವಾಗಿರುವುದು.
- ಮಹಾನಗರ ಪಾಲಿಕೆಯಲ್ಲಿ ಮೀಸಲಾತಿ ನೀಡಿದಂತೆ ಲೋಕಸಭೆ, ವಿಧಾನಸಭೆ ಕ್ಷೇತ್ರಗಳಲ್ಲಿಯೂ ಮೀಸಲಾತಿ ನೀಡಬೇಕೆಂಬ ಅಭಿಪ್ರಾಯ ವ್ಯಕ್ತವಾಗಿರುವುದು.
- ಈಗ ಅಸ್ತಿತ್ವದಲ್ಲಿರುವ ಮೇಯರ್ ಮತ್ತು ಉಪಮೇಯರ್ ಅಧಿಕಾರವಧಿಯನ್ನು 5 ವರ್ಷಕ್ಕೆ ಹೆಚ್ಚಿಸಬೇಕೆಂದು ನಿಲುವು ವ್ಯಕ್ತವಾಗಿರುವುದು.
- ಮಹಾನಗರ ಪಾಲಿಕೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ವಿದ್ಯಾವಂತರಿಗೆ ಹೆಚ್ಚಿನ ಅವಕಾಶ ನೀಡಬೇಕು ಎಂಬ ನಿಲುವು.

ಮಹಿಳಾ ಸದಸ್ಯರು ಇಷ್ಟೆಲ್ಲಾ ಅಂಶಗಳಿಂದ ಹೊರತಾಗಿದ್ದರೂ ಸುಶಿಕ್ಷಿತರಾದ ಮತ್ತು ಪುರುಷ ಸಹಕಾರ ಹಾಗೂ ಬೆಂಬಲ ದೊರೆತಿರುವ ಕಡೆಯಲ್ಲಿ ಪ್ರಾಮಾಣಿಕತೆ, ದಕ್ಷತೆ, ಶಿಸ್ತಿನಿಂದ ಕಾಳಜಿ ವಹಿಸಿ ವಾರ್ಡ್ ಮತ್ತು ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದು ಕೆಲವು ಸದಸ್ಯರುಗಳಿಂದ ಕಂಡು ಬಂದಿದೆ.

೫.೩ ನಗರ ಸ್ಥಳೀಯ ಸರಕಾರ ಮತ್ತು ಮಹಿಳಾ ಸಬಲೀಕರಣಕ್ಕೆ ಸಲಹೆಗಳು ಮತ್ತು ಶಿಫಾರಸ್ಸುಗಳು

ನಗರ ಸ್ಥಳೀಯ ಸರ್ಕಾರ ಸಂಸ್ಥೆಗಳಲ್ಲಿ ಮಹಿಳಾ ಸದಸ್ಯರು ಸಾಮಾಜಿಕ, ಅರ್ಥಿಕ, ರಾಜಕೀಯ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಹೋಗಲಾಡಿಸಿ ಅವರು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಶಕ್ತರಾಗಬೇಕಾದರೆ ಈ ಕೆಳಕಂಡ ಕ್ರಮಗಳನ್ನು ಸರಕಾರ ಕೈಗೊಳ್ಳಬೇಕಾಗಿದೆ ಅವುಗಳೆಂದರೆ

1. **ನಿರಂತರ ತರಬೇತಿಗಾಗಿ ಪ್ರತ್ಯೇಕ ಜಿಲ್ಲಾ ತರಬೇತಿ ಕೇಂದ್ರ ತೆರೆಯಬೇಕು**

ನಗರ ಸ್ಥಳೀಯ ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಇನ್ನಷ್ಟು ಸದೃಢ ಸುಧಾರಣೆ ತರಲು ಹಾಗೂ ಮಹಿಳಾ ಸದಸ್ಯರನ್ನು ಸಶಕ್ತರನ್ನಾಗಿಸಲು ಅಧಿಕಾರಿಗಳು, ಸಿಬ್ಬಂದಿ, ಮತ್ತು ತಾಂತ್ರಿಕ ವರ್ಗ ಸೇರಿದಂತೆ 3 ಹಂತಗಳ ಸದಸ್ಯರುಗಳಿಗೆ ನಿರಂತರ ಪರಿಣಾಮಕಾರಿಯಾದ ಉತ್ತಮ ತರಬೇತಿ ಮತ್ತು ಮಾರ್ಗದರ್ಶನ ನೀಡಬೇಕು.ತರಬೇತಿ ಹೆಚ್ಚು ಪ್ರಾಯೋಗಿಕ ತರಗತಿ ಮತ್ತು ಪ್ರಾತ್ಯಕ್ಷಿತೆ ರೂಪದಲ್ಲಿರಬೇಕು ಇಂತಹ ತರಬೇತಿಗಳಿಂದ ವ್ಯಕ್ತಿ ಪ್ರಾವೀಣ್ಯತೆ ಮತ್ತು ವಿಶೇಷ ಜ್ಞಾನ ನೀತಿ–ನಿರ್ಧಾರ ಕೈಗೊಳ್ಳುವಿಕೆ, ಸಮಸ್ಯೆ ಮತ್ತು ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಸ್ವಯಂ ಪ್ರೇರಿತವಾಗಿ ಭಾಗವಹಿಸಿ ಪರಿಹಾರ ಹುಡುಕುವ ಮನೋಭಾವನೆಯನ್ನು ವೃದ್ಧಿಸುವಂತಿರಬೇಕು.

2. **ಅನುದಾನದ ಬಳಕೆಗೆ ಸುಭದ್ರ ವ್ಯವಸ್ಥೆ ರೂಪಿಸಬೇಕು**

ಸರ್ಕಾರದಿಂದ ಪಾಲಿಕೆಗೆ ಲಕ್ಷಾಂತರ ಅನುದಾನ ಹಣವು ಹರಿದು ಬರುತ್ತದೆ. ಬಿಡುಗಡೆಯಾಗುವ ಹಣವು ಸಕಾಲಕ್ಕೆ ತಲುಪಬೇಕು ಹಾಗೂ ವ್ಯವಸ್ಥಿತವಾಗಿ ಬಳಸಿಕೊಳ್ಳಲು ಸಮರ್ಪಕ ಮತ್ತು ಸುಭದ್ರವಾದ ವ್ಯವಸ್ಥೆ ಇರಬೇಕು. ಸರಕಾರವು ಹಣವನ್ನು ಆದ್ಯತೆಯ ಮೇರೆಗೆ ಬಿಡುಗಡೆ ಮಾಡಬೇಕು ಅನುದಾನದ ಬಗ್ಗೆ ಸಾರ್ವಜನಿಕರು ಒಳಗೊಂಡಂತೆ ಪಾಲಿಕೆಯ ಎಲ್ಲಾ ಸದಸ್ಯರಿಗೆ ಅರಿವು ಮೂಡಿಸಬೇಕು.

3. **ಕನಿಷ್ಠ ವಿದ್ಯಾರ್ಹತೆ ಮತ್ತು ಕಡ್ಡಾಯ ಮತದಾನ ಅಗತ್ಯವಿದೆ.**

ಪಾಲಿಕೆಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಕನಿಷ್ಟ ವಿದ್ಯಾರ್ಹತೆ ಇರಬೇಕು. ಕಾರಣ ಅವಿದ್ಯಾವಂತರನ್ನು ಅಧಿಕಾರಿಗಳು ಮತ್ತು ಬಲಾಢ್ಯರು ದುರ್ಬಳಕೆ ಮಾಡುವ ಸಂಭವವಿರುತ್ತದೆ ಆದ್ದರಿಂದ ವಿದ್ಯಾವಂತರು ಅನುಭವಿಗಳು ಧೈರ್ಯವಂತರು ಪಾಲಿಕೆಗೆ ಆರಿಸಿ ಬರಬೇಕು ಜನಸಾಮಾನ್ಯರ ಬಗ್ಗೆ ಕಳಕಳಿ, ನಿಸ್ವಾರ್ಥಿ ನಿಷ್ಪಕ್ಷಪಾತತೆ ಮತ್ತು ಆದರ್ಶ ವ್ಯಕ್ತಿಯನ್ನು ಹುಡುಕಿ ಆ ಆಯ್ಕೆ ಮಡಬೇಕು ಅಲ್ಲದೇ ಪಾಲಿಕೆಗೆ ಚುನಾವಣೆಗಳಲ್ಲಿ ಮತದಾರರು ಕಡ್ಡಾಯವಾಗಿ ಮತ ಚಲಾಯಿಸಬೇಕು.

ಅಪರಾಧಿ ಕೃತ್ಯಗಳಲ್ಲಿ ಭಾಗಿಯಾದವರಿಗೆ ಪಾಲಿಕೆಯ ಚುನಾವಣೆಗಳು ಸ್ಪರ್ಧಿಸಲು ಅವಕಾಶ ನೀಡಬಾರದು.

4. ಪ್ರತ್ಯೇಕ ಮಹಿಳಾ ಸಮನ್ವಯ ಸಮಿತಿ ರಚನೆ ಅಗತ್ಯವಿದೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಮತ್ತು ಕಾರ್ಯಗಳನ್ನು ಚಲಾಯಿಸುತ್ತಿರುವ ಮಹಿಳಾ ಸದಸ್ಯರು ಮತ್ತು ಪುರುಷ ಸದಸ್ಯರುಗಳ ನಡುವೆ ಹಲವಾರು ವಿವಾದ,ಭಿನ್ನಾಭಿಪ್ರಾಯ, ವೈಮನಸ್ಸು, ಘರ್ಷಣೆಗಳು, ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಹಾಗೂ ರಾಜಕೀಯ ಪಕ್ಷಗಳ ಪಕ್ಷಪಾತತೆ ಜಾತೀಯತೆ ಆಡಳಿತದಲ್ಲಿ ಹಸ್ತಕ್ಷೇಪಗಳನ್ನು ನಿಯಂತ್ರಿಸಲು ಜಿಲ್ಲಾ ಮಟ್ಟದಲ್ಲಿ ಒಂದು ಪ್ರತ್ಯೇಕ ಮಹಿಳಾ ಸಮನ್ವಯ ಸಮಿತಿಯನ್ನು ರಚಿಸಬೇಕು.

5. ಅಭಿವೃದ್ಧಿ ಕ್ಷೇತ್ರಗಳ ಸಂಪರ್ಕ ಏರ್ಪಡಬೇಕು

ಈಗಾಗಲೇ ಅಭಿವೃದ್ಧಿ ಹೊಂದಿದಂತಹ ಮಹಾನಗರ ಪಾಲಿಕೆ ಹಾಕಿಕೊಂಡ ವಿನೂತನ ನೀತಿಗಳು, ಯೋಜನೆಗಳು, ಕಾರ್ಯಕ್ರಮಗಳು ಅಲ್ಲಿನ ಸದಸ್ಯರು ಸ್ವತಃ ಅನುಸರಿಸುತ್ತಿದ್ದ ಮಾರ್ಗಗಳು ಯಾವ ರೀತಿ ಹೇಗೆ ನಡೆಯುತ್ತಿವೆ ಎಂಬುದನ್ನು ಖುದ್ದು ಅವಲೋಕಿಸಲು ಅಂತಹ ನಗರ ಪಾಲಿಕೆಗಳಿಗೆ ಸದಸ್ಯರುಗಳನ್ನು ಹೋಲಿಕಾ ಅಧ್ಯಯನ ಮಾಡಲು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ನೆರೆ ಜಿಲ್ಲೆಗಳ ಮತ್ತು ರಾಜ್ಯಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

ಮಾನವ ಹಕ್ಕುಗಳ ರಕ್ಷಣಾ ಸಮಿತಿ ರಚಿಸಬೇಕು

ಸಂವಿಧಾನ 11ನೇ ಷೆಡ್ಯೂಲಿನಲ್ಲಿ ನಮೂದಿತವಾಗಿರುವ (29) ವಿಷಯಗಳಿಗೆ ಸಂಬಧಿಸಿದಂತೆ ಯೋಜನೆಗಳು ಮತ್ತು ಕಾರ್ಯಕ್ರಮಗಳ ಜಾರಿಯಲ್ಲಿ ಉಂಟಾಗಬಹುದಾದ ವಿವಾದಗಳನ್ನು ಸ್ಥಳೀಯವಾಗಿ ಇತ್ಯರ್ಥಪಡಿಸಲು ಯಾವುದೇ ಕಾನೂನಿನ ಚೌಕಟ್ಟನ್ನು 73ನೇ ಸಂವಿಧಾನ ತಿದ್ದುಪಡಿ ಒದಗಿಸಿಲ್ಲ. ಹಾಗೂ ಮಹಿಳೆಯರಿಗೆ ಪಂಚಾಯತಿಗಳಲ್ಲಿ ಶೇ. 33 ರಷ್ಟು ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿರುವುದರಿಂದ ವ್ಯವಸ್ಥಿತ ಸಾಮಾಜಿಕ ಶಕ್ತಿಗಳಲ್ಲಿ ವೈರತ್ವವುಂಟಾಗಿ ಸ್ಥಳೀಯ ವರ್ಗದವರಿಗೆ ಮಹಿಳೆಯರಿಗೆ ಪ್ರಾತಿನಿಧ್ಯವಿರುವ ತ್ವರಿತ ಹಾಗೂ ಅಗ್ಗದ ದುಬಾರಿಯಲ್ಲದ ನ್ಯಾಯವಿತರಣೆ ವ್ಯವಸ್ಥೆ ರಚನೆ ತುರ್ತಾಗಿ ಆಗಬೇಕಾಗಿದೆ. ಇದಕ್ಕಾಗಿ ಜಿಲ್ಲಾ ಅಥವಾ ತಾಲೂಕು ಪಂಚಾಯತಿಗಳಲ್ಲಿ ಮಾನವ ಹಕ್ಕುಗಳ ರಕ್ಷಣಾ ಸಮಿತಿ ತೆರೆಯಬೇಕು

6. ಸಿಬ್ಬಂದಿ ಕೊರತೆ ನೀಗಿಸಬೇಕು

ಸರ್ಕಾರ ನಗರ ಸ್ಥಳೀಯ ಸಕಾರದ ರಾಜ್ ಸಶಕ್ತೀಕರಣಕ್ಕೆ ಪಾಲಿಕೆಯಲ್ಲಿ ಇರುವ ಸಿಬ್ಬಂದಿ ಕೊರತೆಯನ್ನು ನೀಗಿಸಬೇಕು ಪಾಲಿಕೆಗೆ ಸಿಬ್ಬಂದಿಗಳನ್ನು ಭರ್ತಿ ಮಾಡುವಾಗ ಹುದ್ದೆಗಳಲ್ಲಿ ಮಹಿಳೆಯರಿಗೂ ಮೀಸಲಾತಿ ಕಲ್ಪಿಸಿ ಹೆಚ್ಚು ಆದ್ಯತೆ ನೀಡಬೇಕು.

7. ಮಾಹಿತಿ ಹಕ್ಕು ಪರಿಣಾಮಕಾರಿ ಅನುಷ್ಟಾನ ಅವಶ್ಯಕವಾಗಿದೆ.

ಮಹಾನಗರ ಪಾಲಿಕೆಗಳಲ್ಲಿ ಕೈಗೊಳ್ಳುವ ನಿರ್ಣಯಗಳನ್ನು 72 ಗಂಟೆಯೊಳಗೆ ಸಾರ್ವಜನಿಕರಿಗೆ ತಿಳಿಯುವಂತೆ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಬೇಕೆಂಬ ನಿಯಮ ಇದ್ದರೂ ಅನೇಕ ಪಾಲಿಕೆಗಳಲ್ಲಿ ಇದು ಜಾರಿಯಾಗುತ್ತಿಲ್ಲ ಪಾಲಿಕೆಗಳಲ್ಲಿ ಅದಕ್ಷತೆ ಅನಗತ್ಯ ವಿಳಂಬತೆ ಭ್ರಷ್ಟಚಾರ ಅನುಧಾನ ದುರ್ಬಳಕೆ ಅಧಿಕಾರ ದುರುಪಯೋಗ ಬೇಜವಾಬ್ದಾರಿತನ ತಡೆಯಲು ಮಾಹಿತಿ ಹಕ್ಕು ಜಾರಿಗೆ ತರುವುದು ತುಂಭಾ ಸೂಕ್ತವಾಗಿದೆ.

8. **ಅರಿವು ಆಂದೋಲನ ಸಭೆ ನಡೆಸಬೇಕು**

ಮಹಿಳೆಯರ ವಿರುದ್ಧ ದೌರ್ಜನ್ಯ ವರದಕ್ಷಿಣೆ ಕಿರುಕುಳ ಹಲ್ಲೆ ಅವಮಾನ ಜಾತೀಯತೆ ಲೈಂಗಿಕ ಕಿರುಕುಳ ಇತ್ಯಾದಿಗಳನ್ನು ತಡೆಯಲು ಸರ್ಕಾರ ಪ್ರತಿಯೊಂದು ಹೋಬಳಿ ಮಟ್ಟದಲ್ಲಿ 6 ತಿಂಗಳಿಗೊಮ್ಮೆ ಅರಿವು ಆಂದೋಲನ ಸಭೆಯನ್ನು ಖಡ್ಡಾಯವಾಗಿ ನಡೆಬೇಕು ಈ ಸಭೆಯು ತಾಲೂಕು ಮಟ್ಟದ ಎಲ್ಲಾ ಉನ್ನತಾಧಿಕಾರಿಗಳ ನೇತೃತ್ವದಲ್ಲಿ ಜರುಗಬೇಕು ಈ ಸಭೆಯಲ್ಲಿ ಎಲ್ಲಾ ಮಹಿಳೆಯರು ತಪ್ಪದೇ ಭಾಗವಹಿಸಿ ಸಮಸ್ಯೆಗಳನ್ನು ಬಗೆಹರಿಸಕೊಳ್ಳಬೇಕು.

9. **ಮಹಿಳಾ ದಿನಾಚರಣೆಗಳು ಅರ್ಥಪೂರ್ಣವಾಗಬೇಕು.**

ಪ್ರತೀ ವರ್ಷ ಜರುಗುವ ಮಹಿಳಾ ದಿನಾಚರಣೆಗಳು ಕೇವಲ ಕಾಟಾಚಾರಕ್ಕೆ ನಡೆಸದೇ ಅರ್ಥಪೂರ್ಣವಾಗಿರಬೇಕು ಈ ದಿನಾಚರಣೆಗಳು ಮಹಿಳಾ ಸಮುದಾಯದ ಬದುಕಿನಲ್ಲಿ ಹೊಸ ಹುರುಪು ಮತ್ತು ಚೈತ್ಯನ್ಯಗಳನ್ನು ತುಂಬುವಂತಿರಬೇಕು ಈ ಕುರಿತು ಮಹಿಳಾ ಸ್ವಾತಂತ್ರ್ಯ, ಸಮಾನತೆ, ಕುಟುಂಬ ಸಮುದಾಯದ ಅಗತ್ಯಗಳಿಗೆ ಅನುಗುಣವಾಗಿ ಮಹಿಳೆಯರ ಬಗ್ಗೆ ಸಮಾಜದ ಮನೋಭಾವನೆಹಳಲ್ಲಿ ಪರಿವರ್ತನೆ ತರುವ ಹೊಸ ಮಾರ್ಗವನ್ನು ಕಂಡುಕೊಳ್ಳುವ ಮೂಲಕ ದಿನಾಚರಣೆಗಳು ನಡೆದರೆ ಮಹಿಳಾ ದಾರಿ ಸುಗಮವಗುತ್ತದೆ. ಪ್ರತಿ ಪಾಲಿಕೆಗಳಲ್ಲಿ ಕಡ್ಡಾಯವಾಗಿ ಮಹಿಳಾ ದಿನವನ್ನು ಆಚರಿಸಬೇಕು.

10. **ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿಯನ್ನು 5 ವರ್ಷಕ್ಕೆ ಹೆಚ್ಚಿಸಬೇಕು.**

ದೇಶದ ಪ್ರಗತಿಗೆ ಭದ್ರ ಬುನಾದಿ ಹಾಕುವ ಸ್ಥಳೀಯ ಸಂಸ್ಥೆಗಳನ್ನು ಇನ್ನೂ ಸೂಕ್ತವಾಗಿ ಬಲಿಷ್ಟಗೊಳಿಸಲು ಸರ್ಕಾರವು ಪಾಲಿಕೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಅಧಿಕಾರ ಅವಧಿಯನ್ನು 5 ವರ್ಷಕ್ಕೆ ಹೆಚ್ಚಿಸಬೇಕು. ಯೋಜನಾ ಘಟಕಗಳ ಸ್ಥಾಪನೆಯ ಅಗತ್ಯವಿದೆ.

ಒಟ್ಟಾರೆ ಸ್ಥಳೀಯ ಸಂಸ್ಥೆಗಳಲ್ಲಿ ಸರಕಾರ ಮಹಿಳೆಯರಿಗೆ ಶೇಕಡಾ. 33ರಷ್ಟು ಮೀಸಲಾತಿಯ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರಿಂದ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಡಳಿತಾತ್ಮಕ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಸೇವೆಯನ್ನು ಸಲ್ಲಿಸುತ್ತಿರುವವರ ಜೊತೆಗೆ ಹಲವಾರು ವಿಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವೆಲ್ಲಾ ಸಮಸ್ಯೆಗಳನ್ನು ನಿವಾರಿಸಿ ಮಹಿಳೆಯರು ಸಬಲೀಕರಣವಾಗಬೇಕಾದರೆ ಅವರು ಇನ್ನು ಸ್ವಾಸಮರ್ಥ್ಯ,

ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಬೇಕು. ಅವರಿಗೆ ಕುಟುಂಬದಲ್ಲಿ ಬೆಂಬಲ ಮತ್ತು ಸ್ವಾತ್ರಂತ್ಯವನ್ನು ನೀಡಬೇಕು ಅವರು ಮೂಡನಂಬಿಕೆ, ಸಂಪ್ರದಾಯ ಸಂಕೋಲೆಗಳಿಂದ ಮುಕ್ತರಾಗಬೇಕು. ಹಿಂಜರಿಕೆ, ಕೀಳರಿಮೆ, ಮುಜುಗರ ಮತ್ತು ಸಂಕೋಚ ಸ್ವಭಾವವನ್ನು ಬಿಟ್ಟು ಧೈರ್ಯವಾಗಿ ತಮ್ಮ ಮುಂದಿರುವ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಬೇಕು.

೫.೮ ಉಪಸಂಹಾರ:

ಪ್ರಾಚೀನ ಕಾಲ ಸಂದರ್ಭದಲ್ಲಿ ಮಹಿಳೆಯರಿಗೆ ಯಾವುದೇ ಕ್ಷೇತ್ರದಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ ಆದ್ದರಿಂದ ಎಲ್ಲಾ ರಂಗದಲ್ಲಿ ಹೊರಗುಳಿದಿದ್ದರು ಆದರೆ ಸ್ವತಂತ್ರ ನಂತರದಲ್ಲಿ ಸಂಪ್ರದಾಯ ಪುರುಷ ಪ್ರಧಾನದಿಂದ ಹೊರಬಂದು ಮಹಿಳೆಯರು ರಾಜಕೀಯ ರಂಗದಲ್ಲಿ ಪ್ರವೇಶಕ್ಕೆ ತಮ್ಮನ್ನು ಗುರುತಿಸಿಕೊಳ್ಳಲು ಹಾಗೂ ಪ್ರಾತಿನಿಧ್ಯವನ್ನು ಪಡೆದುಕೊಳ್ಳಲು ಸಂವಿಧಾನ ಬದ್ಧವಾಗಿಯೇ ಅವಖಾಶವನ್ನು ಕಲ್ಪಿಸಿಕೊಡಲಾಗಿರುತ್ತದೆ.

ನಗರ ಸ್ಥಳೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅಥವಾ ಪ್ರಾತಿನಿಧ್ಯ ವನ್ನು ಪಡೆಯುವ ಮಹಿಳೆಯರ ಹಿನ್ನಲೆಯ ವೈವಿಧ್ಯಮಯವಾಗಿರುತ್ತದೆ. ಏಕೆಂದರೆ ಇಲ್ಲಿ ಶ್ರೀಮಂತರು, ಬಡವರು, ಮೇಲ್ವರ್ಗದವರು ಹಿಂದುಳಿದ ವರ್ಗದವರು ಸುಶಿಕ್ಷಿತರು ಅನಕ್ಷರಸ್ಥರು ಕೂಲಿಕೆಲಸ ಮಾಡುವ, ಮನೆಯಲ್ಲಿಯೇ ಇರುವ ಹೀಗೆ ವಿವಿಧ ಸ್ತರದಿಮದ ಬಂದಿರುವ ಅಂದರೆ ಸಾಮಾಜಿಕ ರಾಜಕೀಯ ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಯಿಂದ ಬಂದಿರುವವರೇ ಹೆಚ್ಚಾಗಿರುತ್ತಾರೆ. ಇಂದು ರಾಜಕೀಯದ ಎಲ್ಲಾ ಸ್ತರದಲ್ಲಿಯೂ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಪ್ರತಿಸ್ಪರ್ಧಿಯಾಗಿ ಬರುತ್ತಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಸಂಶೋಧನೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ (ಕಾರ್ಪೋರೇಟರ್) ಗಳ ಪಾತ್ರ ನಿರ್ವಹಣೆಯ ಕುರಿತು ಅಧ್ಯಯನ ನಡೆಸುವ ಮೂಲಕ ಅವರ ಮಿತಿ ಮತ್ತು ಸಾಧನೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಪ್ರಸ್ತಾವನೆಯ ಅಧ್ಯಾಯದಲ್ಲಿ ಪೀಠಿಕೆಯಿಂದ ಪ್ರಾರಂಭಿಸುವ ಮೂಲಕ ಚಾಲನೆಯನ್ನು ಕಂಡುಕೊಂಡಿರುತ್ತದೆ ಈ ಅಧ್ಯಯನವು ಪ್ರಧಾನವಾಗಿ ಪ್ರಾಮುಖ್ಯತೆ, ಉದ್ದೇಶಗಳು, ಇದಕ್ಕೆ ಬಳಸಿರುವ ವಿಧಿ-ವಿಧಾನ ಹಾಗೂ ತಂತ್ರಗಾರಿಕೆಗಳು ಮುಕುಟವಿದ್ದಂತೆ ಇರುತ್ತದೆ.

ಈ ಅಧ್ಯಯನದಿಂದ ಕಂಡುಬಂದ ಫಲಿತಾಂಶವು ಮಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಬೇರೆಬೇರೆ ಮಹಿಳಾ ಪ್ರತಿನಿಧಿಗಳ ಭಿನ್ನವಾದ ಮನೋಧರ್ಮವನ್ನು ಆದ್ಯತೆ ಸ್ವರೂಪವನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಪ್ರತಿನಿಧಿಗಳಿಗೆ ಸಂಬಂಧಿಸದಂತೆ ತಿಳಿಸುವುದಾರೆ ಪಾಲಿಕೆಯಲ್ಲಿರುವ ಹೆಚ್ಚಿನ ಮಹಿಳಾ ಪ್ರತಿನಿಧಿಗಳು ಶಿಕ್ಷಿತರಾಗಿದ್ದು ಪಾಲಿಕೆಯ ಕಾರ್ಯಕಲಾಪಗಳು ತಮಗೆ ವಹಿಸಿರುವ ಜವಾಬ್ದಾರಿಗಳನ್ನು ಒಳ್ಳೆಯ ರೀತಿಯಲ್ಲಿ ಪುರುಷರಿಗೆ ಸಮಾನವಾಗಿ ಅಲ್ಲದೆ ಅವರಿಗಿರುವ ಒಂದು ಕೈ ಮೇಲೆಂಬುವಂತೆ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಪುರುಷ ಪ್ರಧಾನವಾದ ವಾರ್ಡುಗಳ ಜೊತೆಗೆ ಹೋಲಿಕೆ ಮಾಡುವುದಾದರೆ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ಮಹಿಳಾ ಪ್ರತಿನಿಧಿಗಳಿರುವ ವಾರ್ಡುಗಳಲ್ಲಿ ಹೆಚ್ಚು ಮಹತ್ವವನ್ನಯ ಪಡೆದಿರುವುದನ್ನು ಕಾಣಬಹುದಾಗಿದೆ. ಅದೇ ರೀತಿಯಾಗಿ ಪಾಲಿಕೆಯ ಕಾರ್ಯ ಕಲಾಪಗಳನ್ನು ನೋಡುವುದಾದರೆ ಇಲ್ಲಿರುವ ಪ್ರತಿಯೊಬ್ಬ ಮಹಿಳೆಯು ತನ್ನ ವಾರ್ಡುಗೆ ಸಂಬಂಧಪಟ್ಟ ವಿಷಯದಲ್ಲಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿರುವುದನ್ನ ಕಾಣಬಹುದಾಗಿದೆ.

ಅಲ್ಲದೆ ಮಹಿಳಾ ಪ್ರತಿನಿಧಿಗಳು ತಾನೊಬ್ಬ ಮಹಿಳೆ ಎಂದು ದೃತಿಗೆಡದೆ ಪುರುಷರಿಗೆ ಸಮಾನವಾಗಿ ಚರ್ಚೆ ಮಾಡುವುದು, ಅಭಿಪ್ರಾಯ ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ. ಅಭಿವೃದ್ಧಿ ಕಾರ್ಯದ ಮೇಲ್ವಿಚಾರಣೆಯಲ್ಲೂ ಸ್ವತಂತ್ರರಾಗಿರುತ್ತಾರೆ. ಹೆಚ್ಚಿನ ಮಹಿಳಾ ಸದಸ್ಯರು ವಿವಾಹಿತರಾಗಿದ್ದರು ಕುಟುಂಬವನ್ನು ಹೊಂದಿದ್ದು ಮನೆ ಮತ್ತು ಪಾಲಿಕೆಯ ಕೆಲಸ ಕಾರ್ಯಗಳನ್ನು ಜೊತೆಜೊತೆಗೆ ಮಾಡುತ್ತಾ ಗೆಲುವನ್ನು ಸಾಧಿಸಿರುವುದು ನಮಗೆಲ್ಲರಿಗೂ ಖುಷಿಯ ವಿಷಯವಾಗಿದೆ. ಈ ಮೂಲಕ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಹಿಳಾ ಸಬಲೀಕರಣ ಪ್ರಾತಿನಿಧ್ಯವನ್ನು ಗುರುತಿಸಬಹುದಾಗಿದೆ.

ಇದರ ಜೊತೆಗೆ ಕೆಲವು ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಕೆಲವರಲ್ಲಿ ಅಂಜಿಕೆಯ ಸ್ವಭಾವ, ಪಕ್ಷಕ್ಕೆ ಮಹತ್ವ ಕೊಡುವುದು, ಕುಟುಂಬಕ್ಕೆ ಮಹತ್ವ ಕೊಡುವುದು, ಮೊದಲಾದ ವಿಚಾರಗಳನ್ನು ಗುರುತಿಸಲಾಗಿದೆ ಸಾಮಾಜಿಕವಾಗಿ ವೈಯಕ್ತಿಕವಾಗಿ ಕೆಲ ಮಹಿಳಾ ಪ್ರತಿನಿಧಿಗಳು ವಾರ್ಡಿನ ಕಾರ್ಯ ಚಟುವಟಿಕೆಗಳಿಗೆ ಪೂರ್ಣವಾದ ಮಹತ್ವವನ್ನು ಕೊಡದೆ ಇರುವುದನ್ನು ಗಮನಿಸಬಹುದಾಗಿದೆ.

ಏನೇ ಭಿನ್ನಾಭಿಪ್ರಾಯಗಳಿದ್ದರೂ ಇಂದಿನ ಆಧುನಿಕ ರಾಜಕೀಯದ ಎಲ್ಲಾ ಸ್ತರದಲ್ಲಿಯೂ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಪ್ರತಿಸ್ಪರ್ಧಿಯಾಗಿ ಬರುತ್ತಿರುವುದನ್ನು ಗುರುತಿಸಲಾಗುತ್ತದೆ. ನಗರ ಪ್ರದೇಶದಲ್ಲಿ ಮಹಿಳೆಯರು ರಾಜಕೀಯದಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಿರುವುದನ್ನು ಕಾಣಬಹುದಾಗಿದೆ.

ಚುನಾಯಿತ ಪ್ರತಿನಿಧಿ ಆಗಿರುವ ಪ್ರತಿಯೊಬ್ಬ ಮಹಿಳೆಯರು ಸಮಾಜದ ಬದಲಾವಣೆ, ಆರ್ಥಿಕ ಸುಧಾರಣೆ, ರಾಜಕೀಯ ಕಾರ್ಯಾಚರಣೆಯಲ್ಲಿ ಮಹಿಳೆಯರ ಪಾತ್ರವು ಸಿಂಹಪಾಲು ಪಡೆದಿರುವುದನ್ನು

ಗುರುತಿಸಬಹುದು ಪುರುಷನಿಗೆ ಸರಿಸಮಾನವಾಗಿ ರಾಜಕೀಯ ಅಧಿಕಾರವನ್ನು ಹಿಡಿಯುವಲ್ಲಿ ಸಶಕ್ತವಾಗಿರುವುದನ್ನು ಕಂಡುಕೊಳ್ಳಬಹುದು.

ಮನೆಯ ಒಳಗಿನ ಕೆಲಸ ಕಾರ್ಯಗಳ ಜೊತೆಜೊತೆಗೆ ಮನೆಯ ಹೊರಗಿನ ಕೆಲಸ-ಕಾರ್ಯಗಳಲ್ಲಿಯೂ ದುಡಿದರೂ ಕೂಡಾ ಪುರುಷರಿಗೆ ಸಮಾನವಾಗಿ ಸಂಬಳ ದೊರಕದೆ ಇರುವುದು ಒಂದು ವಿಪರ್ಯಾಸವೇ ಆಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಪ್ರತಿನಿಧಿಗಳು ತಿಳಿಸಿರುವ ಪ್ರಕಾರ ರಾಜಕೀಯ ಪ್ರಾತಿನಿಧ್ಯವನ್ನು ಪಡೆದಿರುವ ಮಹಿಳೆಯರು ತಮ್ಮ ಅಧಿಕಾರವನ್ನು ಪುರುಷ ಪ್ರಾಧ್ಯಾನತೆಯಲ್ಲಿ ಚಲಾಯಿಸಿ ತಮಗೆ ಧಕ್ಕಬೇಕಾಗಿರುವ ಸಮಾನತೆಯನ್ನು ಪಡೆದುಕೊಳ್ಳುತ್ತಿರುವ ಬಗೆಗೆ ತಿಳಿದಿ ಬರುತ್ತದೆ ರಾಜಕೀಯ ಪ್ರತಿನಿಧಿಕರಣದಿಂದ ಮೊದಲಿಗೆ ನಾವು ಸಾಮಾಜಿಕ ಸ್ಥಾನಮಾನವನ್ನು ಸಮಾಜದಲ್ಲಿ ಪಡೆದುಕೊಳ್ಳಲು ಇದರಿಂದ ಮಾತ್ರ ಸಾಧ್ಯ ಎಂಬುದನ್ನು ತಿಳಿದಿಕೊಂಡೆವು. ಎಂದಿರುವುದನ್ನು ಅಧ್ಯಯನ ಗುರುತಿಸುತ್ತದೆ.

ಪ್ರಸ್ತುತ ಅಧ್ಯಯನವು ಆಡಳಿತದಲ್ಲಿ ಮಹಿಳೆಯರ ಸಹಭಾಗಿತ್ವದ ಅವಶ್ಯಕತೆಯನ್ನು ಎತ್ತಿ ತೋರಿಸಿದೆ. ಹಾಗೂ ಮಹಿಳೆಯ ಪಾಲುಧಾರಿಕೆಯೊಂದಿಗೆ ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಬದಲಾವಣೆಗಳು ಸಾಧ್ಯ ಎಂಬುದು ಸ್ಪಷ್ಟವಾಗಿದೆ.

೫.೫ ಗ್ರಂಥಪರಾಮರ್ಶನೆ

1) ಅಮರ್‌ಜೀವ,ಶಶಿ,ಮಲ್ಲಿಕ್‌ದಶನ್(2014).ಎಂಪವರಿಂಗ್ ವಿಮೆನ್ ದಿ ಇಂಡಿಯನ್ ಸೋಶಿಯೋ–ಕಲ್ಚರಲ್ ಸಿನಾರಿಯೊ.ದೆಹಲಿ; ಪ್ರಗುಣ ಪಬ್ಲಿಕೇಶನ್

2) ಅರೆ ತಿಮ್ಮೆ ಗೌಡ, ಧನುಷ್ S.T(2014). ಕಾನ್‌ಸ್ಟಿಟ್ಯೂಶನ್ ಆಫ್ ಇಂಡಿಯಾ "ಗೋಲ್ಸ್ ಆಂಡ ಎಚಿವ್ ಮೆಂಟ್". ಬೆಂಗಳೂರು: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್

3) ಕಬ್ಬೂರಿ ಎಸ್.ಕೆ(2014).ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾಯ್ದೆ 1993. ಬೆಂಗಳೂರು: ವೀಣಾ ಪಬ್ಲಿಕೇಶನ್

4) ಕಮಲಮಿತ್ರ(2010).ಡೆಮಾಕ್ರಾಟಿಕ್ ಡಿ ಸೆಂಟ್ರಲ್ಯಾಶೇಷನ್ ಇನ್ ರೂರಲ್ ವೆಸ್ಟ್ ಬೆಂಗಾಲ್–ಪರ್‌ಸ್‌ಪೆಕ್ಟೀವ್ ಆಂಡ್ ಪ್ರಾಕ್ಟೀಸ್; ಕೋಲ್ಕತ್ತ

5) ಖಾರಿ ಡಿ ಎಸ್ (2009) ವಿಮೆನ್ ಎಂಪರ್‌ಮೆಂಟ್ ಇನ್ ಇಂಡಿಯಾ. ನ್ಯೂಡೆಲ್ಲಿ; ಎ.ಎಲ್.ಪಿ.ಬುಕ್ಸ್

6) ಗಾಯತ್ರಿ(1999). ಮಹಿಳೆಯ ಬಿಡುಗಡೆಯ ಹಾದಿಯಲ್ಲಿ. ಬೆಂಗಳೂರು; ನವ ಕರ್ನಾಟಕ ಪ್ರಕಾಶನ

7) ಚಂದ್ರಶೇಖರ್ (2009) ಅಭಿವೃದ್ಧಿ ಪಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು. ಬೆಂಗಳೂರು; ಆಸನ ಪಬ್ಲಿಕೇಶನ್

8) ಚಂದ್ರಶೇಖರ್ (2013) ಗ್ರಾಮೀಣಾಭಿವೃದ್ಧಿ, ಗ್ರಾಮಸಭೆ, ಗ್ರಾಮಪಂಚಾಯತ್‌ನ ಪಾತ್ರ ಭದ್ರಾವತಿ; ವಿನುತ ಪಬ್ಲಿಕೇಶನ್.

9) ಜೋಶಿ, ನರ್ವಾಣಿ(2002). ಪಂಚಾಯತ್ ರಾಜ್ ಇನ್ ಇಂಡಿಯಾ ಎಮರ್ಜಿಂಗ್ ಟ್ರೆಂಡಸ್ಸ್ ಎಕ್ರಾಸ್ ದಿ ಸ್ಟೇಟ್ಸ್. ಜೈಪುರ್: ರಾವಲ್ ಪಬ್ಲಿಕೇಶನ್

10) ದೇವೆಗೌಡ (2005) ಭಾರತ ಸಂವಿಧಾನ. ಮೈಸೂರು; ಚೇತನಾ ಬುಕ್ ಹೌಸ್

11) ದೇವಕಿ (1992) ವಿಮೆನ್ ನ್ಯೂ ವರ್ಷನ್ ಆಫ್ ಲೀಡರ್ ಶಿಪ್ ಎ ಪ್ರಸಂಟೇಶನ್ ಎಟ್ ಗ್ಲೋಬಲ್ ಪೋರಮ್, ಡುಬ್ಲಿನ್

12) ಪೂಜಾರಿ ಚಂದ್ರ (2008). ಸಂಶೋಧನಾ ಜವಾಬ್ದಾರಿ. ಹಂಪಿ; ಪ್ರಸರಾಂಗ ಕನ್ನಡ ವಿಶ್ವ ವಿದ್ಯಾನಿಲಯ

13) ಪೂಜಾರಿ ಚಂದ್ರ (2009) ಸಮಾಜ ಸಂಶೋದನ ಹಂಪಿ: ಪ್ರಸರಾಂಗ ಕನ್ನಡ ವಿಶ್ವ ವಿದ್ಯಾನಿಲಯ

14) ಪೂಜಾರಿ ಚಂದ್ರ(2001).ದೇಶೀಯತೆಯ ನೆರಳಿನಲ್ಲಿ.ಹಂಪಿ:ಪ್ರಸರಾಂಗ ಕನ್ನಡ ವಿಶ್ವವಿದ್ಯಾನಿಲಯ

15) ಪೂಜಾರಿ ಚಂದ್ರ(2004).ಜನಾಯೋಜನೆ ಹೈದರಾಬಾದ್ ಕರ್ನಾಟಕದ ಅನುಭವಗಳು. ಪ್ರಸರಾಂಗ ಕನ್ನಡ ವಿಶ್ವ ವಿದ್ಯಾನಿಲಯ

16) ಭಾರತಿ (2011). ಮಹಿಳೆ ಮತ್ತು ಸಾಧನೆಯ ಹಾದಿ. ಮೈಸೂರು:ವಾಚಸ್ಪತಿ ಪ್ರಕಾಶನ
17) ಬೋರಲಿಂಗಯ್ಯ ಹಿ.ಚಿ, ವೆಂಕಟೇಶ್ ಮಲ್ಲಾಪುರ(2007):ಙಂಸುವರ್ಣ ಕರ್ನಾಟಕ ಅಭಿವೃದ್ಧಿ ಪಥ.ಹಂಪಿ ವಿಶ್ವವಿದ್ಯಾಲಯ: ಪ್ರಸರಾಂಗ
18) ಬಿಸ್ವಂತ್(2008).ಪೀಪಲ್ಸ್ ಪಾರ್ಟಿಸಿಪೇಶನ್ ಇನ್ ವೆಸ್ಟ್ ಬೆಂಗಾಲ್ ಪಂಚಾಯತ್ ಸಿಸ್ಟಮ್. ಕೊಲ್ಕತ್ತಾ:ಮಿತ್ರಂ ಪಬ್ಲಿಕೇಶನ್
19) ಮೈಥಿಲಿ ವಿಶ್ವನಾಥ್(1994).ವಿಮೆನ್ ಆಂಡ್ ಸೊಸೈಟಿ. ಹೆದ್ರಾಬಾದ್; ರೂಪ ಬುಕ್ ಲಿಮಿಟೆಡ್
20) ಮಿನ್ನಿ(2010).ವಿಮೆನ್ ಎಂಪವರ್ ಮೆಂಟ್ ಥ್ರೂ ಪಂಚಾಯತ್ ರಾಜ್ ಇನ್‌ಸ್ಟಿಟ್ಯೂಶನ್.ನ್ಯೂಡೆಲ್ಲಿ: ಕಾನ್ಸೆಪ್ಟ್ ಪಬ್ಲಿಶಿಂಗ್
21) ಮಿಶ್ರ ಕವಿತಾ (2006). ವಿಮೆನ್ ರೋಲ್ ಇನ್ ಪೊಲಿಟಿಕ್ಸ್ ಇನ್ ಮಾರ್ಡನ್ ವರ್ಲ್ಡ್. ನ್ಯೂಡೆಲ್ಲಿ; ಒಮೆಗಾ ಪಬ್ಲಿಕೇಶನ್
22) ಮಹಾದೇವ ಎಮ್(2012).ಸ್ಥಳೀಯ ಸರಕಾರಗಳು. ಮೈಸೂರು.ಸಂಜೀವ ಎಸೋಸಿಯೇಟ್ಸ್
23) ಹೆಗ್ಗಡೆ ಒಡೆಯರ್, ಶಿವಚಿತ್ತಾಪ್ಪ ಕೆ(2007).ಸ್ವ ಸಹಾಯ ಸಂಘಗಳು ಮತ್ತು ಮಹಿಳಾ ಆರ್ಥಿಕ ಸಬಲೀಕರಣ. ಮೈಸೂರು: ಲಕ್ಷ್ಮೀ ಪ್ರಿಂಟಿಂಗ್ ಹೌಸ್
24) ರಾಚಪ್ಪಾಜಿ.ಎಮ್(2011).ಮಹಿಳಾ ಸಬಲೀಕರಣ ಮತ್ತು ರಾಜಕೀಯ ಪ್ರಾತಿನಿಧಿತ್ವ.ಮೈಸೂರು:ವಾಚಸ್ಪತಿ ಪ್ರಕಾಶನ
25) ರಾಮನ್‌ಬಿ.ಎಸ್(2004).ಕಾನ್‌ಸ್ಟೀಟ್ಯೂಶನ್‌ಆಫ್‌ಇಂಡಿಯಾ,ಹ್ಯುಮನ್‌ರೈಟ್ಸ್,ಎಂಪವರ್‌ಮೆಂಟ್. ಮಂಗಳೂರು: ಯುನೈಟೈಡ್ ಪಬ್ಲೀಶರ್
26) ರಂಜನಾ ಕುಮಾರ್(1992).ವಿಮೆನ್‌ಇಸ್‌ಡಿಪಿಸನ್ ಮೇಕಿಂಗ್ ನ್ಯೂಡೆಲ್ಲಿ: ವಿಕಾಸ್ ಪಬ್ಲಿಶಿಂಗ್ ಹೌಸ್
27) ರೈ ವಿವೇಕ,ಇತರರು(2010).ಮಂಗಳೂರು ದರ್ಶನ.ಮಂಗಳೂರು: ನಗರಾಭಿವೃದ್ಧಿ ಪ್ರಾಧಿಕಾರ 2010
28) ಸಹನಾ ಠಾಕೂರ್(2010).ಇಂಡಿಯನ್ ವಿಮೆನ್ ಇನ್ ಮಾರ್ಡನ್ ಸೊಸೈಟಿ.ನ್ಯೂಡೆಲ್ಲಿ:ಗೌರವ್‌ಬುಕ್ ಡಿಸ್ಟ್ರಿಬ್ಯೂಟರ್
29) ವಾಣಿಶ್ರೀ(2011).ಕೆಪಾಬಿಲಿಟಿ ಆಫ್ ಎಲೆಕ್ಟೆಡ್ ವಿಮೆನ್ ರೆಪ್ರಸೆಂಟೇಟಿವ್ ಆನ್ ಜೆಂಡರ್ ಇಶ್ಯೂಸ್ ಇನ್ ಗ್ರಾಸ್ ರೂಟ್ ಗೌವರ್‌ನೆಸ್ಸ್. ಕಾನ್ಸೆಪ್ಟ್ ಪಬ್ಲಿಶಿಂಗ್ ಹೌಸ್
30) ವಿಜಯಲಕ್ಷ್ಮೀ ದುರ್ಗಾ(2013).ಪೊಲಿಟಿಕಲ್ ಥಿಯರಿ ಆ್ಯಂಡ್ ಗೌವರ್ನಮೆಂಟ್ ಬೆಂಗಳೂರು: ದಿಪಾಟ್‌ಮೆಂಟ್ ಆಫ್ ಫ್ರೀ ಯೂನಿವರ್‌ಸಿಟಿ

ಅಂತರ್ಜಾಲ ತಾಣಗಳು

1) Mahesh Arora.(2014).Constitution of India / local Government. Retrieved from http// www. Ambc.com
2) Local self Govt(2015). Retrived from http// grad stock. Com
3) Mangalore City Corporation (2016) Retrived from http// Wikipedia.org
4) Women political participation in India(7 June 2017).Retrived from http// in.wikipedia.org
5) Women in Government(8 Jun 2017).Retrived from http// en. Wikipedia.org
6) Pooja Mandal(2016). Essay on role of Women in politics. Indian journal, Retrived from www.your artical library.com
7) Jackimo Taniya(2017). Empowering women Parshds in Deharadoon Muncipal Counsil, 52(23), Retrived from www.epw.in iproxy.inflibnet.ac.in

ವರದಿಗಳು:-

ಮಂಗಳೂರು ಮಹಾನಗರ ಪಾಲಿಕೆಯ ವಾರ್ಷಿಕ ವರದಿ.೨೦೧೪, ೨೦೧೫,೨೦೧೬,೨೦೧೭

ಅನುಬಂಧ ೨-ಪ್ರಶ್ನಾವಳಿ

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳ ಪಾತ್ರ – ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇದರ ಎಂ.ಫಿಲ್ ಪದವಿಗಾಗಿ ರಚಿಸಲ್ಪಟ್ಟ ಪ್ರಶ್ನಾವಳಿ

ಸ್ಥಳ:

ದಿನಾಂಕ:

ಸಂಶೋಧಕರು: ವಿದ್ಯಾ
ಅಭಿವೃದ್ಧಿ ಅಧ್ಯಯನ ವಿಭಾಗ
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ ಮಂಗಳೂರು

ವೈಯಕ್ತಿಕ ಮಾಹಿತಿ

ಹೆಸರು :-

ವಾರ್ಡ್‌ನ ಹೆಸರು :-

ವಯಸ್ಸು :- ಅ) ೩೦ಕ್ಕಿಂತ ಕಡಿಮೆಆ) ೩೦ ರಿಂದ ೪೦
ಇ) ೪೦ಕ್ಕಿಂತ ಮೇಲು

ವೈವಾಹಿಕ ಸ್ಥಿತಿ :- ವಿವಾಹಿತೆ/ಅವಿವಾಹಿತೆ/ವಿಧವೆ

ತಂದೆ / ಗಂಡ / ಪೋಷಕರ ಹೆಸರು:-

ಧರ್ಮ :- ಹಿಂದೂ / ಮುಸ್ಲಿಂ / ಕ್ರಿಶ್ಚಿಯನ್ / ಇತರ

ಜಾತಿ / ಉಪಜಾತಿ :-

ಶಿಕ್ಷಣ :- ಅನರಕ್ಷರಸ್ತ/ ಪ್ರಾಥಮಿಕ/ ಪೌಢ
ಪದವಿಪೂರ್ವ/ಪದವಿ/ಸ್ನಾತಕೋತ್ತರ

ವೃತ್ತಿ :-

ವಾರ್ಷಿಕ ಆದಾಯ :-ಅ) ೧ಲಕ್ಷಕ್ಕಿಂತ ಕಡಿಮೆಆ) ೧-೨ ಲಕ್ಷ
ಇ) ೨-೪ ಲಕ್ಷಈ) ೪ ಲಕ್ಷಕ್ಕಿಂತ ಮೇಲೆ

ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಮಹಿಳಾ ಸದಸ್ಯರ ಅರಿವಿಗೆ ಸಂಬಂಧಿಸಿದ ಪ್ರಶ್ನೆಗಳು

೧. ನಿಮಗೆ ಸ್ಥಳೀಯ ಸರ್ಕಾರ ವ್ಯವಸ್ಥೆಯ ಬಗ್ಗೆ ಅರಿವಿದೆಯೇ?

ಅ) ಹೌದು ಆ) ಇಲ್ಲ ಇ) ಸ್ವಲ್ಪ ಮಟ್ಟಿಗೆ

೨. ಸಂವಿಧಾನಿಕ ಸವಲತ್ತುಗಳ ಬಗ್ಗೆ ನಿಮಗೆ ತಿಳಿದಿದೆಯೇ?

ಅ) ಹೌದು ಆ) ಇಲ್ಲ

೩. ನಿಮ್ಮ ವಾರ್ಡ್‌ನ ಜನರಿಗೆ ಸರಕಾರದ ಸವಲತ್ತುಗಳ ಬಗ್ಗೆ ಅರಿವಿದೆಯೇ?

ಅ) ಹೌದು ಆ) ಇಲ್ಲ ಇ) ಅದರ ಬಗ್ಗೆ ನನಗೆ ಗೊತ್ತಿಲ್ಲ

೪. ನಿಮ್ಮ ವಾರ್ಡ್‌ನ ಜನರಿಗೆ ಸರಕಾರದ ಸವಲತ್ತುಗಳ ಬಗ್ಗೆ ಅರಿವನ್ನು ಮೂಡಿಸಲು ನೀವು ಯಾವ ರೀತಿ ಸಹಾಯ ಮಾಡುತ್ತೀರಿ?

ಅ) ಸಭೆಯನ್ನು ಕರೆದು ಆ) ಕಾರ್ಯಕ್ರಮದ ಮೂಲಕ ಇ) ಮನೆ ಬಾಗಿಲಿಗೆ ತೆರಳಿ

೫. ತಮಗೆ ಪುರುಷರಿಗೆ ಸಮಾನವಾದ ಹಕ್ಕು ಅಧಿಕಾರ ಪಾಲಿಕೆಯಲ್ಲಿ ಇದೆ ಎಂಬುದನ್ನು ಅರಿತಿದ್ದೀರಾ?

ಅ) ಹೌದು ಆ) ಇಲ್ಲ

೬. ನಗರ ಪಾಲಿಕೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಪ್ರಯತ್ನಿಸಿದ್ದೀರಾ?

ಅ) ಹೌದು ಆ) ಇಲ್ಲ

೭. ನಿಮ್ಮ ಪ್ರಕಾರ ಮಹಿಳೆಯರಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯವನ್ನು ನೀಡದೆ ಇದ್ದರೂ ಅವರು ರಾಜಕೀಯದಲ್ಲಿ ಭಾಗವಹಿಸಲು ಅವಕಾಶ ಇದೆಯೇ?

ಅ) ಅವಕಾಶವಿದೆಆ) ಅವಕಾಶವಿಲ್ಲ

೮. ನಿಮಗೆ ಮಹಿಳಾ ಮೀಸಲಾತಿಯ ಅರಿವು ಇದೆಯೇ?

ಅ) ಸ್ವಲ್ಪ ಮಟ್ಟಿಗೆ ಆ) ಗೊತ್ತಿಲ್ಲ ಇ) ಭಾಗಶಃ

ಆಡಳಿತ ಅನುಭವ

೯. ತಾವು ಚುನಾವಣೆಯಲ್ಲಿ ಆಯ್ಕೆಯಾದುದು ಹೇಗೆ?

ಅ) ಜನ ಬೆಂಬಲದಿಂದ ಆ) ಕುಟುಂಬದ ಬೆಂಬಲದಿಂದ

ಇ) ಮಹಿಳಾ ಮೀಸಲಾತಿ

೧೦. ಚುನಾವಣಾ ಪೂರ್ವದಲ್ಲಿ ನೀವು ಯಾವುದಾದರೂ ರಾಜಕೀಯ ಪಕ್ಷದ ಸದಸ್ಯರಾಗಿದ್ದೀರಾ?

ಅ) ಹೌದು ಆ) ಇಲ್ಲ

೧೧. ನೀವು ಯಾವುದಾದರೂ ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿದ್ದೀರಾ?

ಅ) ಹೌದು ಆ) ಇಲ್ಲ

೧೨. ನಿಮ್ಮ ಸದಸ್ಯತ್ವ ಆಡಳಿತ ಅನುಭವವನ್ನು ಪಡೆಯಲು ಹೇಗೆ ಸಹಕಾರಿಯಾಗಿದೆ?

೧೩. ಆಡಳಿತ ಅನುಭವವನ್ನು ಪಡೆಯುವ ಸಲುವಾಗಿ ಯಾವುದಾದರೂ ತರಬೇತಿ ಸಂಸ್ಥೆಯ ಉಪಯೋಗವನ್ನು ಪಡೆದಿದ್ದೀರಾ?

ಅ) ಪಡೆದಿದ್ದೇವೆ   ಆ) ಪಡೆದಿಲ್ಲ

೧೪. ಆಡಳಿತ ಅನುಭವವನನ್ನು ಹೆಚ್ಚಿಸಲು ಸರಕಾರ ನಿಮಗೆ ಹೇಗೆ ಸಹಾಯ ಮಾಡುತ್ತದೆ.

೧೫. ನಿಮ್ಮ ಹಿರಿಯರಿಂದ ಆಡಳಿತದ ಅನುಭವ ಸಲಹೆಯನ್ನು ಪಡೆದಿರುವಿರಾ?

ಅ) ಖಂಡಿತವಾಗಿಯೂ   ಆ) ಸ್ವಲ್ಪ ಮಟ್ಟಿಗೆ   ಇ) ಪಡೆದೇ ಇಲ್ಲ

೧೬. ಆಡಳಿತಾತ್ಮಕ ಸಲಹೆಗಾಗಿ ಯಾರನ್ನು ಅವಲಂಬಿಸುತ್ತೀರಾ?

ಅ) ಮನೆಯ ಸದಸ್ಯರು   ಆ) ಪಾಲಿಕೆಯ ಸದಸ್ಯರು ಇ) ಪಾಲಿಕೆಯ ಹಿರಿಯರು

೧೭. ಮಹಿಳೆಯರು ಕ್ರಿಯಾತ್ಮಕವಾಗಿ ಪಾಲಿಕೆಯ ಸಭೆಗಳಲ್ಲಿ ಭಾಗವಹಿಸುತ್ತಾರೆಂದು ನಿಮಗೆ ಅನಿಸುತ್ತದೆಯೇ?

ಅ) ಹೌದು   ಆ) ಇಲ್ಲ

<u>ಕಾರ್ಯವೈಖರಿ :</u>

೧೮. ತಾವು ವಾರ್ಡ್‌ನ ಸದಸ್ಯರಾಗಿ ಕೈಗೊಂಡ ಬಹುಮುಖ್ಯ ಕಾರ್ಯಗಳೇನು?

೧೯. ನೀವು ಯಾವುದಾದರೂ ಸ್ಥಾಯಿ ಸಮಿತಿಗೆ ಸದಸ್ಯರಾಗಿದ್ದೀರಾ?

ಅ) ಹೌದು   ಆ) ಇಲ್ಲ

೨೦. ಹಾಗಾದರೆ ಯಾವುದು?

೨೧. ಪಾಲಿಕೆಗೆ ಎಷ್ಟು ದಿನಗಳಿಗೊಮ್ಮೆ ಭೇಟಿ ನೀಡುವಿರಿ?

ಅ) ಪ್ರತೀ ದಿನ ಆ) ತಿಂಗಳಿಗೊಮ್ಮೆ   ಇ) ೬ ತಿಂಗಳಿಗೊಮ್ಮೆ

೨೨. ಪಾಲಿಕೆಯ ಸಭೆಗಳಿಗೆ ತಪ್ಪದೆ ಹಾಜರಾಗುತ್ತೀರಾ?

ಅ) ಹೌದು   ಆ) ಇಲ್ಲ

೨೩. ವಾರ್ಡ್‌ನ ಜನರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತೀರಾ?

ಅ) ಮನೆ ಬಾಗಿಲಿಗೆ ಹೋಗಿ   ಆ) ಕಚೇರಿಗೆ ಕರೆಯಿಸಿ   ಇ) ಆಪ್ತ ಸಹಾಯಕರ ಮೂಲಕ

೨೪. ನಿಮ್ಮ ಕಾರ್ಯಕ್ರಮಗಳಿಂದಾಗಿ ಯಾವ ಯಾವ ಸಮಸ್ಯೆಗಳನ್ನು ಪರಿಹರಿಸಿದ್ದೀರಾ?

ಅ) ಸಾಮಾಜಿಕ ಆ) ಆರ್ಥಿಕ   ಇ) ಇತರ

೨೫. ಈ ಕೆಳಗಿನವುಗಳ ಅಭಿವೃದ್ಧಿಗಾಗಿ ನೀವು ಕೈಗೊಂಡ ಕಾರ್ಯಗಳೇನು?

೧) ಮಹಿಳೆಯರಿಗಾಗಿ

೨) ವೃದ್ಧರಿಗಾಗಿ

೩) ಮಕ್ಕಳಿಗಾಗಿ

೪) ಎಸ್‌ಸಿ/ಎಸ್‌ಟಿ ಗಳಿಗಾಗಿ

೫) ಅಲ್ಪಸಂಖ್ಯಾತರಿಗಾಗಿ

೨೬. ಕುಡಿಯಲು ನೀರಿನ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ನಿಮ್ಮ ಪಾತ್ರ.

೨೭. ಕಸ ವಿಲೇವಾರಿಗೆ ಸಂಬಂಧಿಸಿದಂತೆ ನಿಮ್ಮ ವಾರ್ಡ್‌ನಲ್ಲಿ ನೀವು ಕೈಗೊಂಡ ಕ್ರಮಗಳು

೨೮. ಸಾರ್ವಜನಿಕ ಮಾರುಕಟ್ಟೆಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಮ್ಮ ಪಾತ್ರ.

೨೯. ಮಹಿಳೆಯರ ಆರ್ಥಿಕತೆ ಸುಧಾರಿಸಲು ಪ್ರಯತ್ನಿಸುತ್ತೀರ?

ಅ) ಹೌದು ಆ) ಇಲ್ಲ

೩೦. ಆರೋಗ್ಯ ಸಂಬಂಧಿ ಸಮಸ್ಯೆಗಳ ಬಗ್ಗೆ ಜನರಲ್ಲಿ ಹೇಗೆ ಅರಿವನ್ನು ಮೂಡಿಸುತ್ತೀರಿ.

ಅ) ಸಭೆಗಳನ್ನು ನಡೆಸುವುದು ಆ) ಆರೋಗ್ಯ ಶಿಬಿರಗಳನ್ನು ನಡೆಸುವುದು ಇ) ಇತರ

೩೧. ಸರಕಾರದ ಆರ್ಥಿಕ ಅಭಿವೃದ್ಧಿ ಕಾಯರ್ಕಮಗಳನ್ನು ನಿಮ್ಮ ವಾರ್ಡ್‌ನ ಅಭಿವೃದ್ಧಿಗೆ ಹೇಗೆ ಬಳಸುತ್ತೀರಿ.

<u>ಮಹಾನಗರ ಪಾಲಿಕೆಯ ಮಹಿಳಾ ಸದಸ್ಯರು ತಮ್ಮ ಪಾತ್ರ ನಿರ್ವಹಣೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳು</u>

೩೨. ಪ್ರತಿನಿಧಿಯಾದ ಮೇಲೆ ನಿಮ್ಮ ಮಾನಸಿಕ ಸ್ಥಿತಿ ಏರುಪೇರಾಗಿದೆ?

ಅ) ಸ್ಥಿರವಾಗಿದೆ ಆ) ಕಿರಿಕಿರಿ ಉಂಟಾಗಿದೆ ಇ) ಖುಷಿಯಾಗಿದೆ

೩೩. ಪಾಲಿಕೆಯ ನಿರ್ವಹಣೆಯಲ್ಲಿ ಸಮುದಾಯದ ಗುಂಪುಗಳ ಹಾಗೂ ಜಾತಿ ರಾಜಕೀಯದಿಂದ ನಿಮಗೆ ವಾರ್ಡ್‌ನ ಕಾರ್ಯಗಳನ್ನು ಮಾಡಲು ತೊಂದರೆ ಆಗುತ್ತಿದೆಯೇ?

ಅ) ಹೌದು ಆ) ಇಲ್ಲ

೩೪. ನಿಮ್ಮ ಅಭಿಪ್ರಾಯದಲ್ಲಿ ಪಾಲಿಕೆಯ ಮಹಿಳಾ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳಾವುವು?

ಅ) ವೈಯಕ್ತಿಕ ಸಮಸ್ಯೆ ಆ) ಲಿಂಗ ಭೇದದ ಸಮಸ್ಯೆ ಇ) ಜಾತಿ/ಧರ್ಮದ ಸಮಸ್ಯೆ

೩೫. ಪ್ರತಿನಿಧಿಯಾಗಿ ಆಯ್ಕೆಯಾದ ಮೇಲೆ ಒಬ್ಬ ತಾಯಿಯಾಗಿ ನಿಮ್ಮ ಜವಾಬ್ದಾರಿ ಸರಿಯಾಗಿ ನಿರ್ವಹಿಸುತ್ತಿದ್ದೀರಾ?

ಅ) ನಿರ್ವಹಿಸಿದ್ದೇನೆ ಆ) ನಿರ್ವಹಿಸಿಲ್ಲ

೩೬. ನೀವು ಮಹಿಳೆಯಾದ ಕಾರಣ ನಿಮಗೆ ಅಧಿಕಾರಿಗಳ ತಪ್ಪು ಮಾಹಿತಿ ಅಥವಾ ಅರೆ ಮಾಹಿತಿಯನ್ನು ನೀಡುತ್ತಾರೆ ಎಂದು ಭಾವಿಸುವಿರಾ?

ಅ) ಹೌದು ಆ) ಇಲ್ಲ

೩೭. ಸಭೆಗಳು ತೀರ್ಮಾನವಾದ ವಿಷಯ ನಿಮಗೆ ಸರಿಕಾಣದಿದ್ದಲ್ಲಿ ಅದನ್ನು ವಿರೋಧಿಸುವಿರಾ?

ಅ) ವಿರೋಧಿಸುತ್ತೇನೆ ಆ) ವಿರೋಧಿಸುವುದಿಲ್ಲ

೩೮. ಪಾಲಿಕೆಯ ಸಭೆಗಳಲ್ಲಿ ನಿಮಗೆ ಪುರುಷರಷ್ಟೆ ಗೌರವ ಸ್ಥಾನಮಾನಗಳು ಸಿಗುತ್ತದೆ ಎಂದು ಅನಿಸಿದೆಯೇ?

ಅ) ಸಿಗುತ್ತಿದೆ ಆ) ಸಿಗುತ್ತಿಲ್ಲ ಇ) ಸಿಗಬೇಕಾಗಿದೆ

೩೯. ನೀವು ಸಭೆಗಳಲ್ಲಿ ನಿಮ್ಮ ವಾರ್ಡ್‌ನ ಸಮಸ್ಯೆಗಳನ್ನು ನಿರ್ಭಯವಾಗಿ ಚರ್ಚಿಸುವ ವಾತಾವರಣ ಇದೆ ಎಂದು ಅನ್ನಿಸಿದೆಯೇ?

ಅ) ಹೌದು ಆ) ಇಲ್ಲ

೪೦. ಅಭಿವೃದ್ಧಿ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ನೀವು ಸ್ವತಂತ್ರರೇ?

ಅ) ಹೌದು ಆ) ಇಲ್ಲ

೪೧. ಪಾಲಿಕೆಯ ಸಭೆಗಳಲ್ಲಿ ಭಾಗವಹಿಸಲು ನಿಮಗೆ ಜಾತಿ ಮತ್ತು ಲಿಂಗ ಅಡ್ಡಿ ಮಾಡುತ್ತಿದೆಯೇ?

ಅ) ಹೌದು ಆ) ಇಲ್ಲ

೪೨. ಅಧಿಕಾರವನ್ನು ಚಲಾಯಿಸುವಲ್ಲಿ ನಿಮಗೆ ನಿಮ್ಮ ಸಹ ಸದಸ್ಯರ ಸಹಕಾರ ದೊರೆತಿದೆಯೇ?

ಅ)ದೊರೆತಿದೆ ಆ) ದೊರೆತಿಲ್ಲ

೪೩. ಸ್ಥಳೀಯ ಸರಕಾರ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿದೆಯೇ?

ಅ) ಹೌದು ಆ) ಇಲ್ಲ

೪೪. ಕೌಟುಂಬಿಕ ಸಮಾರಂಭಗಳಲ್ಲಿ ನಿಮ್ಮನ್ನು ಗುರುತಿಸುವ ದೃಷ್ಟಿಕೋನ

೪೫. ನೀವು ಯಾರಿಗೆ ಹೊಣೆಗಾರರಾಗಿದ್ದೀರಾ?

ಅ) ಮತದಾರರಿಗೆ ಆ) ಕುಟುಂಬದ ಸದಸ್ಯರಿಗೆ ಇ) ರಾಜಕೀಯ ಪಕ್ಷಕ್ಕೆ